ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 26 ಮಂಗಳವಾರ 2024

ಸಂಪುಟ: 44 | ಸಂಚಿಕೆ: 337 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಮೊದಲ ಹಂತದ ಚುನಾವಣೆ ನಾಮಪತ್ರ ಸಲ್ಲಿಕೆ ಆರಂಭಕ್ಕೆ ಇನ್ನೆರಡೇ ದಿನ ಬಾಕಿ

ತಮ್ಮ ಸ್ಪರ್ಧಿಗಳ ಅಂತಿಮಗೊಳಿಸದ ಮೂರೂ ಪಕ್ಷಗಳು

- ಬಿಜೆಪಿ ಚಿತ್ರದುರ್ಗ; ಜೆಡಿಎಸ್ ತನ್ನ ಪಾಲಿನ ಮಂಡ್ಯ, ಹಾಸನ, ಕೋಲಾರ; ಕಾಂಗ್ರೆಸ್ ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಬಳ್ಳಾರಿಯ ಅಭ್ಯರ್ಥಿಗಳ ಪ್ರಕಟಿಸಿಲ್ಲ
- ಸ್ವ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ರಣತಂತ್ರ ರೂಪಿಸುತ್ತಿರುವ ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಮಾ.25(ಕೆಎಂಶಿ)– ಕರ್ನಾಟಕದಲ್ಲಿ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣಾ ಅಧಿಸೂಚನೆಗೆ ಕ್ಷಣ ಗಣನೆ ಆರಂಭವಾಗಿದ್ದರೂ, ಮೂರೂ ರಾಜಕೀಯ ಪಕ್ಷಗಳು ಕೆಲವು ಕ್ಷೇತ್ರಗಳಿಗೆ ತಮ್ಮ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ.



ಹಳೆ ಮೈಸೂರು ಭಾಗದ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ನಡೆಯುತ್ತಿರುವ ಚುನಾವಣೆಗೆ ಜೆಡಿಎಸ್ ತನ್ನ ಪಾಲಿನ ಮೂರು ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಇನ್ನೂ ಘೋಷಿಸಿಲ್ಲ. ಕಾಂಗ್ರೆಸ್ ನಾಲ್ಕು ಕ್ಷೇತ್ರಗಳನ್ನು ಹಾಗೇ ಉಳಿಸಿಕೊಂಡಿದೆ, ಬಿಜೆಪಿ ಮಾತ್ರ ಚಿತ್ರದುರ್ಗ ಹೊರತುಪಡಿಸಿ ಉಳಿದೆಲ್ಲಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಎನ್‌ಡಿಎ ಮೈತ್ರಿಕೂಟದಲ್ಲಿರುವ ಜೆಡಿಎಸ್ ಮಿತ್ರ ಪಕ್ಷ ಬಿಜೆಪಿ ಎಷ್ಟು ಸ್ಥಾನಗಳನ್ನು ಬಿಟ್ಟುಕೊಡುತ್ತದೆ ಎಂಬ ಬಗ್ಗೆ ಸುಳಿವಿರಲಿಲ್ಲ. ಇದೀಗ ಆ ಪಕ್ಷಕ್ಕೆ ಒಂದು ಚಿತ್ರಾ ದೊರೆತಿದೆ. ಜೊತೆಗೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದ ಕುಮಾರಸ್ವಾಮಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೂ ಅಭ್ಯರ್ಥಿಗಳ ಹೆಸರನ್ನು ಇನ್ನೂ ಗೌಪ್ಯವಾಗಿ ಇಟ್ಟಿದ್ದಾರೆ. ಇನ್ನು ಕಾಂಗ್ರೆಸ್ 24 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದರೂ ಚಾಮರಾಜನಗರ, ಕೋಲಾರ, ಬಳ್ಳಾರಿ, ಚಿಕ್ಕಬಳ್ಳಾಪುರಕ್ಕೆ ಇನ್ನೂ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಲ್ಲ.

ನಾಲ್ಕರಲ್ಲಿ ಮೂರು ಕ್ಷೇತ್ರಗಳಿಗೆ ಸ್ಥಳೀಯವಾಗಿ ಅಭ್ಯರ್ಥಿ ಆಯ್ಕೆಗೊಂದಲ ಇರುವುದರಿಂದ ಎಐಸಿಸಿ ಈ ನಿರ್ಧಾರವನ್ನು ಕೆಪಿಸಿಸಿಗೇ ಬಿಟ್ಟುಕೊಟ್ಟಿದೆ. ಚಾಮರಾಜನಗರ, ಕೋಲಾರ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯೆ ಪ್ರವೇಶಿಸಿದ್ದರೂ ಗೊಂದಲ ಪರಿಹರಿಸಲು ಸಾಧ್ಯವಾಗಿಲ್ಲ, ನಾಮಪತ್ರ ಸಲ್ಲಿಕೆ ಆರಂಭಕ್ಕೆ (ಮಾ. 28) ಇನ್ನು ಎರಡು ● 9ನೇ ಪುಟಕ್ಕೆ

ಭಾರತದಲ್ಲೇ ಅತ್ಯಧಿಕ ಅಂತರದಲ್ಲಿ ಗೆಲುವು ಸಾಧಿಸುವ ಸಂಸದರಲ್ಲಿ ಯದುವೀರ್ ಒಬ್ಬರಾಗಿರುತ್ತಾರೆ!

- ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ವಿಶ್ವಾಸ
- ಪ್ರತಾಪ್ ಸಿಂಹರಿಗೆ ಮುಂದೆ ಉತ್ತಮ ಅವಕಾಶಗಳು ಲಭಿಸುತ್ತವೆ



ಮಡಿಕೇರಿ, ಮಾ.25–ಭಾರತದಲ್ಲೇ ಅತ್ಯಂತ ಹೆಚ್ಚು ಅಂತರದಿಂದ ಗೆಲುವು ಸಾಧಿಸುವ ಮೊದಲ ಐದು ಸಂಸದರಲ್ಲಿ ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಒಬ್ಬರಾಗಿರುತ್ತಾರೆ ಎಂದು ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪೂರ್ವಿಕರಿಂದ ಇಡೀ ಮೈಸೂರು ಸಂಸ್ಥಾನ ಅಭಿವೃದ್ಧಿಗೊಂಡಿತು. ಬೆಂಗಳೂರು ಕೂಡ ಮಹಾರಾಜರ ಕಾಲದಲ್ಲಿ ಸಾಕಷ್ಟು ಪ್ರಗತಿಯಾಗಿತ್ತು. ಇದೇ ಅಭಿವೃದ್ಧಿಯ ಜೀನ್ ಯದುವೀರ್ ಅವರಲ್ಲೂ ಇದೆ. ಹೀಗಾಗಿಯೇ ಯದುವೀರ್ ಅವರಿಗೆ ಟಿಕೆಟ್ ನೀಡಲಾಗಿದೆ ಎಂದು ಅವರು ಹೇಳಿದರು.

ಪ್ರತಾಪ್ ಸಿಂಹ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಆದರೆ, ಅವರಿಗಿಂತ ಅತ್ಯುತ್ತಮ ಅಭ್ಯರ್ಥಿ ಸಿಕ್ಕಿದ್ದರಿಂದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡಿಲ್ಲ. ಹಾಗೆಂದು ಪ್ರತಾಪ್ ಸಿಂಹ ಉತ್ತಮರಲ್ಲ ಎನ್ನುವುದು ಸರಿಯಲ್ಲ. ಅವರಿಗೆ ಮುಂಬರುವ ದಿನಗಳಲ್ಲಿ ಉತ್ತಮ ಅವಕಾಶಗಳನ್ನು ಪಕ್ಷ ನೀಡಲಿದೆ. ಎಲ್ಲರ ರಾಜಕೀಯ ಜೀವನದಲ್ಲೂ ಬದಲಾವಣೆ ಇದ್ದೇ ಇರುತ್ತದೆ. ಹಾಗೇ ಪ್ರತಾಪ್ ಸಿಂಹ ಅವರ ರಾಜಕೀಯ ಜೀವನದಲ್ಲೂ ಬದಲಾವಣೆಯಾಗಿದೆ. ಈ ವಿಚಾರ ಪ್ರಧಾನಿ ಮೋದಿ ಅವರ ಗಮನಕ್ಕೂ ಬಂದಿದೆ ಎಂದರು.

ನಾಚಿಕೆಗೇಡಿನ ಸಂಗತಿ: ಅನುದಾನದ ವಿಚಾರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ರಾಜ್ಯ ಸರ್ಕಾರ ಕಾನೂನು ಹೋರಾಟ ಆರಂಭಿಸಿರುವುದು ನಾಚಿಕೆಗೇಡಿನ ಸಂಗತಿ. ಯುಪಿಎ ಸರ್ಕಾರ 10 ವರ್ಷದಲ್ಲಿ ನೀಡಿದ ಅನುದಾನಕ್ಕಿಂತ ಹಲವು ಪಟ್ಟು ಹೆಚ್ಚು ಅನುದಾನವನ್ನು ಬಿಜೆಪಿ ಸರ್ಕಾರ ಕಳೆದ 10 ವರ್ಷದಲ್ಲಿ ರಾಜ್ಯಕ್ಕೆ ನೀಡಿದೆ. ಈ ಕುರಿತ ಅಂಕಿ ಅಂಶಗಳು ಇದ್ದರೂ ರಾಜ್ಯ ಸರ್ಕಾರ ಚುನಾವಣೆ ವೇಳೆ ಸುಪ್ರೀಂಕೋರ್ಟ್ ಮೆಟ್ಟಿಲೇರಿರುವುದು ಹಾಸ್ಯಾಸ್ಪದ ಎಂದು ಹೇಳಿದರು. ಮೈಸೂರು ಅರಸರು 100 ವರ್ಷಗಳ ಹಿಂದೆ ಕಾವೇರಿ ನದಿಗೆ ಕೆಆರ್‌ಎಸ್ ಅಣೆಕಟ್ಟೆಯನ್ನು ನಿರ್ಮಿಸುವ ಮೂಲಕ ನೀರಿನ ಬವಣೆಗೆ ಪರಿಹಾರ ನೀಡಿದ್ದರು. ಆದರೆ 'ಇಂಡಿಯಾ' ಒಕ್ಕೂಟದ ಕಾರಣಕ್ಕೆ ● 9ನೇ ಪುಟಕ್ಕೆ



ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ಮಾತನಾಡಿದರು. ಮಾಜಿ ಸಚಿವ ಅಪ್ಪಚ್ಚು ರಂಜನ್ ಇದ್ದಾರೆ.

ಮಂಡ್ಯದಲ್ಲಿ ಪಟಾಕಿ ದುರಂತ: ಓರ್ವ ಸಾವು, ಮತ್ತೋರ್ವನ ಸ್ಥಿತಿ ಗಂಭೀರ



ಮಂಡ್ಯ,ಮಾ.25– ಆಲೆಮನೆಯಲ್ಲಿ ಸಂಗ್ರಹಿಸಿದ್ದ ಪಟಾಕಿ ದಾಸ್ತಾನು ಸ್ಫೋಟಗೊಂಡು ತಮಿಳುನಾಡು ಮೂಲದ ಕಾರ್ಮಿಕ ಸಾವನ್ನಪ್ಪಿ, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ದುರಂತ ತಾಲೂಕಿನ ಜಿ.ಕೆಬ್ಬಳ್ಳಿ ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ಸಂಭವಿಸಿದೆ. ದುರಂತದಲ್ಲಿ ತಮಿಳುನಾಡು ಮೂಲದ ರಮೇಶ್ (45) ಮೃತಪಟ್ಟಿದ್ದು, ನಾಗಲಿಂಗ (55) ಎಂಬಾತ ಗಂಭೀರ ಗಾಯಗಳೊಂದಿಗೆ ಮಂಡ್ಯದ ಮಿಮ್ಸ್ ಆಸ್ಪತ್ರೆಯ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ವಿವರ: ಜಿ.ಕೆಬ್ಬಳ್ಳಿ ಗ್ರಾಮದಲ್ಲಿ ವಿಜೃಂಭಣೆಯಿಂದ ನಡೆದ ಶ್ರೀ ಕಾಲಭೈರವೇಶ್ವರ ಹಬ್ಬದಲ್ಲಿ ಪಟಾಕಿ ಸಿಡಿಸಲು ತಮಿಳುನಾಡಿನಿಂದ ನಾಲ್ವರನ್ನು ಕರೆಸಲಾಗಿತ್ತು. ಭಾನುವಾರ ರಾತ್ರಿ ಗ್ರಾಮದಲ್ಲಿ ಹಬ್ಬದ ಅಂಗವಾಗಿ ವರ್ಣರಂಜಿತ ಬಾಣಬಿರುಸುಗಳೊಂದಿಗೆ ಪಟಾಕಿ ಸಿಡಿಸಲಾಗಿತ್ತು. ನಂತರ ಪಟಾಕಿ ಸಿಡಿಸಲು ತಮಿಳುನಾಡಿನಿಂದ ಬಂದಿದ್ದ ಕಾರ್ಮಿಕರು ನಿನ್ನೆ ರಾತ್ರಿ ಗ್ರಾಮದ ಆಲೆಮನೆಯೊಂದರಲ್ಲಿ ಪಟಾಕಿಗಳೊಂದಿಗೆ ವಾಸ್ತವ್ಯ ಹೂಡಿದ್ದರು. ಸೋಮವಾರ ಬೇರೊಂದು ಗ್ರಾಮಕ್ಕೆ ಹೋಗಲು ಪಟಾಕಿಗಳನ್ನು ತುಂಬುವಾಗ ಆಕಸ್ಮಿಕವಾಗಿ ಪಟಾಕಿ ಸ್ಫೋಟಗೊಂಡಿದೆ. ಸ್ಫೋಟದ ತೀವ್ರತೆಗೆ ಇಬ್ಬರು ಕಾರ್ಮಿಕರು ತೀವ್ರವಾಗಿ ಗಾಯಗೊಂಡಿದ್ದು ಆಲೆಮನೆಯ ಹೆಂಚುಗಳು ಹಾರಿಹೋಗಿ, ಆಲೆಮನೆ ಹೊತ್ತಿ ಉರಿದಿದೆ. ಆಲೆಮನೆಯಲ್ಲಿ ಸಿಲುಕಿಕೊಂಡಿದ್ದ ಕಾರ್ಮಿಕರನ್ನು ಗ್ರಾಮಸ್ಥರು ರಕ್ಷಿಸಿದ್ದಾರೆ. ಈ ವೇಳೆ ರಮೇಶ್ ಸ್ಥಳದಲ್ಲೇ ಸಾವನ್ನಪ್ಪಿರುವುದು ಕಂಡುಬಂದಿದೆ. ನಾಗಲಿಂಗ ಎಂಬಾತನಿಗೆ ತೀವ್ರವಾದ ಗಾಯಗಳಾಗಿದ್ದು ಉಳಿದ ಇಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮಾಹಿತಿ ಪಡೆದ ಅಗ್ನಿಶಾಮಕ ಸಿಬ್ಬಂದಿ ತಕ್ಷಣ ದಾವಿಸಿ ಬೆಂಕಿ ನಂದಿಸಿದರು.

ನಾಗಲಿಂಗ ಎಂಬಾತನಿಗೆ ಶೇ.35ರಷ್ಟು ಸುಟ್ಟ ಗಾಯಗಳಾಗಿದ್ದು, ಈತನ ಪರಿಸ್ಥಿತಿ ಗಂಭೀರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ಈ ಸಂಬಂಧ ಕೆರೆಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಎನ್.ಯತೀಶ್, ಮುಖ್ಯ ಅಗ್ನಿಶಾಮಕ ಅಧಿಕಾರಿ ಮೈಸೂರು ಪ್ರಾಂತ್ಯಾಧಿಕಾರಿ ಪಿ.ಎಸ್. ಜಯರಾಮಯ್ಯ, ಮೈಸೂರು ವಲಯದ ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನೀವು ಸ್ವರ್ಗಕ್ಕೆ ಹೋಗಬೇಕು ಅಂತ ಆಸೆ ಇದ್ರೆ ಮಂಜುನಾಥ್‌ಗೆ ಮತ ನೀಡಿ!

ಒಂದು ತಪ್ಪು ಮತ ಹಾಕಿದ್ರೆ ನಿಮಗೆ ಯಮ ಕಾಣಿಸ್ತಾನೆ!!

ರಾಮನಗರ: ನೀವು ಸ್ವರ್ಗಕ್ಕೆ ಹೋಗ ಬೇಕು ಅಂತ ಆಸೆ ಇದ್ರೆ ಡಾ. ಮಂಜುನಾಥ್‌ಗೆ ನಿಮ್ಮ ಮತ ನೀಡಿ. ಒಂದು ತಪ್ಪು ಮತ ಹಾಕಿದ್ರೂ ನಿಮಗೆ ಯಮ ಕಾಣಿಸ್ತಾನೆ. ನರಕದಲ್ಲಿ ಬಿಸಿ ಎಣ್ಣೆಗೆ ಅಜ್ಜುತ್ತಾನೆ ಎಂದು ಕನಕಪುರ ದಲ್ಲಿ ಶಾಸಕ ಮುನಿರತ್ನ ಹೇಳಿದ್ದಾರೆ.


ಡಾ.ಮಂಜುನಾಥ್


ಮುನಿರತ್ನ

ಕನಕಪುರದ ಬಿಜೆಪಿ–ಜೆಡಿಎಸ್ ಸಮ್ಮಿಲನ ಸಭೆಯಲ್ಲಿ ಮಾತನಾಡಿದ ಅವರು, ರಾಜಕಾರಣಕ್ಕೆ ಬಂದರೆ ಜನಸೇವೆ ಮಾಡಬೇಕು. ಡಾ. ಮಂಜುನಾಥ್ ಬಂದಿರೋದು ಸ್ವಾರ್ಥಕ್ಕಲ್ಲ, ಜನಸೇವೆಗೆ. ಬೇರೆಯವರಿಗೆ ಮತ ಹಾಕಿದರೆ ಅದು ಸ್ವಾರ್ಥಕ್ಕೆ ಹೋಗುತ್ತೆ ಡಾ. ಮಂಜುನಾಥ್ ಅವರ ಸೇವೆ 140 ಕೋಟಿ ಜನತೆಗೆ ಬೇಕು. ಇದನ್ನು ಬರೆದಿಟ್ಟುಕೊಳ್ಳಿ, ಸೂರ್ಯ, ಚಂದ್ರ ಇರೋದು ಎಷ್ಟು ಸತ್ಯವೋ ಮೋದಿ ● 9ನೇ ಪುಟಕ್ಕೆ

ಉದ್ಯಾನವನ್ನೇ ನಿವೇಶನವಾಗಿ ಪರಿವರ್ತಿಸಿ ಕೋಟ್ಯಾಂತರ ರೂ.ಗಳಿಗೆ ಮಾರಾಟ!

- ಮುಡಾ ಅಧ್ಯಕ್ಷರ ನಿರ್ದೇಶನದಂತೆ ಖಾಸಗಿ ಬಡಾವಣೆಯ ಪಾರ್ಕ್ ಜಾಗ ವಶಕ್ಕೆ ಪಡೆದು ತಂತಿ ಬೇಲಿ ಹಾಕಿದ ಅಧಿಕಾರಿಗಳು
- ಆರ್‌ಟಿಐ ಕಾರ್ಯಕರ್ತರ ದೂರಿನನ್ವಯ ಸ್ಥಳ ಪರಿಶೀಲಿಸಿದ ಮುಡಾ ಅಧಿಕಾರಿಗಳು; ಸೂಚನಾ ಫಲಕ ಅಳವಡಿಕೆ
- ಶ್ರೀರಾಂಪುರದಲ್ಲಿ ಭವ್ಯಭಾರತ ಗೃಹನಿರ್ಮಾಣ ಸಹಕಾರ ಸಂಘದಿಂದ ರಚಿಸಿರುವ ಬಡಾವಣೆಯಲ್ಲಿ ಪಾರ್ಕ್‌ಗೆಂದು ಬಿಟ್ಟುಕೊಡಲಾಗಿದ್ದ ಜಾಗದಲ್ಲಿ ನಿವೇಶನ ರಚಿಸಿ ಮಾರಾಟ
- ಮುಡಾದಿಂದ ಬಿಡುಗಡೆಯಾಗದಿದ್ದರೂ ಪಾರ್ಕ್ ಜಾಗದ ನಿವೇಶನಗಳನ್ನು ಶುದ್ಧ ಕ್ರಯಪತ್ರ ನೋಂದಾಯಿಸಿರುವ ಉತ್ತರ ಉಪನೋಂದಣಾಧಿಕಾರಿಗಳು
- ಮುಡಾ ಸದಸ್ಯರೂ ಆಗಿರುವ ಜವಾಬ್ದಾರಿಯುತ ಜನಪ್ರತಿನಿಧಿ ನಿರ್ಮಿಸಿರುವ ಬಡಾವಣೆಯಲ್ಲಿ ಅನಧಿಕೃತ ನಿವೇಶನ ಖರೀದಿಸಿರುವವರು ಕಂಗಾಲು



ಶ್ರೀರಾಂಪುರದಲ್ಲಿ ಭವ್ಯ ಭಾರತ ಗೃಹ ನಿರ್ಮಾಣ ಸಹಕಾರ ಸಂಘದಿಂದ ಅಭಿವೃದ್ಧಿಗೊಂಡಿರುವ ವಸತಿ ಬಡಾವಣೆಯ ಪಾರ್ಕ್ ಜಾಗದಲ್ಲಿ ಮುಡಾ ಅಧಿಕಾರಿಗಳು ಸೂಚನಾ ಫಲಕ ಅಳವಡಿಸಿರುವುದು

■ ಎಸ್.ಟಿ.ರವಿಕುಮಾರ್

ಮೈಸೂರು, ಮಾ.25–ಖಾಸಗಿ ವಸತಿ ಬಡಾವಣೆಯಲ್ಲಿ ಉದ್ಯಾನವನಕ್ಕೆಂದು ಮೀಸಲಿರಿಸಿದ ಜಾಗದಲ್ಲಿ 8 ನಿವೇಶನ ಅಭಿವೃದ್ಧಿಪಡಿಸಿ ಅಕ್ರಮವಾಗಿ ಕೋಟ್ಯಾಂತರ ರೂ.ಗಳಿಗೆ ಮ/ಮಾರಾಟ ಮಾಡಿರುವ ಪ್ರಕರಣ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ. ಭವ್ಯ ಭಾರತ ಗೃಹ ನಿರ್ಮಾಣ ಸಹಕಾರ ಸಂಘದಿಂದ ಮೈಸೂರು ತಾಲೂಕು, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸರ್ವೆ ನಂಬರ್ 18/1, 18/2, 19/2, 52/1, ಮತ್ತು 52/2ರ ಒಟ್ಟು 8 ಎಕರೆ ಪ್ರದೇಶದಲ್ಲಿ ವಸತಿ ಬಡಾವಣೆ ಅಭಿವೃದ್ಧಿಪಡಿಸಿ ವಿವಿಧಅಳತೆಯ ಒಟ್ಟು 79 ನಿವೇಶನಗಳನ್ನು ರಚಿಸಲಾಗಿದೆ.

15x24 ಮೀಟರ್‌ನ 17, 12x18ಮೀ.ನ 38 ಹಾಗೂ 9x12 ಮೀ.ನ 24 ನಿವೇಶನಗಳು, 4,936 ಚದರ ಮೀಟರ್ ಉದ್ಯಾನವನ, 3,673 ಚ.ಮೀ ನಾಗರಿಕ ಸೌಕರ್ಯ(ಸಿಎ)ನಿವೇಶನ ಹಾಗೂ 7,826 ಚದರ ಮೀಟರ್ ● 9ನೇ ಪುಟಕ್ಕೆ

ಪಾರ್ಕ್ ಜಾಗ ಮುಡಾ ವಶಕ್ಕೆ ಪಡೆದಿದ್ದೇವೆ...



ಭವ್ಯ ಭಾರತ ಗೃಹ ನಿರ್ಮಾಣ ಸಹಕಾರ ಸಂಘದಿಂದ ಶ್ರೀರಾಂಪುರ ಸರ್ವೆ ನಂಬರ್‌ಗಳಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯ ಉದ್ಯಾನವನಕ್ಕೆ ಮೀಸಲಿಟ್ಟ ಜಾಗದಲ್ಲಿ ರಚಿಸಿರುವ ಅನಧಿಕೃತ ನಿವೇಶನಗಳ ಪ್ರದೇಶವನ್ನು ವಶಕ್ಕೆ ಪಡೆದು, ಅಲ್ಲಿ ಸೂಚನಾ ಫಲಕ ಅಳವಡಿಸಿದ್ದು, ಸುತ್ತಲೂ ತಂತಿ ಬೇಲಿ ನಿರ್ಮಿಸುತ್ತಿದ್ದೇವೆ ಎಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಆರ್‌ಟಿಐ ಕಾರ್ಯಕರ್ತರು ನೀಡಿದ ದೂರಿನನ್ವಯ ಪರಿಶೀಲಿಸಿದಾಗ ಮುಡಾಗೆ ಬಿಟ್ಟುಕೊಡಲಾ ಗಿರುವ ಜಾಗದಲ್ಲಿ 8 ನಿವೇಶನ ರಚಿಸಿ, ಮಾರಾಟ ಮಾಡಿರುವುದು ದೃಢಪಟ್ಟ ● 9ನೇ ಪುಟಕ್ಕೆ

ಜೆಪಿ ನಡ್ಡಾ ಪತ್ನಿಯ ಎಸ್‌ಯುವಿ ಕಳ್ಳತನ

ನವದೆಹಲಿ: ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಅವರ ಪತ್ನಿಯ ಹೆಸರಿನಲ್ಲಿ ನೋಂದಾಯಿಸಲಾದ ಎಸ್‌ಯುವಿ ದಕ್ಷಿಣ ದೆಹಲಿಯಿಂದ ಕಳವಾಗಿದೆ ಎಂದು ವರದಿಯಾಗಿದ್ದು, ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವಾಹನದ ಚಾಲಕ ಜೋಗಿಂದರ್, ಬಿಳಿ ಟೊಯೊಟಾ ಫಾರ್ಚೂನರ್ ಅನ್ನು ಗೋವಿಂದಪುರಿಯಲ್ಲಿನ ಸೇವಾ ಕೇಂದ್ರದಲ್ಲಿ ಬಿಟ್ಟಿದ್ದಾಗ ಮಾರ್ಚ್ 19 ರಂದು ಘಟನೆ ನಡೆದಿದೆ. ಚಾಲಕ ವಾಹನವನ್ನು ಅಲ್ಲಿ ಬಿಟ್ಟು ಮನೆಗೆ ಹಿಂದಿರುಗಿದ ನಂತರ ವಾಹನ ಕಾಣೆಯಾಗಿದೆ. ಕೂಡಲೇ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲಾಗಿತ್ತು. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿರುವ ಪೊಲೀಸರು ವಾಹನವು ಕೊನೆಯದಾಗಿ ಗುರುಗ್ರಾಮದ ಕಡೆಗೆ ಹೋಗುತ್ತಿರುವುದು ಕಂಡುಬಂದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ ವ್ಯಾಪಕ ಪ್ರಯತ್ನಗಳ ಹೊರತಾಗಿಯೂ, ಕದ್ದ ಕಾರನ್ನು ಪತ್ತೆಹಚ್ಚುವಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ. ಜೆಪಿ ನಡ್ಡಾ ಅವರ ಪತ್ನಿ ಹೆಸರಿನಲ್ಲಿ ಹಿಮಾಚಲ ಪ್ರದೇಶದಲ್ಲಿ ಈ ವಾಹನ ನೋಂದಣಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ಪೂರ್ವ ಪ್ರಾಥಮಿಕ ಶಿಕ್ಷಣ ಮಕ್ಕಳ ಬೆಳವಣಿಗೆಗೆ ಪೂರಕ

ಭತ್ತದ ತಳಿ ವಿಜ್ಞಾನಿ ಡಾ.ಸಿ.ಎ.ದೀಪಕ್ ಅಭಿಮತ



ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಯುರೋ ಕಿಡ್ಸ್ ಶಾಲೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭವನ್ನು ಭತ್ತದ ತಳಿ ವಿಜ್ಞಾನಿ ಡಾ.ಸಿ.ಎ.ದೀಪಕ್ ಉದ್ಘಾಟಿಸಿದರು.

ಮೈಸೂರು,ಮಾ.25–ನಗರದ ಆಲನಹಳ್ಳಿ ಬಡಾವಣೆಯಲ್ಲಿರುವ ಯುರೋ ಕಿಡ್ಸ್ ಶಾಲೆಯ ಪ್ರಥಮ ವಾರ್ಷಿಕೋತ್ಸವ ಸಮಾರಂಭವನ್ನು ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಲಾಗಿತ್ತು.

ಮಂಡ್ಯ ಕೃಷಿ ಸಂಶೋಧನಾ ಕೇಂದ್ರದ ಭತ್ತದ ತಳಿ ವಿಜ್ಞಾನಿ ಡಾ.ಸಿ.ಎ.ದೀಪಕ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪೂರ್ವ ಪ್ರಾಥಮಿಕ ಶಿಕ್ಷಣ ಮಕ್ಕಳ ಮುಂದಿನ ಬೆಳವಣಿಗೆಗೆ ಪೂರಕ ವಾತಾವರಣವನ್ನು ನಿರ್ಮಿಸುತ್ತದೆ. ಶಾಲಾ ವಾತಾವರಣಕ್ಕೂ ಮೊದಲು ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಮನೆಯನ್ನು ಬಿಟ್ಟು, ಶಾಲೆಗೆ ಬಂದ ಮಕ್ಕಳಿಗೆ ಸ್ವಾವಲಂಬನೆ, ಆಸಕ್ತಿ, ಕಲಿಕೆ, ವಿವಿಧ ಆಟೋಟಗಳು, ಸಹಪಾಠಿ ಮಕ್ಕಳ ಜೊತೆ ಬೆರೆಯುವುದು ಹೀಗೆ ಹತ್ತು ಹಲವು ಕುತೂಹಲಕಾರಿ ವಿಷಯಗಳನ್ನು ಮನವರಿಕೆ ಮಾಡಿಕೊಡುವುದು ಬಹಳ ಮುಖ್ಯವಾದ ಉದ್ದೇಶವಾಗಿದೆ ಎಂದು ತಿಳಿಸಿದರು.

ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಶಿಕ್ಷಣ ಸಂಸ್ಥೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಪೈಪೋಟಿ ಏರ್ಪಟ್ಟಿದೆ. ಆದ್ದರಿಂದ ವಿಷಯ ಜ್ಞಾನದ ಜೊತೆಗೆ ನಾವು ಬದುಕುವ ಕಲೆಯನ್ನು ಕಲಿಸುವುದು, ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದು, ಕ್ರಿಯಾಶೀಲತೆಯನ್ನು ಉಂಟು ಮಾಡುವುದು ಅತ್ಯಗತ್ಯ ಎಂದರು. ಅಧ್ಯಕ್ಷತೆಯನ್ನು ಯುರೋ ಕಿಡ್ಸ್‌ನ ಮುಖ್ಯಸ್ಥ ಕೃಷ್ಣೇಗೌಡ ವಹಿಸಿದ್ದರು. ಡಾ.ಯೋಗಿತಾ, ವ್ಯವಸ್ಥಾಪಕರಾದ ಶ್ರೀಮತಿ ಶಿಲ್ಪ ಕೃಷ್ಣೇಗೌಡ, ಮುಖ್ಯ ಶಿಕ್ಷಕಿ ಚೈತ್ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ಸಿಪೆಟ್ ಉದ್ಯೋಗಾಧಾರಿತ ಡಿಪ್ಲೊಮಾ ಶೈಕ್ಷಣಿಕ ಪ್ರವೇಶಕ್ಕೆ ಅರ್ಜಿ

ಮೈಸೂರು, ಮಾ. 25– ಮೈಸೂರಿನಲ್ಲಿರುವ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರ. ಇದು ಭಾರತ ಸರ್ಕಾರದ ರಸಾಯನ ಪೆಟ್ರೋರಸಾಯನ ಮತ್ತು ರಸಗೊಬ್ಬರ ಸಚಿವಾಲಯದ ಸ್ವಾಯತ್ತ ಸಂಸ್ಥೆಯಾಗಿದೆ. ದೇಶದ ಪಾಲಿಮರ್, ಪೆಟ್ರೋಕೆಮಿಕಲ್ಸ್, ಪ್ಲಾಸ್ಟಿಕ್ಸ್ ಕೈಗಾರಿಕಾ ವಲಯಕ್ಕೆ ಬೇಕಾದ ಮಾನವ ಸಂಪನ್ಮೂಲಕ್ಕೆ ಶೈಕ್ಷಣಿಕ ತರಬೇತಿ ನೀಡಲಾಗುತ್ತಿದೆ. ಸಿಪೆಟ್ ವಿದ್ಯಾರ್ಥಿಗಳು ಪಾಲಿಮರ್ ಕೈಗಾರಿಕಾ ವಲಯದಲ್ಲಿ ಜಾಗತಿಕವಾಗಿ ಗುರುತಿಸಲ್ಪಟ್ಟಿದ್ದಾರೆ.

ಸಿಪೆಟ್ 2024–25ನೇ ಸಾಲಿನ ಉದ್ಯೋಗಾರಿತ ಮತ್ತು ಉದ್ಯೋಗ ಖಚಿತ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್, ಆಫ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (DPT), ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) 3 ವರ್ಷಗಳ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು ಎಂದು ಸಿಪೆಟ್ ಸಂಸ್ಥೆಯ ನಿರ್ದೇಶಕರು ಮತ್ತು ಮುಖ್ಯಸ್ಥ ಆರ್.ಟಿ.ನಾಗರಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ದೂ: 0821–2510618/9480253024/9791431827/9466585669 ಸಂಪರ್ಕಿಸಬಹುದು.

> ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ (ವಿಜ್ಞಾನ) ಪರೀಕ್ಷೆಯಲ್ಲಿ ತೇರ್ಗಡೆಯಾದವರು, ಹಾಜರಾದವರು ಆನ್‌ಲೈನ್, ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ನೋಂದಣಿ ಪ್ರಾರಂಭ ಮಾ.26,. www.cipet.gov.in ಮೂಲಕ ನೋಂದಣಿ:


ಏ.1ರಿಂದ ಎಳೆಯರ ಮೇಳ

ಮೈಸೂರು, ಮಾ. 25– ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳಿಗೆ ಕಲೆ ಮತ್ತು ಸಂಸ್ಕೃತಿಯನ್ನು ಪರಿಚಯಿಸಲು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಎಳೆಯರ ಮೇಳ–2024 ಬೇಸಿಗೆ ಶಿಬಿರವನ್ನು ಏ.1ರಿಂದ 21ರವರೆಗೆ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಆವರಣದಲ್ಲಿ ಏರ್ಪಡಿಸಲಾಗಿದೆ. 8 ವರ್ಷದಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಅವಕಾಶವಿರುತ್ತದೆ. ಇದೇ ತಿಂಗಳ 20ರಿಂದ ಅರ್ಜಿಗಳನ್ನು ವಿತರಿಸಲಾಗುತ್ತಿದೆ.

ಮಕ್ಕಳ ಸುಪ್ತ ಪ್ರತಿಭೆಯ ಬೆಳವಣಿಗೆ ಮತ್ತು ಪ್ರದರ್ಶನಕ್ಕೆ ಇದೊಂದು ಉತ್ತಮ ವೇದಿಕೆ. ಹೆಚ್ಚಿನ ವಿವರಗಳಿಗೆ ಚಂದ್ರಶೇಖರಾಚಾರ್, ಮೊ. 9448739365, ಎಂ.ಗುರುಸ್ವಾಮಿ, ಮೊ.99454 72541, ಮಂಜುನಾಥ್ (ಕಾಚಕ್ಕಿ), ಮೊ.91649 91992, ಶಕುಂತಲಾ ಹೆಗಡೆ, ಮೊ.86607 50218, ಬಿ.ಜೀವನ್‌ಕುಮಾರ್, ಮೊ.98801 01305 ಸಂಪರ್ಕಿಸಲು ಕೋರಲಾಗಿದೆ.


> **ಶಿಬಿರದಲ್ಲಿ ರಂಗದಾಟಗಳು, ಬಣ್ಣದ ಕಲೆ, ಜೇಡಿಮಣ್ಣಿನ ಕಲೆ (ಟೆರ್ರಾ ಕೋಟ), ಕಾಳುಗಳಿಂದ ಚಿತ್ರ ರಚನೆ, ಪೇಪರ್ ಕ್ರಾಫ್ಟ್, ಹಾಡು, ನೃತ್ಯ ನಾಟಕಗಳು, ಗಣ್ಯ ವ್ಯಕ್ತಿಗಳೊಡನೆ ಸಂವಾದ ಹೀಗೆ ಹತ್ತು ಹಲವು ಕಾರ್ಯಕ್ರಮಗಳಿರುತ್ತವೆ. ಶಿಬಿರದ ಕೊನೆಯ ದಿನ ಶಿಬಿರಾರ್ಥಿಗಳಿಂದ ಹಾಡು, ನೃತ್ಯ, ನಾಟಕಗಳ ಪ್ರದರ್ಶನಗಳಿರುತ್ತವೆ.**

ಮುಕ್ಕಾಟಿರ ರಾಧಾ ಕಾರಿಯಪ್ಪ ನಿಧನ




ಮೈಸೂರು,ಮಾ.25–ಮೂಲತಃ ಕೊಡಗಿನ ಕುಂಜೇರಿ ಗ್ರಾಮದವರಾಗಿದ್ದು ಹಾಲಿ ಬೆಂಗಳೂರಿನ ಜಾಲಹಳ್ಳಿ ಎಚ್‌ಎಂಟಿ ಲೇಔಟ್‌ನಲ್ಲಿ ವಾಸಿಸುತ್ತಿದ್ದ ದಿವಂಗತ ಮುಕ್ಕಾಟಿರ ಎ.ಕಾರಿಯಪ್ಪ ಅವರ ಪತ್ನಿ ಮುಕ್ಕಾಟಿರ ರಾಧಾ ಕಾರಿಯಪ್ಪ(ತಾಮನೆ ಕೋದಂಡೆರ) ಅವರು ಇಂದು ನಿಧನರಾದರು. ಅವರಿಗೆ 91ವರ್ಷ ವಯಸ್ಸಾಗಿತ್ತು. ಮೃತರು ಪುತ್ರರಾದ ಮಾದಯ್ಯ (ಮಧು), ಮುತ್ತಣ್ಣ (ಮುತ್ತು) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಮಾ.26) ಮಧ್ಯಾಹ್ನ 2ಗಂಟೆಗೆ ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿರುವ ಎಸ್ಟೀಮ್ ಮಾಲ್ ಸಮೀಪದ ಹೆಬ್ಬಾಳ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಸರೋಜಮ್ಮ




ಕೆಆರ್.ಪೇಟೆ,ಮಾ.25– ತಾಲೂಕಿನ ಬೀರುವಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷೆ ಸರೋಜಮ್ಮ (76) ಸೋಮವಾರ ನಿಧನರಾದರು. ಮೃತರು ಪುತ್ರರಾದ ವಾಸು, ಅನಂತರಾಜು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಮಂಗಳವಾರ ಮ.12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಜಗನ್ನಾಥ್



ಮೈಸೂರು, ಮಾ. 25– ಮೈಸೂರಿನ ಹೆಬ್ಬಾಳು ಸುಬ್ರಹ್ಮಣ್ಯನಗರ ನಿವಾಸಿ ನರಸಿಂಹಯ್ಯ ಅವರ ಪುತ್ರ ಜಗನ್ನಾಥ್(57) ಇಂದು ನಿಧನ ರಾದರು. ಮೃತರು ತಂದೆ, ಸಹೋದರ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 12 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿಂಗಮ್ಮ



ಮೈಸೂರು, ಮಾ.25– ತಾಲೂಕಿನ ಹಂಚ್ಯಾ ಗ್ರಾಮದ ಲೇಟ್ ಸಿದ್ದೇಗೌಡರ ಧರ್ಮಪತ್ನಿ ನಿಂಗಮ್ಮ(85) ಅವರು ಸೋಮವಾರ ಮುಂಜಾನೆ ನಿಧನರಾದರು. ಇವರು ಪುತ್ರ ಕಾಳೇಗೌಡ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ತೋಟದಲ್ಲಿ ಸಂಜೆ ಅಂತ್ಯ ಸಂಸ್ಕಾರ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹನೀಯರ ಜಯಂತಿ ಒಂದು ಜಾತಿಗೆ ಮಾತ್ರ ಸೀಮಿತವಾಗಬಾರದು

ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ರವರ 298ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಅಭಿಮತ



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ಶ್ರೀ ಕೈವಾರ ತಾತಯ್ಯ ಬಣಜಿಗ (ಬಲಿಜ) ಸಂಘದ ವತಿಯಿಂದ ಸೋಮವಾರ ಆಯೋಜಿಸಿದ್ದ ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಶಾಸಕ ಕೆ.ಹರೀಶ್‌ಗೌಡ ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಮಾ.25(ಎಂಟಿವೈ)– ಮಹನೀಯರ ಜಯಂತಿ ಕಾರ್ಯಕ್ರಮಗಳು ಕೇವಲ ಆಚರಣೆಗೆ ಹಾಗೂ ಒಂದು ಜಾತಿಗೆ ಸೀಮಿತಗೊಳಿಸದೆ, ಅವರ ತತ್ವ ಸಿದ್ಧಾಂತಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಆದರ್ಶ ಜೀವನ ನಡೆಸಬೇಕು ಎಂದು ಶಾಸಕ ಕೆ.ಹರೀಶ್ ಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ದೇವರಾಜ ಅರಸ್ ರಸ್ತೆಯಲ್ಲಿ ಶ್ರೀ ಕೈವಾರ ತಾತಯ್ಯ ಬಣಜಿಗ (ಬಲಿಜ) ಸಂಘದ ವತಿಯಿಂದ ಆಯೋಜಿಸಿದ್ದ ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ರವರ 298ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೈವಾರ ತಾತಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಸಮಾಜ ಸ್ವಾಸ್ಥ್ಯ ಕಾಪಾಡುವ ನಿಟ್ಟಿನಲ್ಲಿ ಮಹನೀಯರ ತತ್ವ ಆದರ್ಶ ಪಾಲನೆ ಅಗತ್ಯ. ನಾವು ಆಚರಿಸುವ ಮಹನೀಯರ ಜಯಂತಿ ಕಾರ್ಯಕ್ರಮಗಳು ಕೇವಲ ಆಚರಣೆಗಷ್ಟೇ ಸೀಮಿತವಾಗಬಾರದು. ವಿದ್ಯಾರ್ಥಿಗಳು ಹಾಗೂ ಯುವ ಪೀಳಿಗೆಗೆ ಮಹನೀಯರ ಸಂದೇಶ ತಲುಪಿಸುವ ಕೆಲಸ ಆಗಬೇಕು. ಆ ಮೂಲಕ ಆರೋಗ್ಯವಂತ, ಸಮಸಮಾಜ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದರು.


ಈ ಹಿಂದೆ ಸಮಾಜ ಸುಧಾರಣೆಗಾಗಿ ಶ್ರಮಿಸಿದ ಹಲವು ಮಹನೀಯರ ಜನ್ಮ ದಿನದ ಕಾರ್ಯಕ್ರಮಗಳ ಆಚರಣೆ ಮೂಲಕ ಸ್ಮರಿಸುತ್ತೇವೆ. ಆದರೆ, ಕೆಲವು ಸಂದರ್ಭಗಳಲ್ಲಿ ಮಹನೀಯರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸುವಂತಹ ಸಂಕುಚಿತ ಮನೋಭಾವ ಪ್ರದರ್ಶನವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹನೀಯರ ಸ್ಮರಣೆ ಜಾತ್ಯಾತೀತವಾಗಿ ನಡೆಸಬೇಕು. ತತ್ವ ಸಿದ್ಧಾಂತಗಳನ್ನು ನಾವು ಮೈಗೂಡಿಸಿಕೊಂಡು ಅರ್ಥಪೂರ್ಣ ಜೀವನ ನಡೆಸಬೇಕು. ಜೀವನ ಸಾರ್ಥಕತೆಗಾಗಿ ಸಮಾಜದ ಒಳಿತಿಗೆ ಶ್ರಮಿಸುವ ಮೂಲಕ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಶ್ರೀ ಕೈವಾರ ತಾತಯ್ಯ ಬಣಜಿಗ (ಬಲಿಜ) ಸಂಘದ ಗೌರವಾಧ್ಯಕ್ಷ ಆನಂದ್ ಶೆಟ್ಟಿ ಮಾತನಾಡಿ, ತಾತಯ್ಯ ಅವರು ಸಮಾಜ ಸುಧಾರಣೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕೈವಾರ ಕ್ಷೇತ್ರ ಬಹಳ ಪವಿತ್ರವಾದದ್ದು ಹಾಗೂ ಧಾರ್ಮಿಕ ಪ್ರವಾಸಿ ತಾಣವೂ ಆಗಿದೆ ಎಂದರು.

ತಾತಯ್ಯ ಅವರ ಜಯಂತಿ ಅಂಗವಾಗಿ ಸಾರ್ವಜನಿಕರಿಗೆ ಸಿಹಿ ಹಾಗೂ ಮಜ್ಜಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಕಾರ್ಯದರ್ಶಿ ಕೆ.ಉಮೇಶ್, ನರೇಶ್ ಬಾಬು, ಪ್ರಕಾಶ್, ಉಮೇಶ್, ಯತಿರಾಜ್, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಮೈ.ಕಾ.ಪ್ರೇಮ್ ಕುಮಾರ್, ಮುಡಾ ಮಾಜಿ ಸದಸ್ಯರಾದ ನವೀನ್‌ಕುಮಾರ್, ಕರ್ನಾಟಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ರಮೇಶ್, ರಾಜೀವ್, ಗುರುರಾಜ್ ಶೆಟ್ಟಿ, ಎಸ್.ಎನ್.ರಾಜೇಶ್, ಪ್ರಮೋದ್‌ಗೌಡ, ರವಿಚಂದ್ರ, ಜಿ.ರಾಘವೇಂದ್ರ, ಕೃಷ್ಣಮೂರ್ತಿ, ಸಂತೋಷ್ ನಾಯ್ಡು ಹಾಗೂ ಇನ್ನಿತರರು ಭಾಗವಹಿಸಿದ್ದರು.

> ತ್ರಿಕಾಲ ಜ್ಞಾನಿಯಾಗಿದ್ದ ಕೈವಾರ ತಾತಯ್ಯ ಅವರು ಪ್ರಾಪಂಚಿಕ ಆಗು–ಹೋಗುಗಳನ್ನು ಅರಿತು ಮನುಕುಲದ ಒಳಿತಿಗಾಗಿ ಅಪಾರ ಕೊಡುಗೆ ನೀಡಿದ್ದಾರೆ. 17ನೇ ಶತಮಾನದಲ್ಲಿ ಜೀವಿಸಿದ್ದ ಕೈವಾರ ತಾತಯ್ಯ ಅವರು ಪವಾಡ ಪುರುಷರಾಗಿದ್ದರು. ತಾತಯ್ಯ ಅವರನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲ ಸಮಾಜಗಳು ಸ್ಮರಿಸಬೇಕು. ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದಿ, ತಾರತಮ್ಯ, ಅಸಮಾನತೆ ಹೋಗಲಾಡಿಸಲು ಅವರು ಕೈಗೊಂಡ ಸಾಮಾಜಿಕ ಸುಧಾರಣೆ ಕಾರ್ಯ ಇಂದಿಗೂ ಸ್ಮರಣೀಯ. ದೇಶದ ಅಭ್ಯುದಯಕ್ಕೆ ಕೊಡುಗೆ ನೀಡಿದ ಶ್ರೇಷ್ಠ ದಾರ್ಶನಿಕರಲ್ಲಿ ತಾತಯ್ಯ ಅಗ್ರಗಣ್ಯರು. ಕಾಲಜ್ಞಾನ ಭವಿಷ್ಯವನ್ನು ಇಡೀ ಜಗತ್ತಿಗೆ ತೋರಿಸಿಕೊಟ್ಟವರು ಕೈವಾರ ತಾತಯ್ಯ. **–ಕೆ.ಹರೀಶ್‌ಗೌಡ**

ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್‌ರಿಗೆ ಅಭಿನಂದನೆ



ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಶಾಸಕ ತನ್ವೀರ್ ಸೇಠ್ ಅವರನ್ನು ಡಿಸಿಸಿ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಸ್.ಶಾಬುದ್ದೀನ್, ಸದಸ್ಯರಾದ ಮಜೀದ್ ಅಹಮದ್, ಸಾಗರ್ ಸಿಮೆಂಟ್, ರದೀವುಲ್ಲಾ ಖಾನ್, ಕೆಪಿಸಿಸಿ ಸಂಯೋಜಕ ಶೌಕತ್ ಅಲಿಖಾನ್, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಸೈಯದ್ ಫಾರೂಖ್, ಮಾಜಿ ಪ್ರಧಾನ ಕಾರ್ಯದರ್ಶಿ ರೆಹಮಾನ್ ಖಾನ್, ಡಿಸಿಸಿ ಅಲ್ಪಸಂಖ್ಯಾತರ ವಿಭಾಗದ ಮಾಜಿ ಅಧ್ಯಕ್ಷ ಮೊಹಮ್ಮದ್ ಖೈಸರ್, ಮಾಜಿ ವಕ್ತಾರ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ಮಾಜಿ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮುಷೀರ್, ಸೈಯದ್ ರೆಹಮತುಲ್ಲಾ, ಅಬ್ದುಲ್ ಗಫೂರ್ ಆಜಾದ್, ಸುಹೇಲ್ ಪಾಷ, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸೈಯದ್ ಇಕ್ಬಾಲ್, ಉಪಾಧ್ಯಕ್ಷ ಶಹಿನ್‌ಷಾ ಅಹಮದ್, ಕಾರ್ಯದರ್ಶಿ ವಸೀಂ, ಅಲ್‌ಹಾಜ್ ಆಸಿಫ್ ಅಹಮದ್, ಬಂಡಿಪಾಳ್ಯ ಹೆಚ್.ಎನ್.ಖಲೀಲ್ ಅಹಮದ್ ಫಾರೂಖಿ ಮತ್ತಿತರರು ಅಭಿನಂದಿಸಿದರು.

ಯೋಗ ತರಬೇತಿ ಕೇಂದ್ರದಲ್ಲಿ ಮಹಿಳಾ ದಿನಾಚರಣೆ

ಮೈಸೂರು,ಮಾ25(ಆರ್‌ಕೆ)– ಮೈಸೂರಿನ ವಿಜಯನಗರ ಮೂರನೇ ಹಂತದ ಸರ್ಕಾರಿ ಆಯುಷ್ ಚಿಕಿತ್ಸಾಲಯದ ಯೋಗ ತರಬೇತಿ ಕೇಂದ್ರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.

ಈಕ್ವಾಲಿಟಿ ಇನ್‌ಸ್ಟಿಟ್ಯೂಟ್ ಫಾರ್ ಥಾಟ್ ಅಂಡ್ ಆಕ್ಷನ್ ಟ್ರಸ್ಟ್ ವತಿಯಿಂದ ಕೇಂದ್ರದ ಯೋಗ ತರಬೇತುದಾರರಾದ ಎಲ್.ಹೇಮಾ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಟ್ರಸ್ಟ್ ಅಧ್ಯಕ್ಷೆ ಡಾ.ಎನ್.ಸಿ.ಸುಮತಿಗುರು ಮಾತನಾಡಿ, ಹಲವು ಮಹಿಳೆಯರಿಗೆ ಉಚಿತವಾಗಿ ಯೋಗ ತರಬೇತಿ ನೀಡುತ್ತಿರುವ ಹೇಮಾ ಅವರ ಸಾಧನೆ ಗುರ್ತಿಸಿ ಅಭಿನಂದಿಸಲಾಗಿದ್ದು, ಅದರಿಂದಾಗಿ ಇತರ ಮಹಿಳೆಯರು ಯೋಗಾಭ್ಯಾಸ ಮಾಡಲು ಪ್ರೇರಣೆಯಾಗಲಿದೆ ಎಂದರು.

ಈ ವೇಳೆ ಯೋಗ ಪ್ರಶಿಕ್ಷಣಾರ್ಥಿಗಳಾದ ನಿವೃತ್ತ ಪಿಡಿಪಿಐ ಮಂಜುಳಾ, ಉಪನ್ಯಾಸಕಿ ದಾಕ್ಷಾಯಣಿ, ಕೆ.ಹೆಚ್.ಬೀನಾ, ವಿಜಯಾ, ಲಕ್ಷ್ಮಿ, ರೂಪಾ, ಜಾಕ್ವೆಲಿನಾ, ಸೋಮಲತಾ, ಶೋಭಾರಾಣಿ, ಅನಿತಾ, ಹೆಚ್.ಆರ್.ವಾಣಿಶ್ರೀ, ಮೇಘ, ಪೂರ್ಣಿಮಾ, ರಾಧಾ, ಶ್ರಾವಂತಿ, ಚೈತ್ರಾ, ಮಮತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ

ಮೈಸೂರು,ಮಾ.25–ಮೈಸೂರಿನ ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ ವತಿಯಿಂದ ಮಾ.28ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 2ರವರೆಗೆ ಉತ್ತರಾದಿ ಮಠದ ರಸ್ತೆಯ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ವೀರಶೈವ–ಲಿಂಗಾಯತ ವಧುವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಮಾ.27ರೊಳಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ. ಮಾಹಿತಿಗೆ ಮೊ.9686205346 ಸಂಪರ್ಕಿಸಬಹುದು.

ಪಂಡಿತ್ ಪಂಚಾಕ್ಷರ ಗವಾಯಿ ಸ್ಮರಣಾರ್ಥ ವಚನ ಸಂಗೀತೋತ್ಸವ



ಗಾನಯೋಗಿ ಪಂಡಿತ್ ಪಂಚಾಕ್ಷರ ಗವಾಯಿ ಅವರ ಸ್ಮರಣಾರ್ಥ ವಚನ ಸಂಗೀತೋತ್ಸವ ಕಾರ್ಯಕ್ರಮವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು,ಮಾ.25(ಎಸ್‌ಪಿಎನ್)–ವಚನ ಸಾಹಿತ್ಯವನ್ನು ಹಿಂದೂಸ್ತಾನಿ ಸಂಗೀತದ ಮೂಲಕ ದೇಶಕ್ಕೆ ಪರಿಚಯಿಸಿದ ಕೀರ್ತಿ ಗಾನಯೋಗಿ ಪಂಡಿತ್ ಪಂಚಾಕ್ಷರ ಗವಾಯಿ ಅವರಿಗೆ ಸಲ್ಲುತ್ತದೆ ಎಂದು ಸಂಗೀತ ಕಲಾವಿದ ವಿದ್ವಾನ್ ಸುಕನ್ಯಾ ಪ್ರಭಾಕರ್ ಅಭಿಪ್ರಾಯಪಟ್ಟರು.

ಮೈಸೂರು ರಮಾಗೋವಿಂದ ರಂಗಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕ, ಸಪ್ತಸ್ವರ ಬಳಗದ ಸಹಯೋಗದೊಂದಿಗೆ ಆಯೋಜಿಸಿದ್ದ ಗಾನಯೋಗಿ ಪಂಡಿತ್ ಪಂಚಾಕ್ಷರ ಗವಾಯಿ ಅವರ ಸ್ಮರಣಾರ್ಥ ವಚನ ಸಂಗೀತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಹಾನಗಲ್ ಕುಮಾರಸ್ವಾಮಿ ಅವರ ಪ್ರೇರಣೆಯಿಂದ ಪಂಡಿತ್ ಪಂಚಾಕ್ಷರ ಗವಾಯಿ ಅವರು, ಸಂಗೀತಾಭ್ಯಾಸ ಮಾಡಿದರು. ನಂತರ ಗದ್ಯ–ಪದ್ಯದ ಗೇಯ ಗುಣಗಳನ್ನು ಹೊಂದಿರುವ ವಚನಸಾಹಿತ್ಯ ಸಂಗೀತ ಸಂಯೋಜನೆಗೆ ಪೂರಕವಾಗಿವೆ ಎಂದರಲ್ಲದೆ, ಆ ವಚನಗಳಲ್ಲಿರುವ ಜಾಗೃತ ಸಂದೇಶಗಳು ಜನರಿಗೆ ತಲುಪಿಸುವಲ್ಲಿ ಅವರ ಪಾತ್ರ ಮಹತ್ವದ್ದು ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ಹಲವು ವರ್ಷಗಳ ಹಿಂದೆ ಬಿಡಾರಂ ಕೃಷ್ಣಪ್ಪ ರಂಗಮಂದಿರದಲ್ಲಿ ವಚನ ಸಾಹಿತ್ಯಕ್ಕೆ ಸಪ್ತಸ್ವರ ಬಳಗದ ಕಲಾವಿದರು ಸಂಗೀತ ರೂಪ ನೀಡಿದರು. ಇದರಿಂದ ಹಿಂದೂಸ್ತಾನಿ ಸಂಗೀತ ಮೈಸೂರಿನಲ್ಲಿ ನೆಲೆಯೂರಲು ಕಾರಣವಾಯಿತು ಎಂದು ಹೇಳಿದರು.

ಪಂಡಿತ್ ಪಂಚಾಕ್ಷರ ಗವಾಯಿ ಅವರು ಅಂಧರಾಗಿದ್ದರೂ ವಚನ ಸಾಹಿತ್ಯವನ್ನು ಹಿಂದೂಸ್ತಾನಿ ಸ್ವರಗಳಲ್ಲಿ ಸಂಯೋಜಿಸಿ, ಇಡೀ ಜಗತ್ತಿಗೆ ಮುಟ್ಟಿಸುವಲ್ಲಿ ಅವರ ಪಾತ್ರ ಹಿರಿದು. ಇಂತಹ ಕಾರ್ಯಕ್ರಮಗಳ ಪಂ.ಪಂಚಾಕ್ಷರ ಗವಾಯಿ ಅವರ ಸ್ಮರಣೆ ಆಗುತ್ತಿರುವುದು ಸಂತೋಷ ಸಂಗತಿ ಎಂದರು.

ಈ ವೇಳೆ ಕಾಂಗ್ರೆಸ್ ಹಿರಿಯ ಮುಖಂಡ ಪ್ರದೀಪ್‌ಕುಮಾರ್, ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಸಪ್ತಸ್ವರ ಬಳಗ ಖಜಾಂಚಿ ಹೆಚ್.ಜಿ.ಕೃಷ್ಣಪ್ಪ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ವಿದ್ವಾನ್ ಪಂ.ಕೆ.ಆನಂದಕುಮಾರ್, ರವಿಚಂದ್ರ ಡಿ.ಫಗೆ ಅವರು ಹಿಂದೂಸ್ತಾನಿ ಸಂಯೋಜನೆಯಲ್ಲಿ ವಚನ ಗಾಯನ ಪ್ರಸ್ತುತಪಡಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.3.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಸಖಿ ಫೌಂಡೇಷನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ :** ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಸಖಿ ಸಂಭ್ರಮ, ಸ್ಫೂರ್ತಿ ಸಖಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಶ್ರೀಮತಿ ಮಲ್ಲಿಗೆ ವೀರೇಶ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉಪಸ್ಥಿತರು : ಸಖಿ ಫೌಂಡೇಷನ್ ಸಂಸ್ಥಾಪನಾ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶ್, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಾಲೆ ಆವರಣ, ಬೆಳಗ್ಗೆ 9.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆಯಿಂದ.

■ **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್ :** ಪದವೀಧರ ವಿದ್ಯಾರ್ಥಿಗಳ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ : ಶ್ರೀ ನಿರ್ಮಲಾನಂದ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಗೌರವ ಅತಿಥಿಗಳು : ಡಿಸ್ಟ್ರಿಕ್ಟ್ ಸರ್ಜನ್ ಡಾ. ಟಿ. ಅಮರನಾಥ್, ಎನ್.ಜಿ. ಭರತೀಶ ರೆಡ್ಡಿ, ಅಪೋಲೋ ಬಿಜಿಎಸ್ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಅಮನ್ ನಾಯಕ್, ಡಿಸ್ಟ್ರಿಕ್ಟ್ ನರ್ಸಿಂಗ್ ಆಫೀಸರ್ ಕೆ.ಎ. ಕದೀಜಾ, ನರ್ಸಿಂಗ್ ಸೂಪರಿಂಟೆಂಡೆಂಟ್ ಬಿ.ಎ. ಸುಲಾಲಿತಂಗಿ, ಬ್ಲಡ್ ಬ್ಯಾಂಕ್ ಆಫೀಸರ್ ಡಾ. ಅಂಜಲಿ ಅರುಣ್, ಚೀಫ್ ಕಾರ್ಡಿಯಾಲಜಿಸ್ಟ್ ಡಾ. ಶಿವಪ್ರಸಾದ್, ಚೀಫ್ ನೆಫ್ರೋಲಜಿಸ್ಟ್ ಡಾ. ಶ್ರೀನಿವಾಸ್ ನಲ್ಲೂರು, ಡಾ. ಸೀತಾಲಕ್ಷ್ಮಿ ಸೋಮನಾಥ್, ನಿವೃತ್ತ ಮೆಡಿಕಲ್ ರೆಕಾರ್ಡ್ ಆಫೀಸರ್ ಶ್ಯಾಮ್‌ಸುಂದರ್, ಪ್ರತಿಜ್ಞಾವಿಧಿ ಬೋಧನೆ : ಬಿಜಿಎಸ್ ಪ್ರಿನ್ಸಿಪಾಲ್ ಡಾ. ಎನ್.ಟಿ. ಅರುಣಾದೇವಿ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಕುವೆಂಪುನಗರ, ಬೆಳಗ್ಗೆ 11.30ಕ್ಕೆ

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ–ಡಾ. ವಿ.ರಂಗನಾಥ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ– ಡಾ. ವಿನೋದಾ, 6.40 ಪದಸಂಸ್ಕೃತಿ, ಪ್ರಸ್ತುತಿ– ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್. 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ, ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಡಾ. ಎಸ್.ಬಾಲಚಂದರ್–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಪಿ. ರಮಾ, 12.45 ಮನೆ ಮನೆ ಕವಿಗೋಷ್ಠಿ ಪ್ರಯೋಗ ಕುರಿತು ಡಾ.ಸಿ.ಇ. ತ್ರಿವೇಣಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ಎ.ಜೆ. ದಿವ್ಯಾ, 3.00 ಬಿ.ವಿ. ದುರ್ಗಾಭವಾನಿ–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ– ಶ್ರೀ ಸತ್ಯನಾರಾಯಣ ವ್ರತ, ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ರೇಷ್ಮೆ ಕೃಷಿಯಲ್ಲಿ ಮಣ್ಣು ಪರೀಕ್ಷೆಯ ಪ್ರಾಮುಖ್ಯತೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ಡಾ. ವಿ.ಶೋಬನಾ ಮತ್ತು ಸಿ.ಎಸ್.ಜ್ಞಾನೇಶ್ವರ್, 9.30 ಕೆ.ವಿ. ನಾರಾಯಣಸ್ವಾಮಿ–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, ವಾಚನ– ಕೆ.ವಿ. ವಸಂತಲಕ್ಷ್ಮಿ, ವ್ಯಾಖ್ಯಾನ–ಹೆಚ್.ವಿ.ನಾಗರಾಜರಾವ್, 10.30 ಸವಿನೆನಪು

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಪದ್ಮಶ್ರೀ ಜೈನ ಮಹಿಳಾ ಸಮಾಜ :** ಎ. ಶಾಂತಿರಾಜ ಶಾಸ್ತ್ರಿ ಅವರ ದತ್ತಿ ಕಾರ್ಯಕ್ರಮ, ಉದ್ಘಾಟನೆ : ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಉಪಾಧ್ಯಕ್ಷ ಎನ್. ಪ್ರಸನ್ನಕುಮಾರ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್ ಅವರಿಂದ ಶಿವಕೋಟಿ ಆಚಾರ್ಯರ ವಡ್ಡಾರಾಧನೆ ಕೃತಿ ಕುರಿತು ಉಪನ್ಯಾಸ, ಸ್ಥಳ: ಪದ್ಮಶ್ರೀ ಜೈನ ಮಹಿಳಾ ಸಮಾಜ, ಶಂಕರ ಮಠದ ರಸ್ತೆ, ಸಂಜೆ 4.30ಕ್ಕೆ

■ **ಪರಂಪರೆ, ಮೈಸೂರು :** ಕುಮಾರವ್ಯಾಸ ಪ್ರಶಸ್ತಿ ಪುರಸ್ಕೃತ ಕೃ. ರಾಮಚಂದ್ರ ಅವರ ಅಭಿನಂದನಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಭಿನಂದನಾ ನುಡಿ : ಸಂಸ್ಕೃತ ವಿದ್ವಾಂಸರಾದ ವಿದ್ವಾನ್ ಡಾ.ಎಚ್.ವಿ. ನಾಗರಾಜರಾವ್, ಅಭಿನಂದಿತರು : ಗಮಕಿ ಮತ್ತು ವ್ಯಾಖ್ಯಾನಕಾರ ಕೃ. ರಾಮಚಂದ್ರ, ಅಧ್ಯಕ್ಷತೆ : ಕನ್ನಡ ವಿದ್ವಾಂಸ ನಾಡೋಜ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

ಸಿಂಧುವಳ್ಳಿ, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ಶ್ರೀ ನಟರಾಜ ಪ್ರತಿಷ್ಠಾನ, ರಾಷ್ಟ್ರೀಯ ಸೇವಾ ಯೋಜನೆ, ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ–2023–24, ಅಧ್ಯಕ್ಷತೆ : ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ನಾಗರಾಜು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ. ಬಿ. ಲಕ್ಷ್ಮೀನಾರಾಯಣ ಶೆಣೈ ಅವರಿಂದ ಆರೋಗ್ಯ ಮತ್ತು ನೈರ್ಮಲ್ಯ ಕುರಿತು ಉಪನ್ಯಾಸ, ಮುಖ್ಯ ಅತಿಥಿಗಳು : ಲಿಂಗಯ್ಯ, ಶ್ರೀಮತಿ ಜಿ.ಆರ್. ಪಾರ್ವತಿ, ಕೃಷ್ಣಯ್ಯ, ಮೊಹಮ್ಮದ್ ಸುಹಿಲ್, ಶ್ರೀಮತಿ ಬಸಮ್ಮ, ಎಂ. ಮಹೇಶ್, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧುವಳ್ಳಿ, ಮೈಸೂರು ತಾಲೂಕು, ಸಂಜೆ 4ಕ್ಕೆ.



ಮೈಸೂರಿನ ರೆಸಾರ್ಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಸ್ತವ್ಯ

'ಟಾರ್ಗೆಟ್ 20' ತಲುಪಲು ರಾಜಕೀಯ ತಂತ್ರಗಾರಿಕೆ; ಆಪ್ತರ ಜೊತೆ ಸಮಾಲೋಚನೆ

●ಪಕ್ಷ ದುರ್ಬಲವಾಗಿರುವ ಕ್ಷೇತ್ರಗಳ ಬಗ್ಗೆ ಅಧ್ಯಯನ ●ಬಂಡಾಯ ಶಮನಕ್ಕೂ ಕಾರ್ಯತಂತ್ರ ●ಬಿಜೆಪಿ ಮಣಿಸಲು ನಾಯಕರ ರಣತಂತ್ರ

ಮೈಸೂರು, ಮಾ.25(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್.ಡಿ.ಕೋಟೆ ಬಳಿಯ ರೆಸಾರ್ಟ್‌ನಲ್ಲಿ ರಣತಂತ್ರ ರೂಪಿಸುತ್ತಿದ್ದಾರೆ. ಮೂರು ದಿನಗಳ ಕಾಲ ಇಲ್ಲೇ ವಾಸ್ತವ್ಯ ಹೂಡುವ ಸಿದ್ದರಾಮಯ್ಯ ಟಾರ್ಗೆಟ್ 20 ತಲುಪಲು ರಾಜಕೀಯ ತಂತ್ರಗಾರಿಕೆ ನಡೆಸಿದ್ದಾರೆ.

ಲೋಕಸಭಾ ಚುನಾವಣೆ ಕಾವು ರಂಗೇರುತ್ತಿದ್ದು, ಕಾಂಗ್ರೆಸ್‌ನಲ್ಲಿ ಟಿಕೆಟ್ ವಂಚಿತರ ಅಸಮಾಧಾನ ಸ್ಫೋಟವಾಗಿದೆ. ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆ ಇನ್ನು ಕಗ್ಗಂಟಾಗಿದೆ. ಇದನ್ನೆಲ್ಲಾ ಪರಿಹಾರ ಮಾಡಿ 20 ಸ್ಥಾನ ಗೆಲ್ಲಬೇಕು ಎಂಬುದು ಸಿದ್ದರಾಮಯ್ಯ ಅವರ ಗುರಿ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಕಾರಣ ಹೆಚ್ಚಿನ ಸ್ಥಾನಗಳಲ್ಲಿ ಪಕ್ಷ ಜಯಭೇರಿ ಬಾರಿಸುತ್ತದೆ ಎಂಬುದು ಹೈಕಮಾಂಡ್ ವಿಶ್ವಾಸ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇದು ಪ್ರತಿಷ್ಠೆಯ ಪ್ರಶ್ನೆ ಕೂಡ. ಈ ಹಿನ್ನೆಲೆಯಲ್ಲಿ ಹೆಚ್ಚು ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವಿಜಯ ಪತಾಕೆ ಹಾರಿಸಬೇಕು ಎಂಬುದನ್ನು ಸಿದ್ದರಾಮಯ್ಯ ಸವಾಲಾಗಿ ಸ್ವೀಕರಿಸಿದ್ದಾರೆ.

ಮೂರು ದಿನಗಳ ಪ್ರವಾಸಕ್ಕೆ ನಿನ್ನೆ ಮೈಸೂರಿಗೆ ಆಗಮಿಸಿದ ಸಿದ್ದರಾಮಯ್ಯ ನಗರದ ಜೆ.ಪಿ.ಫಾರ್ಚ್ಯೂನ್ ಪ್ಯಾಲೆಸ್‌ನಲ್ಲಿ ಸಚಿವರು, ಶಾಸಕರು, ಮಾಜಿ ಶಾಸಕರು ಹಾಗೂ ಕಾಂಗ್ರೆಸ್ ಮುಖಂಡರ ಸಭೆ ನಡೆಸಿದ್ದರು.



ತರುವಾಯ ನೇರವಾಗಿ ಹೆಚ್.ಡಿ.ಕೋಟೆಯ ಕಾರಾಪುರದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ಗೆ ತೆರಳಿದರು. ನಿನ್ನೆ ರಾತ್ರಿಯಿಂದ ಅಲ್ಲೇ ವಿಶ್ರಾಂತಿ ಪಡೆಯುತ್ತಿರುವ ಸಿದ್ದರಾಮಯ್ಯ ಬುಧವಾರದ ತನಕ ವಾಸ್ತವ್ಯ ಹೂಡಲಿದ್ದಾರೆ.

ಸಿದ್ದರಾಮಯ್ಯ ಜೊತೆ ಅವರ ಪುತ್ರ ಡಾ.ಯತೀಂದ್ರ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಶಾಸಕ ಅನಿಲ್ ಚಿಕ್ಕಮಾದು ಹಾಗೂ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಇದ್ದಾರೆ. ಇವರನ್ನು ಬಿಟ್ಟು ಸಿದ್ದರಾಮಯ್ಯ ವಾಸ್ತವ್ಯವಿರುವ ಕೋಣೆಗೆ ಯಾರಿಗೂ ಪ್ರವೇಶವಿಲ್ಲ. ಕಾಂಗ್ರೆಸ್ ಮುಖಂಡರಿಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್‌ಗೆ ಪ್ರವೇಶ ನಿರ್ಬಂಧಿಸಲಾಗಿದೆ.

ಕರ್ನಾಟಕದ 28 ಕ್ಷೇತ್ರಗಳ ಬಗ್ಗೆ ಸಿದ್ದರಾಮಯ್ಯ ಅಧ್ಯಯನ ಮಾಡುತ್ತಿದ್ದಾರೆ. ಯಾವ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ಹೊಂದಿದೆ, ಎಲ್ಲಿ ದುರ್ಬಲವಾಗಿದೆ, ಯಾವ ಕ್ಷೇತ್ರಗಳಲ್ಲಿ ಬಂಡಾಯವಿದೆ ಎಂಬ ಬಗ್ಗೆ ಕರಾರುವಕ್ಕಾದ ಮಾಹಿತಿ ಪಡೆಯುತ್ತಿದ್ದಾರೆ. ಈ ಮೂಲಕ ಪಕ್ಷ ದುರ್ಬಲವಾಗಿರುವ ಕ್ಷೇತ್ರಗಳಲ್ಲಿ ರಣತಂತ್ರ ರೂಪಿಸಿ, ಬಿಜೆಪಿ ಮಣಿಸಲು ಚಿಂತನೆ ನಡೆಸಿದ್ದಾರೆನ್ನಲಾಗಿದೆ. ಬಂಡಾಯ ಶಮನಕ್ಕೆ ಏನು ಮಾಡಬೇಕು ಎಂಬ ಬಗ್ಗೆಯೂ ಆಪ್ತರ ಜೊತೆ ಸಿದ್ದರಾಮಯ್ಯ ಸಮಾಲೋಚನೆ ನಡೆಸುತ್ತಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಎರಡು ತಿಂಗಳ ಕಾಲ ರಾಜ್ಯಾದ್ಯಂತ ಪ್ರವಾಸ ಮಾಡಬೇಕಿರುವ ಕಾರಣ ಆ ಸಂದರ್ಭದಲ್ಲಿ ವಿಶ್ರಾಂತಿ ಸಿಗುವುದಿಲ್ಲ. ಆದ ಕಾರಣ ಸಾಹೇಬರು ವಿಶ್ರಾಂತಿ ಪಡೆಯಲು ರೆಸಾರ್ಟ್‌ನಲ್ಲಿದ್ದಾರೆ ಎಂಬುದು ಕೆಲವು ಕಾಂಗ್ರೆಸ್ ಮುಖಂಡರ ಹೇಳಿಕೆ.

ಆದರೆ ಇಂತಹ ಕಾವೇರಿದ ರಾಜಕೀಯ ಚಟುವಟಿಕೆ ನಡುವೆ ಸಿದ್ದರಾಮಯ್ಯ ವಿಶ್ರಾಂತಿ ಪಡೆಯುತ್ತಾರೆ ಎಂದರೆ ಬಹಳಷ್ಟು ಜನರು ನಂಬಲಾರರು. ಏಕೆಂದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಂತೆ ಸಿದ್ದರಾಮಯ್ಯ ಕೂಡ ಫುಲ್‌ಟೈಮ್ ಪೊಲಿಟಿಷಿಯನ್. ಆದ ಕಾರಣ ರೆಸಾರ್ಟ್‌ನಲ್ಲೇ ಕುಳಿತು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ರಾಜಕೀಯ ತಂತ್ರಗಾರಿಕೆ ರೂಪಿಸುತ್ತಿದ್ದಾರೆ ಎಂಬುದು ಅವರನ್ನು ಚೆನ್ನಾಗಿ ಬಲ್ಲವರ ಅಭಿಪ್ರಾಯವಾಗಿದೆ. ಇಂದು ಮತ್ತು ನಾಳೆ ಕೂಡ ಸಿದ್ದರಾಮಯ್ಯ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಬುಧವಾರ ರೆಸಾರ್ಟ್‌ನಿಂದ ಹೊರಟು ಮೈಸೂರಿನ ಭೂತಾಳೆ ಪಿಚ್‌ನಲ್ಲಿ ನಡೆಯುವ ಕಾಂಗ್ರೆಸ್ ಸಮಾವೇಶದಲ್ಲಿ ಪಾಲ್ಗೊಳ್ಳುವರು.





ಮೈಸೂರು ಖಿಲ್ಲೆ ಮೊಹಲ್ಲಾ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಕ್ರೈಸ್ತ ಧರ್ಮ ಪ್ರಾಂತ್ಯದ ಆಡಳಿತಾಧಿಕಾರಿ, ವಿಶ್ರಾಂತ ಬಿಷಪ್ ಬರ್ನಾಡ್ ಮೋರಸ್ ಹಾಗೂ ಕಲ್ಯಾಣಗಿರಿಯ ಮುಸ್ಲಿಂ ಧರ್ಮಗುರುಗಳಾದ ಸರ್ಕಾಜಿ ಮೌಲಾನಾ ಉಸ್ಮಾನ್ ಷರೀಫ್ ಅವರನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸೋಮವಾರ ಭೇಟಿ ಮಾಡಿ, ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಅಜೀಜ್ (ಅಬ್ದುಲ್ಲಾ) ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ. ಶಿವಣ್ಣ, ಜಿ.ಪಂ. ಮಾಜಿ ಅಧ್ಯಕ್ಷ ಬಿ.ಎಂ. ರಾಮು, ನಗರ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕೈಸರ್ ಅಹ್ಮದ್, ನಗರಪಾಲಿಕೆ ಮಾಜಿ ಸದಸ್ಯರಾದ ಹಸರತ್‌ವುಲ್ಲಾ, ಕಾಂಗ್ರೆಸ್ ವಕ್ತಾರ ಕೆ.ಮಹೇಶ್ ಸೇರಿದಂತೆ ಇತರರಿದ್ದರು.

ರಾಯಭಾರಿಗಳಾಗಿ ತನಿಷ್ಕಾ, ಕೃಪಾಕರ, ಸೇನಾನಿ ನೇಮಕ

ಮೈಸೂರು, ಮಾ. 25(ಬಿಎಲ್‌ಯು) –ಲೋಕಸಭಾ ಚುನಾವಣೆಯಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಿ, ಮತದಾನದ ಪ್ರಮಾಣ ಹೆಚ್ಚಳ ಮಾಡಲು ಮೈಸೂರು ಜಿಲ್ಲೆಯ ಸಾಧನೀಯ ವ್ಯಕ್ತಿಗಳನ್ನು ಚುನಾವಣಾ ಆಯೋಗ ರಾಯಭಾರಿಗಳನ್ನಾಗಿ ನೇಮಕ ಮಾಡಿದೆ.



ಕೃಪಾಕರ– ಸೇನಾನಿ

ಮಾಡೆಲಿಂಗ್ ಕ್ಷೇತ್ರದ ತನಿಷ್ಕಾ ಮೂರ್ತಿ, ಅಂತರರಾಷ್ಟ್ರೀಯ ವನ್ಯಜೀವಿ ಛಾಯಾ ಚಿತ್ರಗಾರ ಬಿ.ಎಸ್.ಕೃಪಾಕರ ಮತ್ತು ಸೇನಾನಿ ಅವರನ್ನು ಚುನಾವಣಾ ರಾಯಭಾರಿಗಳನ್ನಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದ್ದಾರೆ.



ತನಿಷ್ಕಾ ಮೂರ್ತಿ

ಲೋಕಸಭಾ ಚುನಾವಣೆಯಲ್ಲಿ ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ (ಸ್ವೀಪ್) ಅಡಿಯಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲು ರಾಯಭಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಹೇಳಿದ್ದಾರೆ.

ಜಿಲ್ಲಾಡಳಿತದ ವತಿಯಿಂದ ಕೈಗೊಳ್ಳುವ ಮತದಾನ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮತದಾರರಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತದೊಂದಿಗೆ ರಾಯಭಾರಿಗಳು ಕೈಜೋಡಿಸಲಿದ್ದಾರೆ ಎಂದು ಗಾಯತ್ರಿ ತಿಳಿಸಿದ್ದಾರೆ.

ಚನ್ನಪಟ್ಟಣ ತೊರೆದು ಮಂಡ್ಯದಲ್ಲಿ ಸ್ಪರ್ಧೆಗೆ ಭಾರಿ ವಿರೋಧ

ಮುಖಂಡರ ಸಮಾಧಾನಪಡಿಸಲು ಹರಸಾಹಸಪಟ್ಟ ಕುಮಾರಸ್ವಾಮಿ

ಬೆಂಗಳೂರು: ಮಂಡ್ಯ ಕ್ಷೇತ್ರದಿಂದ ಕಣಕ್ಕಿಳಿಯಲು ತೀರ್ಮಾನಿಸಿರುವ ಕುಮಾರಸ್ವಾಮಿ, ತಮ್ಮ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಮುಖಂಡರು ಮತ್ತು ಕಾರ್ಯಕರ್ತರ ಜೊತೆ ಈ ಸಂಬಂಧ ಇಂದು ತಮ್ಮ ನಿವಾಸದಲ್ಲಿ ಚರ್ಚೆ ಮಾಡಿದರು.

ಚರ್ಚೆ ಸಂದರ್ಭದಲ್ಲಿ ಕೆಲವು ಮುಖಂಡರು ಮತ್ತು ಕಾರ್ಯಕರ್ತರು, ಚನ್ನಪಟ್ಟಣ ಬಿಟ್ಟು ನಮ್ಮನ್ನು ಅನಾಥರನ್ನಾಗಿ ಮಾಡಬೇಡಿ, ಬೇಕಾದರೆ ನಿಖಿಲ್ ಕುಮಾರಸ್ವಾಮಿ ಅವರನ್ನು ಮಂಡ್ಯದಿಂದ ಕಣಕ್ಕಿಳಿಸಿ ಎಂದು ಮನವಿ ಮಾಡಿದರು. ಮಹಿಳೆಯರೂ ಸೇರಿದಂತೆ ಕೆಲವು ಕಾರ್ಯಕರ್ತರು ಕುಮಾರಸ್ವಾಮಿ ಅವರ ಕಾಲು ಹಿಡಿದು ಕಣ್ಣೀರಿಟ್ಟು, ಜಿಲ್ಲೆಯ ಕೆಲವು ರಾಜಕಾರಣಿಗಳ ಹಿಡಿತಕ್ಕೆ ಚನ್ನಪಟ್ಟಣ ಬಿಡಬೇಡಿ, ಬಿಟ್ಟರೆ, ಕಾರ್ಯಕರ್ತರಿಗೆ ಉಳಿಗಾಲವಿಲ್ಲ ಎಂದು ಗೋಗರೆದರು.

ಇದರ ಮಧ್ಯೆ, ಮಳವಳ್ಳಿಯಿಂದ ಬಂದಿದ್ದ ಭರತ್ ಎಂಬ ಕಾರ್ಯಕರ್ತ, ಅವರ ಮನೆಯ ಮುಂದೆ, ನೀವು ಮಂಡ್ಯದಿಂದ ಕಣಕ್ಕಿಳಿಯಬೇಕೆಂದು ಆತನ ಬಲಗೈ ಕೊಯ್ದುಕೊಂಡ. ಚನ್ನಪಟ್ಟಣ ಕಾರ್ಯಕರ್ತರ ಸಭೆಯಲ್ಲಿ ಪಕ್ಷದ ಉಳಿವಿನ ದೃಷ್ಟಿಯಿಂದ ನಾವು ನಿರ್ಧಾರ ತೆಗೆದುಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿದೆ ಎಂದು ಕುಮಾರಸ್ವಾಮಿ ಸಭೆಗೆ ತಿಳಿಸಿದರು.

ನಾನು ಎದುರಿಸಿದ ವೈಯಕ್ತಿಕ ರಾಜಕೀಯ ಸವಾಲುಗಳನ್ನು ನೀವೇ ನೋಡಿದ್ದೀರಿ. ಕಷ್ಟ ಕಾಲದಲ್ಲಿ ನನ್ನ ಕೈ ಹಿಡಿದಿದ್ದೀರಿ, ಚನ್ನಪಟ್ಟಣ ಕಾರ್ಯಕರ್ತರಾದ ನೀವು ಕೇಳಿದಾಗ ಬಂದು ನಾನು ನಿಮ್ಮ ಜತೆ ನಿಂತಿದ್ದೇನೆ.

ನಿಮ್ಮ–ನನ್ನ ನಡುವಿನ ಸಂಬಂಧ ತಾಯಿ–ಮಗನ ಸಂಬಂಧ, ನನ್ನನ್ನು ಮಗನಂತೆ ಕಂಡಿದ್ದೀರಿ, ರಾಜ್ಯದಲ್ಲಿ ಪಕ್ಷ ಉಳಿಸುವ ಸಮಯ ಬಂದಿದೆ. ಅದಕ್ಕೆ ನಿಮ್ಮ ಸಹಕಾರವೂ ಬೇಕು, ಪಕ್ಷಕ್ಕಾಗಿ ಕಠಿಣ ನಿರ್ಧಾರ ಕೈಗೊಳ್ಳಬೇಕು ಎಂದರು. ಈ ಜೀವ ಇರುವ ತನಕ ನಾನು ಚನ್ನಪಟ್ಟಣ, ರಾಮನಗರ ಬಿಡುವ ಪ್ರಶ್ನೆಯೇ ಇಲ್ಲ. ನನ್ನ ಹೋರಾಟ ಇಲ್ಲಿಗೇ ನಿಲ್ಲುವುದಿಲ್ಲ, ರಾಜ್ಯದಲ್ಲಿ ನಾನು ದೊಡ್ಡ ಮಟ್ಟದ ಹೋರಾಟ ಮಾಡಬೇಕು. ನೀವು ಒಪ್ಪಿಗೆ ಕೊಡಬೇಕು, ನೀವು ಒಪ್ಪಿಗೆ ಕೊಟ್ಟರೆ ಮಾತ್ರ ನಾನು ಪಕ್ಷ ಬಲಪಡಿಸುವ ಕೆಲಸ ಮಾಡಬಹುದು. ಮಾಜಿ ಮುಖ್ಯಮಂತ್ರಿಗಳ ಮಾತಿಗೆ ಸಭೆಯಲ್ಲಿ ಬಹುತೇಕರು ಸಹಮತ ವ್ಯಕ್ತಪಡಿಸಿದರೆ, ಅನೇಕ ಮುಖಂಡರು ಪಕ್ಷ ಉಳಿಸಲು ನಿಮ್ಮ ನಿರ್ಧಾರಕ್ಕೆ ಬದ್ಧ ಎಂದರು.

ನೀವು ಚನ್ನಪಟ್ಟಣದಲ್ಲಿಯೇ ಇರಬೇಕು ಎಂಬ ಕೆಲವರ ಮನವಿಯ ಹಿನ್ನೆಲೆಯಲ್ಲಿ ಅವರನ್ನು ಸಮಾಧಾನಪಡಿಸಿದ ನಿಖಿಲ್ ಕುಮಾರಸ್ವಾಮಿ, ಪಕ್ಷ ಬಲಪಡಿಸುವ ಅನಿವಾರ್ಯತೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟರು.

ಬಿಜೆಪಿಗೆ ಮರಳಿದ ಗಣಿಧಣಿ ಜನಾರ್ದನ ರೆಡ್ಡಿ

●ಮಾಜಿ ಸಿಎಂ ಜಗದೀಶ್ ಶೆಟ್ಟರ್ ನಂತರ ಮತ್ತೋರ್ವ ಪ್ರಮುಖ ನಾಯಕನ ಪುನರಾಗಮನ ●ತಮ್ಮ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವೂ ಬಿಜೆಪಿಯಲ್ಲಿ ವಿಲೀನ



ಬೆಂಗಳೂರು, ಮಾ.25(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ನಂತರ ಗಣಿ ಧಣಿ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಅಧ್ಯಕ್ಷ ಗಾಲಿ ಜನಾರ್ದನ ರೆಡ್ಡಿ ಬಿಜೆಪಿಗೆ ಮರಳಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಕಡೆಗಾಣಿಸಲಾಗಿದೆ ಎಂದು ಬಿಜೆಪಿ ವರಿಷ್ಠರ ವಿರುದ್ಧ ಮುನಿಸಿಕೊಂಡು ಕಲ್ಯಾಣ ಕರ್ನಾಟಕ ಭಾಗಕ್ಕೆ ಸೀಮಿತವಾಗಿ ಪಕ್ಷ ಕಟ್ಟಿ ತಾವು ವಿಧಾನಸಭೆ ಪ್ರವೇಶಿಸಿದ್ದರು. ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರು ರೆಡ್ಡಿ ಜೊತೆ ಸಂಧಾನ ನಡೆಸಿ ಬಿಜೆಪಿಗೆ ಸೇರ್ಪಡೆಗೊಳ್ಳಲು ಹಾದಿ ಸುಗಮಗೊಳಿಸಿದ್ದರು.

ಬಿಜೆಪಿ ವರಿಷ್ಠರಿಂದ ಹಸಿರು ನಿಶಾನೆ ದೊರೆಯುತ್ತಿದ್ದಂತೆ ರೆಡ್ಡಿ ಇಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಮ್ಮುಖದಲ್ಲಿ ಕಮಲದ ಚಿಹ್ನೆ ಹಿಡಿದರು. ತಾವು ಕಮಲದ ಚಿಹ್ನೆ ಹಿಡಿಯುವುದರ ಜೊತೆಗೆ ಪಕ್ಷವನ್ನು ಬಿಜೆಪಿಯಲ್ಲಿ ಪೂರ್ಣವಾಗಿ ವಿಲೀನಗೊಳಿಸಿದರು. ಈ ಸಂದರ್ಭದಲ್ಲಿ ಬಳ್ಳಾರಿ ಮತ್ತು ವಿಜಯನಗರದ ಮುಖಂಡರು, ಬಳ್ಳಾರಿ ಲೋಕಸಭಾ ಅಭ್ಯರ್ಥಿ ಶ್ರೀರಾಮುಲು ಉಪಸ್ಥಿತರಿದ್ದರು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತನಾಡಿ, ರಾಜ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಪಕ್ಷಕ್ಕೆ ಐತಿಹಾಸಿಕ ಗೆಲುವು ಖಚಿತ, ರೆಡ್ಡಿ ಅವರು ತಮ್ಮ ಪಕ್ಷವನ್ನು ಬಿಜೆಪಿ ಜೊತೆ ವಿಲೀನಗೊಳಿಸಿದ್ದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಬಿಜೆಪಿಗೆ ದೊಡ್ಡ ಶಕ್ತಿ ಬಂದಿದೆ, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಮಂತ್ರಿಯಾಗಿ ಮಾಡಲು ಪಕ್ಷ ಸೇರಿದ್ದಾರೆ ಎಂದರು. ರಾಜ್ಯದಲ್ಲಿ ಬಿಜೆಪಿ ಪರ ವಾತಾವರಣ ಇದೆ. ಮುಂದಿನ ಲೋಕಸಭಾ ಚುನಾವಣೆ ದೇಶದ ಭವಿಷ್ಯ ರೂಪಿಸಲಿದೆ. ಪಕ್ಷದ ಹಿತದೃಷ್ಟಿ, ಏಳಿಗೆಗಾಗಿ ಎಲ್ಲರನ್ನೂ ತೊಡಗಿಸಿಕೊಳ್ಳಲಿದ್ದೇವೆ ಎಂದರು.

ಗಾಲಿ ಜನಾರ್ದನ ರೆಡ್ಡಿ ಮಾತನಾಡಿ, ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು ವಿಲೀನ ಮಾಡಿದ್ದೇವೆ. ಪಕ್ಷದ ಎಲ್ಲ ಕಾರ್ಯಕರ್ತರು, ಬೆಂಬಲಿಗರು ಯಡಿಯೂರಪ್ಪ ಅವರ ಆಶೀರ್ವಾದ, ವಿಜಯೇಂದ್ರ ಅವರ ನೇತೃತ್ವದಲ್ಲಿ ಬಿಜೆಪಿ ಸೇರಿದ್ದೇವೆ. ದೇಶದ ಸಮಗ್ರತೆ, ಸರ್ವತೋಮುಖ ಅಭಿವೃದ್ಧಿಗೆ, ಭಾರತವನ್ನು ವಿಶ್ವಗುರುವಾಗಿಸುವಲ್ಲಿ ಕೆಲಸ ಮಾಡಿದ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಪಕ್ಷ ಸೇರಿದ್ದೇನೆ ಎಂದರು. ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ತಮ್ಮನ್ನು ದೆಹಲಿಗೆ ಆಹ್ವಾನಿಸಿ, ಬಿಜೆಪಿಗೆ ಸೇರಲು ತಿಳಿಸಿದಂತೆ ಪಕ್ಷ ಸೇರಿದ್ದೇನೆ. ಯಡಿಯೂರಪ್ಪ ಅವರು ನಾನು ಸಚಿವನಾಗಲು ಅತೀ ಚಿಕ್ಕ ವಯಸ್ಸಿನಲ್ಲೇ ಅವಕಾಶ ಕೊಟ್ಟಿದ್ದರು ಎಂದು ಸ್ಮರಿಸಿದರು.

ಲೋಕಸಭಾ ಚುನಾವಣೆಯಲ್ಲಿ ವೀರಪ್ಪನ್ ಪುತ್ರಿ ವಿದ್ಯಾರಾಣಿ ಸ್ಪರ್ಧೆ

ಚೆನ್ನೈ,ಮಾ.25(ಬಿಎಲ್‌ಯು)– ಕಾಡುಗಳ್ಳ ವೀರಪ್ಪನ್ ಪುತ್ರಿ ವಿದ್ಯಾರಾಣಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿರುವ ವಿದ್ಯಾರಾಣಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ವಿದ್ಯಾರಾಣಿ, ತಮಿಳುನಾಡಿನ ಕೃಷ್ಣಗಿರಿ ಲೋಕಸಭಾ ಕ್ಷೇತ್ರದಿಂದ ನಾಮ್ ತಮಿಳರ್ ಕಚ್ಚಿ(ಎನ್‌ಟಿಕೆ) ಪಕ್ಷದ ಅಭ್ಯರ್ಥಿಯಾಗಿದ್ದಾರೆ. ವೃತ್ತಿಯಲ್ಲಿ ವಕೀಲೆಯಾಗಿರುವ ವಿದ್ಯಾರಾಣಿ ಕೃಷ್ಣಗಿರಿಯಲ್ಲಿ ಶಾಲೆ ಕೂಡ ನಡೆಸುತ್ತಿದ್ದಾರೆ. ಬಿಜೆಪಿಗೆ ಸೇರ್ಪಡೆಯಾಗುವ ಮೂಲಕ ವಿದ್ಯಾರಾಣಿ ರಾಜಕಾರಣಕ್ಕೂ ಪ್ರವೇಶ ಮಾಡಿದ್ದರು. ಅವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷೆಯಾಗಿ ನೇಮಕ ಮಾಡಲಾಗಿತ್ತು. 2020, ಜುಲೈನಲ್ಲಿ ಬಿಜೆಪಿ ಸೇರಿದ್ದ ವಿದ್ಯಾರಾಣಿ ಈಗ ಕೇಸರಿ ಪಕ್ಷ ತೊರೆದು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಎನ್‌ಟಿಕೆ ಆಯ್ಕೆ ಮಾಡಿಕೊಂಡಿದ್ದಾರೆ.

ನಾಮ್ ತಮಿಳರ್ ಕಚ್ಚಿ ಪಕ್ಷವನ್ನು ಸೀಮನ್ ಮುನ್ನಡೆಸುತ್ತಿದ್ದಾರೆ. ಡಿಎಂಕೆ, ಎಐಡಿಎಂಕೆಯಂತೆ ಎನ್‌ಟಿಕೆ ಪಕ್ಷ ಕೂಡ ಹಲವು ಚುನಾವಣೆಗಳಲ್ಲಿ ಹೆಚ್ಚು ಮತ ಪಡೆದಿತ್ತು.

ಕುಮಾರಸ್ವಾಮಿಗೆ ಫುಲ್ ಡಿಮ್ಯಾಂಡ್!

ಆರೋಗ್ಯ ವಿಚಾರಿಸುವ ನೆಪದಲ್ಲಿ ಬೆಂಬಲ ಯಾಚಿಸಿದ ಬಿಜೆಪಿ ಸ್ಪರ್ಧಿಗಳು





ಬೆಂಗಳೂರು ದಕ್ಷಿಣ ಕ್ಷೇತ್ರದ ಅಭ್ಯರ್ಥಿ ತೇಜಸ್ವಿ ಸೂರ್ಯ, ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸುಧಾಕರ್, ಬಳ್ಳಾರಿ ಅಭ್ಯರ್ಥಿ ಶ್ರೀರಾಮುಲು, ಚಿತ್ರದುರ್ಗ ಕ್ಷೇತ್ರದ ಸಂಭಾವ್ಯ ಅಭ್ಯರ್ಥಿ ಗೋವಿಂದ ಕಾರಜೋಳ ಅವರು ಮಾಜಿ ಸಿಎಂ ಕುಮಾರಸ್ವಾಮಿ ಆರೋಗ್ಯ ವಿಚಾರಿಸಿದರು. ಈ ವೇಳೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉಪಸ್ಥಿತರಿದ್ದರು.

ಬೆಂಗಳೂರು, ಮಾ.25(ಕೆಎಂಶಿ)– ಹೃದಯ ಶಸ್ತ್ರಚಿಕಿತ್ಸೆ ಪಡೆದು ನಗರಕ್ಕೆ ಹಿಂತಿರುಗಿದ ನಂತರ ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಮಿತ್ರ ಪಕ್ಷದ ಅಭ್ಯರ್ಥಿಗಳಿಂದ ಭಾರಿ ಬೇಡಿಕೆ ಹೆಚ್ಚಿದೆ.

ವಿಶ್ರಾಂತಿಗೂ ಅವಕಾಶ ನೀಡದೆ, ಬಿಜೆಪಿಯಿಂದ ಕಣಕ್ಕಿಳಿದಿರುವ ಅಭ್ಯರ್ಥಿಗಳು ಮತ್ತು ಮುಖಂಡರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ತಮ್ಮನ್ನು ಬೆಂಬಲಿಸಿ ತಮ್ಮ ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ದಿನಗಳನ್ನು ಮೀಸಲಿಡುವಂತೆ ಮನವಿ ಮಾಡಿದ್ದಾರೆ. ಅವರ ಆರೋಗ್ಯ ವಿಚಾರಿಸುವ ನೆಪದಲ್ಲೇ ತಮ್ಮ ಕ್ಷೇತ್ರಗಳ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿರುವ ಅಭ್ಯರ್ಥಿಗಳು, ತಾವು ಹಾಗೂ ಯಡಿಯೂರಪ್ಪ ಜಂಟಿಯಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಎಂದಿದ್ದಾರೆ. ಬಿಜೆಪಿ ನಾಲ್ಕು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸುತ್ತಿದ್ದಂತೆ ಡಾ. ಸುಧಾಕರ್ (ಚಿಕ್ಕಬಳ್ಳಾಪುರ), ಚಿತ್ರದುರ್ಗ ಮೀಸಲು ಕ್ಷೇತ್ರಕ್ಕೆ ಸಂಭವನೀಯ ಅಭ್ಯರ್ಥಿ ಆಗಿರುವ ಗೋವಿಂದ ಕಾರಜೋಳ, ಬಳ್ಳಾರಿ ಅಭ್ಯರ್ಥಿ ಶ್ರೀರಾಮುಲು ಭೇಟಿಯಾಗಿ ಮಾತುಕತೆ ನಡೆಸಿದರು. ಬೆಂಗಳೂರು ದಕ್ಷಿಣ ಕ್ಷೇತ್ರದ ಅಭ್ಯರ್ಥಿ ತೇಜಸ್ವಿ ಸೂರ್ಯ, ಸಂಸದ ಕರಡಿ ಸಂಗಣ್ಣ ಸೇರಿದಂತೆ ಹಲವು ಬಿಜೆಪಿ ನಾಯಕರು ಭೇಟಿ ಮಾಡಿ ಸಮಾಲೋಚನೆ ನಡೆಸಿದರೆ, ಕೆಲವರು ತಮ್ಮ ಕ್ಷೇತ್ರಗಳಲ್ಲಿ ಪ್ರಚಾರ ನಡೆಸುವಂತೆ ಮನವಿ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಅಪ್ಪ : (ಬೆಡ್ ಲ್ಯಾಂಪ್ ತಗೊಂಡು ಬಾ ಎಂದು ಹೇಳಿ ಹತ್ತು ನಿಮಿಷದ ನಂತರ ಬರೀಗೈಲಿ ಬಂದ ಮಗನಿಗೆ) ಯಾಕೋ ಹಾಗೇ ಬಂದೆ? ಎಲ್ಲೂ ಇರ್ಲಿಲ್ವಾ?

ಮಗ : ಅಪ್ಪ ಲ್ಯಾಂಪ್ ಸಿಂಗಲ್ ಬೆಡ್ಡಿಗೋ ಡಬಲ್ ಬೆಡ್ಡಿಗೋ ಹೇಳ್ಲಿಲ್ಲಾ!

ಮೈಸೂರು ಮಿತ್ರ

ಮಂಗಳವಾರ, 26 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಒಮ್ಮೆಲೆ ದುಡುಕಬಾರದು. ಆವೇಶ ಆಪತ್ತುಗಳ ಮೂಲ –ಭಾರವಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಬಲಿಯಂತಹ ಊಟವಿಲ್ಲ, ಕಂಬಳಿಯಂತಹ ಹೊದಿಕೆ ಇಲ್ಲ.

ನಿಮ್ಮ ಪತ್ರಗಳು

ಸೂಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ!

ಮಾನ್ಯರೆ,



ಸಾಕಷ್ಟು ಕುತೂಹಲ ಕೆರಳಿಸಿರುವ ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್‌ನಲ್ಲಿ ಸೂಕ್ತ ಅಭ್ಯರ್ಥಿಗಳ ಕೊರತೆ ಎದ್ದು ಕಾಣುತ್ತಿದೆ. ಅನೇಕ ಕ್ಷೇತ್ರಗಳಲ್ಲಿ ಸಚಿವರ ಮಗ, ಮಗಳು ಅಥವಾ ಅವರ ಸಂಬಂಧಿಕರನ್ನೋ ಇಲ್ಲ ಅನಿವಾರ್ಯ ಎಂಬಂತೆ ಪಕ್ಷದ ಸಾಮಾನ್ಯ ಕಾರ್ಯಕರ್ತರನ್ನೋ ನಿಲ್ಲಿಸಲಾಗಿದೆ. ಸಾಮಾನ್ಯವಾಗಿ ಚುನಾವಣೆಗಳಲ್ಲಿ ಪ್ರಭಾವಶಾಲಿ ವ್ಯಕ್ತಿಗಳನ್ನು, ಮತಗಳನ್ನು ಸೆಳೆಯಬಲ್ಲಂತಹ ವರ್ಚಸ್ವಿ ನಾಯಕರನ್ನು ಅಭ್ಯರ್ಥಿಗಳನ್ನಾಗಿ ಸ್ಪರ್ಧೆಗಿಳಿಸುವ ಪರಿಪಾಠವಿದೆ. ಆದರೆ ಈಗ ಕೆಲವು ಕ್ಷೇತ್ರಗಳಲ್ಲಿ ಪಕ್ಷಾಂತರಿಗಳಿಗೆ ಮಣೆ ಹಾಕಿ ರಣವೀಳ್ಯ ನೀಡಲಾಗುತ್ತಿದೆ.

ರಾಜ್ಯದಲ್ಲಿ ಸಚಿವರೇ ಸ್ಪರ್ಧಿಸಲು ನಿರಾಕರಿಸುತ್ತಿದ್ದಾರೆ ಎಂಬ ವರದಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ಸ್ಪರ್ಧಿಸದಿದ್ದರೆ, ಸಚಿವ ಪದವಿಯಾದರೂ ಉಳಿಯುತ್ತದೆ. ಸೋತರೆ ಎಲ್ಲಿಗಪ್ಪಾ ಹೋಗುವುದು ಎಂಬ ಚಿಂತೆ ಅವರನ್ನು ಕಾಡುತ್ತಿರಬಹುದು. ಈಗಾಗಲೇ ಸಾಕಷ್ಟು ಗರಿಗೆದರಿರುವ ಲೋಕಸಭಾ ಚುನಾವಣೆಯ ರಣರಂಗ ಸೂಕ್ತ ಹುರಿಯಾಳುಗಳಿಲ್ಲದೇ ಸಪ್ಪೆ ಅನ್ನಿಸುತ್ತಿದೆ. ರಣರಂಗದಲ್ಲಿ ಮದಗಜಗಳು ಕಾದಾಡಬೇಕೇ ಹೊರತು ಮೇಕೆ ಮರಿಗಳಲ್ಲ. ಆದರೂ ಅಂತಿಮ ಕ್ಷಣದಲ್ಲಿ ಏನು ಬೇಕಾದರೂ ಸಂಭವಿಸಬಹುದು. ಇದನ್ನೇ ರಣತಂತ್ರ ಎಂದು ಕರೆಯಲಾಗುತ್ತದೆ. ಅಲ್ಲವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, ಮೊ.9341731661

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹೊರಟ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರಲಿ

ಮಾನ್ಯರೇ



ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಶುರುವಾಗಿದೆ. ಮಕ್ಕಳು ಪರೀಕ್ಷಾ ಸಮಯಕ್ಕೆ ಅವರಿಗೆ ನಿಗದಿಯಾದ ಶಾಲೆಗಳಿಗೆ ಸರಿಯಾದ ಸಮಯಕ್ಕೆ ತಲುಪಬೇಕಿದೆ.

ಈಗ ಜಾತ್ರೆ, ಹಬ್ಬಗಳ ಸಮಯ. ಜೊತೆಗೆ ಚುನಾವಣಾ ಜಾತ್ರೆ ಬೇರೆ. ನಿಮ್ಮ 'ಶಕ್ತಿ' ಬಿಟ್ಟಿ ಯೋಜನೆಯಿಂದ ಕಿಕ್ಕಿರಿದ ಜನ ತುಂಬುವುದರಿಂದ ಮಕ್ಕಳು ಇರುವಲ್ಲಿ ಬಸ್ ನಿಲ್ಲಿಸದೇ ಹೋದರೆ ಅವರು ಪರೀಕ್ಷೆಗೆ ಹೋಗುವುದಾದರೂ ಹೇಗೆ? ಹಾಗಾಗಿ ಮಕ್ಕಳಿಗೆ ಬಹಳ ತೊಂದರೆಗಳಾಗುವ ಸಾಧ್ಯತೆಗಳಿವೆ. ಹಳ್ಳಿಗಳ ಕಡೆಯಂತೂ ಇದು ಹೆಚ್ಚು.

* **ಪರೀಕ್ಷೆ ಮುಗಿಯುವವರೆಗೂ ನಿಮ್ಮ ಸ್ತ್ರೀ 'ಶಕ್ತಿ' ನಿಲ್ಲಿಸಿ.**
* **ಬದಲಿಗೆ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಪ್ರಯಾಣ ಎಂದು ಘೋಷಿಸಿ.**
* **ಪ್ರಯಾಣಿಸುವ ಜನರೂ ವಿದ್ಯಾರ್ಥಿಗಳ ಪ್ರಯಾಣಕ್ಕೆ ಅವಕಾಶ ಮಾಡಿಕೊಡಿ**
* **ಚಾಲಕರು, ನಿರ್ವಾಹಕರು ಸರಿಯಾದ ಸಮಯಕ್ಕೆ ಹೊರಡುವುದರ ಜೊತೆಗೆ ವಿದ್ಯಾರ್ಥಿಗಳು ಕಂಡಲ್ಲಿ ಕಡ್ಡಾಯವಾಗಿ ಬಸ್ ನಿಲ್ಲಿಸಿ ಹತ್ತಿಸಿಕೊಳ್ಳಿ**
* **ಸ್ತ್ರೀಯರು ಹದಿನೈದು ದಿನಗಳ ಮಟ್ಟಿಗೆ ಸೀಟಿಗಾಗಿ ಫೈಟ್ ನಿಲ್ಲಿಸಿ. ಪರೀಕ್ಷೆಗೆ ಹೋಗುವ ಮಕ್ಕಳು ಗಾಬರಿಯಾಗುವಂತೆ ನೀವು ವರ್ತಿಸಬೇಡಿ.**

–ಎಂ.ಎಸ್.ಪರಮಾನಂದ, ರಾಜ್ಯ ಕಾರ್ಯದರ್ಶಿ, ಎಸ್‌ಸಿ ಮೋರ್ಚಾ, ಬಿಜೆಪಿ

ಯದುವೀರ್ ಅಚ್ಚರಿಯ ಆಯ್ಕೆಯಲ್ಲ!

ಮಾನ್ಯರೆ,



ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ಆಯ್ಕೆ ಬಗ್ಗೆ ಸಾಕಷ್ಟು ಊಹಾಪೋಹಗಳಿದ್ದವು. ಮೈಸೂರಿಗೆ ಸಾಕಷ್ಟು ಕೊಡುಗೆ ನೀಡಿದ ಪ್ರತಾಪ್ ಸಿಂಹರನ್ನು ಬಿಟ್ಟು ಕೊನೆಗೂ ಯದುವೀರ್‌ರನ್ನು ಅಭ್ಯರ್ಥಿ ಎಂದು ಘೋಷಿಸಲಾಯಿತು.

ಇದಕ್ಕೆ ಅವರ ರಾಜಸ್ಥಾನ ಮೂಲದ ರಾಜಕೀಯ ನೆಂಟಸ್ಥನ ಕಾರಣ ಎಂದು ಹೇಳಲಾಗುತ್ತಿದೆ ಎಂದು ಈಗ ಪತ್ರಿಕೆಗಳಲ್ಲಿ ವರದಿಯಾಗಿದೆ. ಹಾಗಿದ್ದರೂ ಇನ್ನು ಪತ್ರಿಕೆಗಳಲ್ಲಿ, ಯದುವೀರ್ ಆಯ್ಕೆ ನಿಗೂಢ ಎಂಬ ಚರ್ಚೆಗಳು ಈಗಲೂ ವರದಿಯಾಗುತ್ತಲೇ ಇವೆ.

ಆದರೆ ಯದುವೀರ್ ಆಯ್ಕೆ ಅಚ್ಚರಿಯಲ್ಲ. ಈ ಆಯ್ಕೆ 22 ಜೂನ್ 2022 ರಂದು ಪ್ರಧಾನಿ ಮೋದಿಯವರು ತಮ್ಮ ಮೈಸೂರು ಭೇಟಿ ವೇಳೆ ರಾಜಕುಟುಂಬದ ಆಹ್ವಾನದ ಮೇರೆಗೆ ಮೈಸೂರು ಅರಮನೆಯಲ್ಲಿ ಬೆಳಗಿನ ಉಪಾಹಾರಕ್ಕೆ ಹಾಜರಾಗಿದ್ದರು. ಆ ವೇಳೆಯೇ ಈ ಬಗ್ಗೆ ಚರ್ಚೆಯಾಗಿ ಈ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಉಪಾಹಾರ ಕೂಟಕ್ಕೆ ಸಂಸದ ಪ್ರತಾಪ್ ಸಿಂಹರಿಗೆ ಆಹ್ವಾನವಿರಲಿಲ್ಲ ಎನ್ನುವುದು ಕೂಡ ವರದಿಯಾಗಿತ್ತು. ಆಗಲೇ ಈ ಬಗ್ಗೆ ಗುಸು ಗುಸು ಆರಂಭವಾಗಿತ್ತು. ಆದರೆ ಇದನ್ನು ಅರಮನೆಯವರು ನಿರಾಕರಿಸಿದ್ದರು. ಅಲ್ಲದೆ ರಾಜಕೀಯ ಪ್ರವೇಶವಿಲ್ಲ ಎಂದು ಕೂಡ ತಿಳಿಸಿದ್ದರು. ಇದೆಲ್ಲ ನಾನು ಅಂದಿನ ಪತ್ರಿಕೆಗಳಲ್ಲಿ ಓದಿದ ನೆನಪು. ಆದರೆ ಅದು ಇಂದು ಕಾರ್ಯ ರೂಪಕ್ಕೆ ಬಂದಿದೆ ಎನ್ನುವುದು ಈಗಿನ ಬೆಳವಣಿಗೆಗಳನ್ನು ಗಮನಿಸಿದಾಗ ಮನವರಿಕೆ ಆಗುತ್ತದೆ. ಬಹುಶಃ ಆಗಿನ ಭೇಟಿ, ಈಗಿನ ರಾಜಸ್ಥಾನ್ ಮೂಲದ ಪ್ರಭಾವ ಎರಡೂ ಕಾರಣವಾಗಿರಬಹುದು. ಅದೇನೇ ಇದ್ದರೂ ಇದರ ಮೂಲ ರಹಸ್ಯ ಜನರಿಗೆ ಇನ್ನೂ ನಿಗೂಢವೇ!!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಕಾಂಗ್ರೆಸ್ ನಾಯಕರ ಅಸಂಬದ್ಧ ಹೇಳಿಕೆ ಸರಿಯಲ್ಲ

ಮಾನ್ಯರೆ,

ಇತ್ತೀಚೆಗೆ ನಡೆದ ಕಾಂಗ್ರೆಸ್ ಪಕ್ಷದ ಬಹಿರಂಗ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ 'ನಾವು ಗಂಡಸರನ್ನು ನಂಬುವುದಿಲ್ಲ' ಹೆಂಗಸರನ್ನು ಮಾತ್ರ ನಂಬುತ್ತೇವೆ. ಗಂಡಸರಿಗೆ, ಹಣ ಸಿಕ್ಕರೆ ಬಾರ್‌ಗಳಿಗೆ ಹೋಗುತ್ತಾರೆ. ಆದರೆ ಹೆಂಗಸರು ಹಣ ಉಳಿಸಿ ಸಂಸಾರ ಸಾಗಿಸುತ್ತಾರೆ ಎಂದು ತಮ್ಮ ಅಸಂಬದ್ಧ ಹೇಳಿಕೆ ನೀಡುವ ಮೂಲಕ ಒಂದು ರೀತಿಯಲ್ಲಿ ಗಂಡಸರಿಗೆ ಅವಮಾನ ಮಾಡಿದ್ದಾರೆ.

ಮತ್ತೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಬಿಜೆಪಿಯವರ ಮನೆ ಹಾಳಾಗಿ ಹೋಗಲಿ' ಎಂದು ಶಾಪ ಹಾಕಿದ್ದಾರೆ. ಈ ಇಬ್ಬರ ಸಾರ್ವಜನಿಕ ವೇದಿಕೆಯಲ್ಲಿನ ಹೇಳಿಕೆಗಳನ್ನು ಗಮನಿಸಿದರೆ, ಪಕ್ಷದ ಉನ್ನತ ಮಟ್ಟದ ನಾಯಕರಾಗಿ ಸಾರ್ವಜನಿಕರ ಮುಂದೆ ನೀವುಗಳು ಹಾಸ್ಯಾಸ್ಪದವಾಗಿ ಕಾಣುವುದಿಲ್ಲವೇ?

ಯಾರೋ ಅನಾಗರಿಕರು ಬೀದಿಗಳಲ್ಲಿ ನಿಂತು ಮಾತನಾಡುವಂತೆ, ನೀವು ಮಾತನಾಡುವುದು ನಿಮ್ಮ ಹುದ್ದೆಗಳಿಗೆ ಗೌರವ ತರುವಂತಹದಲ್ಲ. ಸಾರ್ವಜನಿಕ ಜೀವನದಲ್ಲಿ ಇರುವ ನೀವುಗಳು ನಿಮ್ಮ ನಡೆ– ನುಡಿಗಳನ್ನು ಬದಲಾಯಿಸಿಕೊಳ್ಳದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಬರುವಂತಹ ಓಟುಗಳು ಸಹ ಬರುವುದಿಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ವಿಜ್ಞಾನ–ಗಮಕ ಕಲೆಗಳ ಸಂಗಮ ಶ್ರೀ ಕೃ.ರಾಮಚಂದ್ರ



ಕೃ ರಾಮಚಂದ್ರರು

ಕೃ.ರಾಮಚಂದ್ರರು ತಾವು ಮಾತ್ರ ಕಲಾವಿದರಾಗಿ ತೃಪ್ತಿ ಹೊಂದಿಲ್ಲ. ಗಮಕ ವಿದ್ಯೆಯನ್ನು ಅನೇಕ ಶಿಷ್ಯರಿಗೆ ಕಲಿಸಿ ಈ ಕಲೆ ವಿಶ್ವವ್ಯಾಪಿಯಾಗಿ ಹರಡಲು ಪ್ರೇರಣೆಯನ್ನು ನೀಡುತ್ತಿದ್ದಾರೆ. ಮನೆಯಲ್ಲೇ ಕುಮಾರವ್ಯಾಸ ಗುರುಕುಲವನ್ನು ನಡೆಸುತ್ತಿದ್ದಾರೆ. ಕಾವ್ಯರಂಜಿನೀ ಸಭೆಯನ್ನು ಆರಂಭಿಸಿ ಅನೇಕ ವಿದ್ವಾಂಸರನ್ನೂ, ಕಲಾವಿದರನ್ನೂ ಕರೆದು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ರಾಜ್ಯದಲ್ಲಿ ನಡೆಯುವ ಗಮಕ ಪರೀಕ್ಷೆಗಳಿಗೆ ಕೃ.ರಾಮಚಂದ್ರ ಪರೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಾಲ್ಮೀಕಿ ರಾಮಾಯಣವೂ ಇವರ ಪ್ರಿಯ ಗ್ರಂಥಗಳಲ್ಲೊಂದು. ಅದರ ಬಗೆಗೆ ಉಪನ್ಯಾಸಗಳನ್ನು ಮಾಡುವುದು ಇವರ ಹವ್ಯಾಸ. ಇಷ್ಟೊಂದು ಸದ್ಗುಣಗಳ ಗಣಿಯಾದ ರಾಮಚಂದ್ರರನ್ನು ಮೈಸೂರಿನ 'ಪರಂಪರೆ' 26–3–2024ರಂದು ಸಂಜೆ ನಾದಬ್ರಹ್ಮ ಸಭಾಂಗಣದಲ್ಲಿ ಅಭಿನಂದಿಸುತ್ತಿರುವುದು ಸ್ತುತ್ಯಾರ್ಹ. ಅವರಿಗೆ ನಮ್ಮ ಹಾರ್ದಿಕ ಅಭಿನಂದನೆ.

ವಿಜ್ಞಾನ ಮತ್ತು ಕಲೆ ಒಬ್ಬ ವ್ಯಕ್ತಿಯಲ್ಲಿ ಮೇಳೈಸುವುದು ವಿರಳ. ಒಂದೊಂದೂ ವ್ಯಕ್ತಿಯ ಸಂಪೂರ್ಣ ಅವಧಾನವನ್ನೂ, ಸಮಯವನ್ನೂ ಅಪೇಕ್ಷಿಸುತ್ತವೆ. ಆದರೂ ಕೆಲವರು ಈ ಎರಡನ್ನೂ ತಮ್ಮ ವೃತ್ತಿ–ಪ್ರವೃತ್ತಿಗಳಲ್ಲಿ ಅಳವಡಿಸಿಕೊಂಡು ಅಪೂರ್ವ ನೈಪುಣ್ಯವನ್ನು ಸಾಧಿಸುವುದುಂಟು. ಅಂತಹ ವಿರಳ ವ್ಯಕ್ತಿತ್ವದ ಒಬ್ಬರು ಇತ್ತೀಚೆಗೆ ಕುಮಾರವ್ಯಾಸ ಪ್ರಶಸ್ತಿಗೆ ಭಾಜನರಾಗಿರುವ ಶ್ರೀ ಕೃ.ರಾಮಚಂದ್ರ ಅವರು. ಮೈಸೂರಿನ ಸಾಂಸ್ಕೃತಿಕ ವಲಯದಲ್ಲಿ ಸುಪರಿಚಿತರಾಗಿರುವ ಈ ರಾಮಚಂದ್ರರು ಎಲ್ಲಕ್ಕೂ ಮೊದಲಾಗಿ ಶ್ರೇಷ್ಠ ಮಾನವರು. ಸರಳತೆ, ಸೌಜನ್ಯ, ಸಹೃದಯತೆ ಇವರಲ್ಲಿ ಮುಪ್ಪುರಿಗೊಂಡಿವೆ.

ವಿಜ್ಞಾನ: ಕೃ.ರಾಮಚಂದ್ರರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜಲ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಸ್ವರ್ಣಪದಕದೊಂದಿಗೆ ಗಳಿಸಿಕೊಂಡವರು. ಇವರು ವೃತ್ತಿಯನ್ನು ಮಾಡಿದ್ದೂ ಕರ್ನಾಟಕದ ನೀರಾವರಿ ಇಲಾಖೆಯಲ್ಲಿ. ತುಂಗಭದ್ರಾ ಯೋಜನೆ, ಹೇಮಾವತೀ ಯೋಜನೆ, ಕಾವೇರಿ ಜಲಾನಯನದ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ–ಇತ್ಯಾದಿಗಳಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆಯನ್ನು ಸಲ್ಲಿಸಿದವರು. ಎಲ್ಲಕ್ಕೂ ಹೆಚ್ಚಾಗಿ ಕೃಷ್ಣರಾಜಸಾಗರದ ಇಂಜಿನಿಯರಿಂಗ್ ತರಬೇತಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಬೋಧನೆಯನ್ನು ಮಾಡಿ ನಿವೃತ್ತಿಯನ್ನು ಪಡೆದವರು. ನಿವೃತ್ತಿಯ ಅನಂತರವೂ ಅವರನ್ನು ಅನೇಕ ಸಂಸ್ಥೆಗಳು ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸುತ್ತಿವೆ. ಅವರು ಈಗ 80 ವರ್ಷಗಳನ್ನು ದಾಟಿದ ಹಿರಿಯರು. ಆದರೂ ಅವರ ಬೋಧನೋತ್ಸಾಹವನ್ನು ನೋಡಿದಾಗ ಅವರಿಗೆ ಇನ್ನೂ ಹದಿನೆಂಟು ವರ್ಷಗಳೆನಿಸುತ್ತದೆ.

ಗಮಕ ಕಲೆ: ಕರ್ನಾಟಕದಲ್ಲಿ ಸಾವಿರಾರು ವರ್ಷಗಳಿಂದ ಗಮಕ ಕಲೆ ಬೆಳೆದು ಬಂದಿದೆ. ರಾಜರ ಆಸ್ಥಾನದಲ್ಲಿ ಕವಿ, ಗಮಕಿ, ವಾಗ್ಮಿಗಳಿಗೆ ಪ್ರಮುಖ ಸ್ಥಾನವಿತ್ತು. ಕನ್ನಡ ಕಾವ್ಯಗಳನ್ನು ರಾಗಸಹಿತವಾಗಿ ಕೇಳುಗರಿಗೆ ಅರ್ಥವಾಗುವಂತೆ ರಂಜನೀಯವಾಗಿ ಓದುವುದು ಗಮಕ. ಹಾಗೆ ಓದಬಲ್ಲವನು ಗಮಕಿ. ರಾಘವೇಂದ್ರರಾಯರೆಂಬ ಗಮಕಿಗಳು ಗಮಕಿಯ ಲಕ್ಷಣವನ್ನೂ, ವೈಶಿಷ್ಟ್ಯವನ್ನೂ ಎರಡು ಪದ್ಯಗಳಲ್ಲಿ ಹೇಳಿದ್ದಾರೆ.–

ಪದಗಳ ಏರಿಳಿತವ ಮೇಣ್
ಪದ ವೃಂದದ ಮಂದ–ತೀವ್ರ–ವಿಷಮ ಗತಿಯ।
ಪದಗಳ ಕುಣಿತದ ಸೊಬಗನು
ಪದ ಕಂಪನದ ಲಕ್ಷಣಂಗಳನರಿವನು ಗಮಕೀ ॥
ಪದಗಳ ಬೀಸನು ಬಿರುಸನು
ಪದಗಳ ಪ್ರತಿ ಒಳಸಂಗತಿಯ ರಭಸದ ಮತ್ತಾ
ಪದಗಳ ಸಮವಿಷಮ ನಡೆಯ
ಪದ ಹಿನ್ನಡೆ ಮುನ್ನಡೆಗಳನರಿವನು ಗಮಕೀ ॥

ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಮಹಾಕವಿಗಳ ಕಾವ್ಯಗಳು ಇಂದೂ ಜನಪ್ರಿಯವಾಗಿರುವುದಕ್ಕೆ ಮುಖ್ಯ ಕಾರಣ ಗಮಕ ಕಲಾವಿದರು. ಗಮಕವನ್ನು ಕೇಳುವಾಗ ಆಗುವ ಅನುಭವ ನಿಜವಾಗಿ ಲೋಕೋತ್ತರ.

ಕೃ.ರಾಮಚಂದ್ರರಿಗೆ ಗಮಕ ಒಲಿದಿದ್ದು ಹೇಗೆ?

ಗಮಕ ಕಲೆಯ ಮೇರು ಶಿಖರ ಎನಿಸಿದ್ದ ಕೃಷ್ಣಗಿರಿ ಕೃಷ್ಣರಾಯರು ಗಮಕ ವಾಚನ ಮಾಡಿದರೆಂದರೆ ಸಾಕು, ಶ್ರೋತೃಗಳು ರಸಾಮೃತ ಪಾನ ಮಾಡುತ್ತಿದ್ದರು. ಅವರೊಮ್ಮೆ ಮಲೆನಾಡಿನಲ್ಲಿ ಕುಮಾರವ್ಯಾಸ ಭಾರತದ ವಾಚನ ಮಾಡಿದಾಗ ಭಾವಾವೇಶಕ್ಕೆ ಒಳಗಾದ ಮಹಾಕವಿ ಕುವೆಂಪು ಆಗಲೇ ರಚಿಸಿದ ಗೀತೆ ಹೀಗಿದೆ –

ಹಾಡಿದನು ಗಮಕಿ;
ನಾಡು ನಲಿದುದು ರಸದ ಕಡಲಿನಲಿ ದುಮುಕಿ:
ಆ ಅರಣ್ಯಾಕಾಶಗಳ ಬೃಹನ್ಮೌನದಲಿ,
ಕತ್ತಲಲಿ ಕನಸಾದ ವಿಸ್ತೀರ್ಣ ಧಾತ್ರಿಯಲಿ,
ಚೈತ್ರ ರಾತ್ರಿಯಲಿ,
ಮಸಗಿ ತೆರೆತೆರೆಯಾಗುತುಬ್ಬಿ
ಹಸರಿ ನೊರೆನೊರೆಯುಕ್ಕಿ ಹಬ್ಬಿ
ತೀರವನ್ನಪ್ಪಳಿಸಿ ಕೊಬ್ಬಿ
ಭೋರಿಡುವ ವಾರಿಧಿಯ
ಘನಘೋಷದಂದದಲಿ ತೆರೆಯ ತಬ್ಬಿ
ಮೊಳಗಿ ಬರೆ ಕವಿ ಕುಮಾರವ್ಯಾಸನಾವೇಶ ವಾಣಿ!
ರೋಮಾಂಚನದಿ ವಿಕಂಪಿಸಿತ ಸಹ್ಯಾದ್ರಿ ಶ್ರೇಣಿ!

ಗಮಕಿಗೂ, ಗಮಕ ಕಲೆಗೂ ಇದಕ್ಕಿಂತ ದೊಡ್ಡ ಪ್ರಮಾಣ ಪತ್ರವನ್ನು ಇನ್ನು ಯಾರು ಕೊಡಲು ಸಾಧ್ಯ? ಈ ಕೃಷ್ಣಗಿರಿ ಕೃಷ್ಣರಾಯರೇ ಕೃ.ರಾಮಚಂದ್ರರ ಪೂಜ್ಯ ತಂದೆಯವರು. ಹೀಗೆ ರಕ್ತಗತವಾಗಿ ಬಂದಿತು ಗಮಕ. ತಂದೆಯ ಮಾರ್ಗ ನಿರ್ದೇಶನದಲ್ಲಿ ತರುಣ ರಾಮಚಂದ್ರರು ಗಮಕ ಕಲೆಯ ಒಂದೊಂದು ಮೆಟ್ಟಿಲನ್ನೂ ಏರಿದರು.

ಕಾಳಿದಾಸನ ಮಾತಿನಲ್ಲಿ ಹೇಳಬೇಕು ಎಂದರೆ –

ಪ್ರವರ್ತಿತೋ ದೀಪ ಇವ ಪ್ರದೀಪಾತ್.

ಯಾವ ಕಾರ್ಯಕ್ರಮಕ್ಕೆ ಬರಬೇಕಾದರೂ ಕೃ.ರಾಮಚಂದ್ರರು ಪೂರ್ವ ಸಿದ್ಧತೆಯಿಲ್ಲದೆ ಬರುವುದಿಲ್ಲ. ಶ್ರೋತೃಗಳನ್ನು ಎಂದೂ ಲಘುವಾಗಿ ಪರಿಗಣಿಸುವುದಿಲ್ಲ. ವಿದ್ವತ್ಸಭೆಯಿರಲಿ, ಹಳ್ಳಿಯ ದೇವಸ್ಥಾನದಲ್ಲಿ ನಡೆಯುವ ಕಾರ್ಯಕ್ರಮವಾಗಲಿ, ಎಚ್ಚರಿಕೆಯಿಂದ ಒಂದೊಂದು ಪದವನ್ನೂ ಪರೀಕ್ಷಿಸಿ ಯಾವುದನ್ನು ಹೇಗೆ ಉಚ್ಚರಿಸಬೇಕೆಂದು ನಿರ್ಣಯಿಸಿರುತ್ತಾರೆ.

ಕೃ.ರಾಮಚಂದ್ರರು ಗಮಕ ವಾಚನ ಮಾಡುವಾಗ ಪದಗಳಲ್ಲಿ ಎಡವಿದ್ದನ್ನು, ಪದಚ್ಛೇದದಲ್ಲಿ ತಪ್ಪು ಮಾಡಿದ್ದನ್ನು ಯಾರೂ ಎಂದೂ ಕಂಡಿಲ್ಲ. ಪ್ರತಿಯೊಂದನ್ನೂ ಮೊದಲು ಖಚಿತಪಡಿಸಿಕೊಂಡೇ ಅವರು ಹಾಡುವುದು. ಏನೋ ಆ ಸಂದರ್ಭಕ್ಕೆ ತೋಚಿದಂತೆ ಹೇಳಿದರಾಯಿತು ಎಂಬ ತಾತ್ಸಾರ ಧೋರಣೆ ಅವರನ್ನು ಎಂದೂ ಸೋಕಿಲ್ಲ. ಪ್ರಾಚೀನ ಪದ್ಯವೊಂದು ಹೇಳುತ್ತದೆ –

ಎಡವದೆ, ತಡೆಯದೆ, ತಲೆಯಾ
ಕೊಡಹದೆ, ಕಡುವಹಿಲ ಜಾಡ್ಯವೆನಿಸದೆ, ರಸಮಂ
ಕೆಡಿಸದೆ, ಸರ್ವರ ಚಿತ್ತ–
ಕ್ಕೊಡಬಡಲೋದುವನೆ ಗಮಕಿ ಕನ್ನಡ ಜಾಣಾ ॥

ಯಾವ ಚೇಷ್ಟೆಯನ್ನೂ ಮಾಡದೆ ಎಲ್ಲ ಶ್ರೋತೃಗಳ ಮನಸ್ಸೂ ಒಡಂಬಡುವಂತೆ ಓದುವುದು, ವಾಚಿಸುವುದು ರಾಮಚಂದ್ರರ ಶೈಲಿ.

ಅನೇಕ ಸಂದರ್ಭಗಳಲ್ಲಿ ಕೇವಲ ವಾಚನ ಸಾಕಾಗುವುದಿಲ್ಲ. ವ್ಯಾಖ್ಯಾನವೂ ಬೇಕಾಗುತ್ತದೆ. ಕವಿಯು ಅಪೂರ್ವ ಪದಗಳನ್ನು ಉಪಯೋಗಿಸಿದಾಗ, ಶ್ಲೇಷಾಲಂಕರವಿದ್ದಾಗ, ಗೂಢಾಭಿಪ್ರಾಯವನ್ನು ಹೇಳುವಾಗ ವ್ಯಾಖ್ಯಾನಬೇಕು. ಗಮಕಿಯ ಜೊತೆಗೆ ವ್ಯಾಖ್ಯಾಕಾರನೂ ಕಲೆಯ ಒಂದು ಭಾಗ. ಕೃ.ರಾಮಚಂದ್ರರು ವಾಚನಕ್ಕೂ ಸೈ, ವ್ಯಾಖ್ಯಾನಕ್ಕೂ ಸೈ. ಅವರು ವ್ಯಾಖ್ಯಾನ ಮಾಡುವಾಗ ಪುರಾಣೇತಿಹಾಸಗಳ ಜ್ಞಾನ, ಭಾಷಾ ಪ್ರೌಢಿಮೆ, ಸಂದರ್ಭೋಚಿತ ಹಾಸ್ಯ ಪ್ರಜ್ಞೆ ಕಾರ್ಯಕ್ರಮಕ್ಕೆ ಕಾಂತಿಯನ್ನು ತರುತ್ತವೆ.

ಹೀಗೆ ವಿಜ್ಞಾನಿಯೂ ಕಲಾತಪಸ್ವಿಯೂ ಆಗಿರುವ ಕೃ.ರಾಮಚಂದ್ರರಿಗೆ ಪ್ರಶಸ್ತಿ, ಬಿರುದು, ಮನ್ನಣೆ ತಾವಾಗಿ ಬಂದಿರುವುದರಲ್ಲಿ ಆಶ್ಚರ್ಯ ವೇನಿದೆ? **ಗಮಕ ಕಲಾಕೌಸ್ತುಭ, ಗಮಕ ಕಂಠೀರವ, ಗಮಕ ರತ್ನಾಕರ** ಇತ್ಯಾದಿ ಬಿರುದುಗಳು ಅವರನ್ನು ಅಲಂಕರಿಸಿವೆ. 2015ರಲ್ಲಿ ಅಖಿಲ ಕರ್ನಾಟಕ ಗಮಕ ಕಲಾ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಾಗ ಕೃ.ರಾಮಚಂದ್ರ ಅದರ ಅಧ್ಯಕ್ಷ ಪೀಠವನ್ನಲಂಕರಿಸಿದ್ದರು. 2015–16ನೇ ವರುಷ ರಾಜ್ಯ ಸಂಗೀತ ನೃತ್ಯ ಅಕಾಡೆಮಿಯು **ಕರ್ನಾಟಕ ಕಲಾಶ್ರೀ** ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕೃ.ರಾಮಚಂದ್ರರು ತಾವು ಮಾತ್ರ ಕಲಾವಿದರಾಗಿ ತೃಪ್ತಿ ಹೊಂದಿಲ್ಲ. ಗಮಕ ವಿದ್ಯೆಯನ್ನು ಅನೇಕ ಶಿಷ್ಯರಿಗೆ ಕಲಿಸಿ ಈ ಕಲೆ ವಿಶ್ವವ್ಯಾಪಿಯಾಗಿ ಹರಡಲು ಪ್ರೇರಣೆಯನ್ನು ನೀಡುತ್ತಿದ್ದಾರೆ. ಮನೆಯಲ್ಲೇ ಕುಮಾರವ್ಯಾಸ ಗುರುಕುಲವನ್ನು ನಡೆಸುತ್ತಿದ್ದಾರೆ. ಕಾವ್ಯರಂಜಿನೀ ಸಭೆಯನ್ನು ಆರಂಭಿಸಿ ಅನೇಕ ವಿದ್ವಾಂಸರನ್ನೂ, ಕಲಾವಿದರನ್ನೂ ಕರೆದು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ರಾಜ್ಯದಲ್ಲಿ ನಡೆಯುವ ಗಮಕ ಪರೀಕ್ಷೆಗಳಿಗೆ ಕೃ.ರಾಮಚಂದ್ರ ಪರೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಾಲ್ಮೀಕಿ ರಾಮಾಯಣವೂ ಇವರ ಪ್ರಿಯ ಗ್ರಂಥಗಳಲ್ಲೊಂದು. ಅದರ ಬಗೆಗೆ ಉಪನ್ಯಾಸಗಳನ್ನು ಮಾಡುವುದು ಇವರ ಹವ್ಯಾಸ. ಇಷ್ಟೊಂದು ಸದ್ಗುಣಗಳ ಗಣಿಯಾದ ರಾಮಚಂದ್ರರನ್ನು ಮೈಸೂರಿನ 'ಪರಂಪರೆ' 26–3–2024 ರಂದು ಸಂಜೆ ನಾದಬ್ರಹ್ಮ ಸಭಾಂಗಣದಲ್ಲಿ ಅಭಿನಂದಿಸುತ್ತಿರುವುದು ಸ್ತುತ್ಯಾರ್ಹ. ಅವರಿಗೆ ನಮ್ಮ ಹಾರ್ದಿಕ ಅಭಿನಂದನೆ.

ಗೆಲುವಿಗೆ ಬೇಕಾದದ್ದು ಸೋಲಿನ ಅನುಭವ...!

ವಿದ್ವಾನ್ ಚಂದ್ರಶೇಖರ್
ಶ್ರೀರಾಮಕೃಷ್ಣ ವಿದ್ಯಾಶಾಲಾ
ಯಾದವಗಿರಿ, ಮೈಸೂರು
9448167521 / 8310112551





ಜೀವನವೆನ್ನುವುದು ನಿಂತ ನೀರಲ್ಲ. ಅದು ಸದಾಕಾಲ ಹರಿಯುತ್ತಲೇ ಇರುವ ಏರಿಳಿತಗಳಿಂದ ಕೂಡಿದ ಸಮುದ್ರದಂತೆ. ಸದಾಕಾಲ ಹರಿಯುವ ನದಿಯಂತೆ. "ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ನಿಲ್ಲದಿರಿ" ಎನ್ನುವುದು ವಿವೇಕಾನಂದರ ದಿವ್ಯವಾಣಿ. ಅದು ಸಾರ್ವಕಾಲಿಕ ಸತ್ಯವೂ ಹೌದು. ಇದೊಂದೇ ವಾಕ್ಯ ನಮ್ಮ ಜೀವನದ ವಿಫಲತೆಗಳಿಗೆ ಉತ್ತರವಾಗಬಲ್ಲದು. ಅವರೇನೂ ಒಂದು ನಿರ್ದಿಷ್ಟ ಗುರಿಯ ಬಗ್ಗೆ ಹೇಳಿಲ್ಲ. ನಮ್ಮ ಗುರಿಯನ್ನು ನಾವೇ ನಿರ್ಧರಿಸಬೇಕು. ನಿರ್ಧರಿಸುವಾಗ ನಮ್ಮ ಸಾಮರ್ಥ್ಯದ ಅರಿವು ನಮಗಿರಬೇಕು. ಸಾಮರ್ಥ್ಯ ಎಂದರೆ ನಮ್ಮ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಮಾತ್ರ ನಮ್ಮ ಹಿನ್ನಡೆಗೆ ನಾವು ಕೊಡುವ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಗಳು ನೆವನಗಳು ಎನ್ನುವ ಅರಿವು ನಮಗಿದ್ದರೆ ನಮ್ಮ ಆತ್ಮವಿಶ್ವಾಸ ನೂರ್ಮಡಿಗೊಳ್ಳುತ್ತದೆ.

ಏನನ್ನಾದರೂ ಸಾಧಿಸಬೇಕು ಎಂದು ಹೊರಟಿರುವ ನಮ್ಮಂತಹವರಿಗೆ ಇರಬೇಕಾಗಿದ್ದು ಆತ್ಮವಿಶ್ವಾಸ. ವಿಜ್ಞಾನದ ಲೋಕದಲ್ಲಿ ಸೂರ್ಯನಂತೆ ಬೆಳಗಿದ, ಸಾಧಕರಿಗೆ ಆದರ್ಶಪ್ರಾಯರಾಗಿರುವ ಅಬ್ದುಲ್ ಕಲಾಂ ಅವರಿಗೆ ಯಾವ ಸಾಮಾಜಿಕ ಭದ್ರತೆಯಿತ್ತು? ಯಾವ ಆರ್ಥಿಕ ಶಕ್ತಿಯಿತ್ತು? ಅವರಲ್ಲಿದ್ದದ್ದು ಕೇವಲ ನಾನು ಮಾಡಬಲ್ಲೆ ಎನ್ನುವ ಆತ್ಮವಿಶ್ವಾಸ ಮತ್ತು ಕರ್ತೃತ್ವ ಶಕ್ತಿ ಮಾತ್ರ. ಎವರೆಸ್ಟ್ ಏರಿದ ಭಾರತದ ಪ್ರಥಮ ಮಹಿಳೆ ಬಿಚೇಂದ್ರಿಪಾಲ್ ಅವರನ್ನು ಒಮ್ಮೆ ನೆನಪಿಸಿಕೊಳ್ಳಬೇಕು. ನಮ್ಮ ನಿಮ್ಮಂತಹ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅವರು ಎತ್ತರಕ್ಕೇರಬೇಕೆಂಬ ಕನಸನ್ನು ಬಾಲ್ಯದಲ್ಲೇ ಕಂಡರು. ಛಲವೇ ಅವರ ಬಲವಾಯಿತು. ತಾನು ಕಲಿತ ಹೊಲಿಗೆ ವಿದ್ಯೆಯಿಂದ ಓದಿನ ಖರ್ಚನ್ನು ಸಂಪಾದಿಸಿದ ಆ ದಿಟ್ಟ ಮಹಿಳೆ ನಮಗೆ ಆದರ್ಶವಾಗಬೇಕಲ್ಲವೇ? ಉತ್ತಮ ಕ್ರೀಡಾಪಟುವಾಗಬೇಕೇನು? ದೈಹಿಕ ಬಲ ಮತ್ತು ಮಾನಸಿಕ ಛಲ ನಮ್ಮದಾಗಬೇಕು. ತಾನು ಗೆದ್ದ ಎಲ್ಲ ಚಿನ್ನದ ಪದಕಗಳಿಗೆ ಉಸೇನ್ ಬೋಲ್ಟ್ ವ್ಯಯಿಸಿದ್ದು ಕೇವಲ ಎರಡೋ ನಾಲ್ಕೋ ನಿಮಿಷಗಳು ಮಾತ್ರ. ಆದರೆ ಅದರ ಹಿಂದಿರುವ ಪರಿಶ್ರಮ? ತನ್ನ ಐದನೇ ವಯಸ್ಸಿನಲ್ಲಿ ಓಡಲು ಆರಂಭಿಸಿದ ಅವನಲ್ಲಿದ್ದದ್ದು ಒಂದೇ ಗುರಿ, ನಾನು ವಿಶ್ವವಿಜೇತನಾಗಬೇಕು ಎನ್ನುವುದು. ಯಾವಾಗಲೂ ಗೆದ್ದನೇ? ಇಲ್ಲ. ಆಗಾಗ ಬಿದ್ದ. ಮತ್ತೆ ಎದ್ದ. ಗೆದ್ದು ಬೀಗಿದ. ಅವನನ್ನು ಗೆಲ್ಲಿಸಿದ್ದು ಅವನ ಬದ್ಧತೆ ಎನ್ನುವುದನ್ನು ಅರಿಯಬೇಕು. ದೈಹಿಕ ಬಲ ಮತ್ತು ಮಾನಸಿಕ ಛಲವಿದ್ದರೆ ಉಸೇನ್ ಬೋಲ್ಟ್ ಆಗಬಹುದು. **"ಹಣವಿಲ್ಲದವ ಬಡವನಲ್ಲ. ಗುರಿ ಮತ್ತು ಕನಸುಗಳಿಲ್ಲದವ ಬಡವ."** ಇದು ವಿವೇಕವಾಣಿ.

ನಿರಾಸೆ ಮತ್ತು ಚಿಂತೆ ನಮ್ಮನ್ನು ಬಲಹೀನರನ್ನಾಗಿ ಮಾಡುವ ಗೆದ್ದಲುಗಳು. ಆಶಾವಾದಿ ನಗಲು ಮರೆಯುತ್ತಾನಂತೆ. ನಿರಾಶಾವಾದಿ ಮರೆಯಲು ನಗುತ್ತಾನಂತೆ. ಅನುಭವಿಗಳ ಮಾತು. ಯೋಚನೆ ಮತ್ತು ಯೋಜನೆ ಧನಾತ್ಮಕವಾಗಿರಬೇಕು. ಸೋಲನ್ನು ಸ್ವೀಕರಿಸಬೇಕು. ನಂತರ ವಿಶ್ಲೇಷಿಸಬೇಕು. ಆಮೇಲೆ ಪರಿಷ್ಕರಿಸಬೇಕು. ಸೋಲೇ ಗೆಲುವಿನ ಸೋಪಾನ ಎನ್ನುವುದು ಧನಾತ್ಮಕತೆಯ ಸಂಕೇತ. ಹುಲಿ ಒಂದು ಹೆಜ್ಜೆ ಹಿಂದಿಡುವುದು ಮುನ್ನುಗ್ಗಲು ಅಲ್ಲವೇ? ಅಂದರೆ ನಾವು ನಿಂತ ಸೋಲಿನ ಮೆಟ್ಟಿಲು ನಮ್ಮ ಮುಂದಿನ ವಿಜಯಕ್ಕೆ ಚಿಮ್ಮು ಹಲಗೆಯಾಗಬೇಕು. ಮಕರಂದ ಸಿಗದಿದ್ದರೆ ಜೇನ್ನೊಣ ಮತ್ತೊಂದು ಹೂವನ್ನು ಅರಸುತ್ತದೆಯೇ ಹೊರತು ಹಾಗೆಯೇ ಹಿಂತಿರುಗುವುದಿಲ್ಲ. ಯಾಕೆಂದರೆ ಅದರ ಗುರಿ ಮಧು. ಕಾಳನ್ನು ಗೂಡಿಗೆ ಸೇರಿಸುವ ಇರುವೆ ಅದೆಷ್ಟು ಬಾರಿ ಮುಗ್ಗರಿಸುತ್ತದೆಯೋ? ಇವೆಲ್ಲ ನಮಗೆ ಪ್ರೇರಣೆಯಾಗುವುದಿಲ್ಲವೇನು? ಮೋಡಗಳು ಚಂದ್ರನ ಹೊಳಪನ್ನು ಶಾಶ್ವತವಾಗಿ ಕಡಿಮೆ ಮಾಡಲಾರವು. ಚಂದ್ರನಿಗೆ ಅದೊಂದು ತಾತ್ಕಾಲಿಕ ಹಿನ್ನಡೆಯಷ್ಟೆ. ಛಲ ಬಿಡದ ತ್ರಿವಿಕ್ರಮರಾಗಬೇಕು.

ಉತ್ತಮ ಲೇಖಕನಾಗಬೇಕಾದರೆ ಉತ್ತಮ ಓದುಗನಾಗಬೇಕು. ಯಾವ ಲೇಖಕರೂ ಮೊದಲ ಪ್ರಯತ್ನದಲ್ಲಿ ಸಫಲರಾಗುವುದಿಲ್ಲ. ಲೇಖಕನ ಕಸದ ಬುಟ್ಟಿ ತುಂಬಿದೆಯೆಂದರೆ ಪ್ರಬುದ್ಧತೆಯ ಆರಂಭ ಎಂದು ತಿಳಿಯಬೇಕು. ಉತ್ತಮ ನ್ಯಾಯವಾದಿಯಾಗಬೇಕಾದರೆ ಸಣ್ಣ ಸಣ್ಣ ವಿಷಯಗಳನ್ನು ತರ್ಕಬದ್ಧವಾಗಿ ಆಲೋಚಿಸುವ ಗುಣವನ್ನು ಮೈಗೂಡಿಸಿಕೊಳ್ಳಬೇಕು. ಇದಕ್ಕೆಲ್ಲ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ನೆಪ ನಮಗ್ಯಾಕೆ ಬೇಕು? ಮೊದಲೇ ಹೇಳಿದಂತೆ ನಮಗೆ ಬೇಕಾಗಿರುವುದು ಮಾನಸಿಕ ದೃಢತೆ ಮಾತ್ರ. ನಮ್ಮ ಹತಾಶೆಗೆ ಕಾರಣವಾಗುವ ಇನ್ನೊಂದು ಅಂಶವೆಂದರೆ ವಿಫಲರಾದಾಗ ಸುತ್ತಮುತ್ತಲಿಂದ ಬರುವ ನಿಂದೆ, ಕುಹಕ, ವ್ಯಂಗ್ಯಗಳನ್ನು ಋಣಾತ್ಮಕವಾಗಿ ಸ್ವೀಕರಿಸುವುದು. ನಿಂದನೆಗಳನ್ನು ಧನಾತ್ಮಕವಾಗಿ ಸ್ವೀಕರಿಸೋಣ. ನಮಗೆಸೆದ ಕಲ್ಲನ್ನು ಮೈಲಿಗಲ್ಲಾಗಿಸೋಣ. ಸಚಿನ್ ಹೇಳಿದ್ದು, ಮಾಡಿದ್ದು ಅದನ್ನೇ. ಕಬೀರರು ಮನಮುಟ್ಟುವಂತೆ ಈ ರೀತಿ ಹೇಳುತ್ತಾರೆ. **" ನಿಂದಕರನ್ನು ನಿಮ್ಮ ಜೊತೆಯಲ್ಲಿಯೇ ಇರಿಸಿಕೊಳ್ಳಿ, ಯಾಕೆಂದರೆ ನಾವು ಮಾಡಿದ ತಪ್ಪುಗಳೇನು ಎನ್ನುವ ಆತ್ಮವಿಮರ್ಶೆಗೆ ಅವರೇ ಸಹಾಯಕರಲ್ಲವೇ ?"** ಅಬ್ಬಾ ! ಎಷ್ಟೊಂದು ಧನಾತ್ಮಕ ಚಿಂತನೆಯಿದೆ ಈ ಮಾತಿನಲ್ಲಿ.

ಏಕಾಗ್ರಚಿತ್ತರಾದಾಗ ಗೆಲುವು ನಮ್ಮನ್ನು ಸಮೀಪಿಸುತ್ತದೆ. ಮೀನಿನ ಕಣ್ಣನ್ನು ಮಾತ್ರ ನೋಡುವವನು ಉತ್ತಮ ಗುರಿಕಾರನಾಗಬಲ್ಲ. ಆದ್ದರಿಂದ ದೃಢಚಿತ್ತರಾಗೋಣ. **" ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ"** ಸಂಸ್ಕೃತದ ಉಕ್ತಿ. ಇಲ್ಲಿ ಬಂಧನ ಮತ್ತು ಮೋಕ್ಷಗಳನ್ನು ಕೇವಲ ಅಲೌಕಿಕ ಅಥವಾ ಆಧ್ಯಾತ್ಮಿಕ ದೃಷ್ಟಿಕೋನದಿಂದ ಮಾತ್ರ ನೋಡಬೇಕಾಗಿಲ್ಲ. ನಮ್ಮ ಜೀವನದ ಜಯಾಪಜಯಗಳಿಗೆ ಅದನ್ನು ಅನ್ವಯಿಸೋಣ. ಯಾವ ಇಂದ್ರಿಯದ ಮೂಲಕ ಗುರಿಯನ್ನು ಸಾಧಿಸಬೇಕೋ ಆ ಇಂದ್ರಿಯದೊಂದಿಗೆ ಮನಸ್ಸು ಒಂದಾಗಬೇಕು. ಆದ್ದರಿಂದಲೇ ದೇಹ ದೃಢವಾಗಿರಬೇಕು, ಮನಸ್ಸು ಶುದ್ಧವಾಗಿರಬೇಕು. ನಮ್ಮದು ಬಕ ಧ್ಯಾನವಾಗಬೇಕು. ಈ ದಿನ ಈ ಕ್ಷಣ ನನ್ನದೆಂಬ ಭಾವವಿರಲಿ. ಮಾಡುವ ಕೆಲಸದಲ್ಲಿ ಆಸಕ್ತಿಯಿರಲಿ. ಆಸಕ್ತಿ ಶ್ರದ್ಧೆಯನ್ನು ತಂದು ಕೊಡುತ್ತದೆ. ಶ್ರದ್ಧೆ ಸವಾಲಿಗೆ ಉತ್ತರವಾಗಬಲ್ಲದು. ದಿನನಿತ್ಯದ ಕೆಲಸದಲ್ಲಿ ಅದು ಯಾವುದೇ ಇರಲಿ, ಶಿಸ್ತನ್ನು ರೂಢಿಸಿಕೊಂಡಾಗ ಜೀವನದ ಸಾಧನೆಗೆ ಅದು ಅಡಿಪಾಯವಾಗುತ್ತದೆ. ಸಾಧ್ಯವಾದರೆ ಒಮ್ಮೆ ಗೀಜಗನ ಗೂಡನ್ನು ಸ್ಪರ್ಶಿಸಿ ನೋಡಬೇಕು. ಶ್ರದ್ಧೆಯ ಸಾಕಾರ ರೂಪ ಅಲ್ಲಿ ಮೈದಳೆದಿದೆಯಲ್ಲವೇ? ಹುತ್ತವನ್ನು ಹತ್ತಿರದಿಂದ ಅವಲೋಕಿಸಿದಾಗ ಮಾತ್ರ ಶ್ರದ್ಧೆಗಿರುವ ಶಕ್ತಿಯನ್ನು ಮನಗಾಣಬಹುದು. ನಾನ್ಯಾಕೆ ಸೋತೆ ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬಹುದು.

ಕೀಳರಿಮೆ ನಮ್ಮ ಕಣ್ಣಿಗೆ ಕಾಣದ ಶತ್ರು ಎಂಬುದನ್ನು ಮನಗಾಣಬೇಕು. ಕಾಲಿಗೆ ಒಳ್ಳೆಯ ಚಪ್ಪಲಿಯಿಲ್ಲ ಎಂದು ಚಿಂತಿಸುವವನು ಕಾಲೇ ಇಲ್ಲದವನನ್ನು ನೋಡಿ ತನ್ನ ಬಗ್ಗೆ ಹೆಮ್ಮೆಪಟ್ಟುಕೊಳ್ಳಬೇಕು. ಎಲ್ಲೋ ಓದಿದ ನೆನಪು. ಒಮ್ಮೆ ದಿವ್ಯಚೇತನರ ಆಟೋಟಗಳ ಸ್ಪರ್ಧೆಯನ್ನು ಹತ್ತಿರದಿಂದ ನೋಡಬೇಕು. ನಮ್ಮಲ್ಲಿರುವ ಕೀಳರಿಮೆ ನಾಶವಾಗುವುದು. ಗಾಲಿಕುರ್ಚಿಯಲ್ಲಿ ಕುಳಿತು ನಮ್ಮ ನಿಮ್ಮಂತೆಯೇ ಟೆನ್ನಿಸ್ ಆಡುವುದನ್ನು ನೋಡಿದಾಗ ನಮ್ಮಲ್ಲಿರುವ ಕೊರತೆಯ ಅರಿವಾಗುತ್ತದೆ. ಕೈಯೇ ಇಲ್ಲದವನು ಕಾಲಿನಲ್ಲಿಯೇ ಅದ್ಭುತವಾದ ಚಿತ್ರ ಬರೆಯುವುದನ್ನು ನೋಡಿದಾಗ ಸಾಧಿಸುವ ಛಲಕ್ಕೆ ಮಾಡುವ ಪ್ರಯತ್ನಕ್ಕೆ ಫಲವೇನು ಎನ್ನುವುದರ ಅರಿವಾಗುತ್ತದೆ. ಅವರಿಗೆ ಅದೆಲ್ಲ ಸಾಧ್ಯವಾಗುವುದಾದರೆ ಯಾವ ದೋಷವೂ ಇಲ್ಲದ ನಾನೇಕೆ ವಿಫಲನಾದೆ ಎನ್ನುವ ಪ್ರಶ್ನೆ ಮನದಾಳದಲ್ಲಿ ಮೂಡಬೇಕು. ಉತ್ತರ ನಮ್ಮಲ್ಲಿಯೇ ಇದೆ. ಸಿಕ್ಕ ಅವಕಾಶವನ್ನು ನಾನು ಹೇಗೆ ಬಳಸಿಕೊಂಡೆ ಎನ್ನುವುದನ್ನು ವಿಮರ್ಶಿಸಬೇಕು. ಕೀಳರಿಮೆ ಪ್ರಯತ್ನದಿಂದ ದೂರ ಸರಿಯುವಂತೆ ಮಾಡುತ್ತದೆ. ಪ್ರಯತ್ನ ಇಲ್ಲದೇ ಫಲ ಸಿಗುವುದುಂಟೇ? ಪುಟ್ಟ ಕರುವಿಗೂ ಗೊತ್ತು ಕೆಚ್ಚಲಿಗೆ ಗುದ್ದಿದಾಗ ಮಾತ್ರ ಹಾಲು ಒಸರುವುದೆಂದು. ಪ್ರಯತ್ನವಿಲ್ಲದೆ ಪವಾಡವಾಗುವುದು ಕೇವಲ ಇಂದ್ರಜಾಲ ವಿದ್ಯೆಯಲ್ಲಿ ಮಾತ್ರ. ನಡೆಯುವವನು ಎಡವುತ್ತಾನೆ. ಎದ್ದು ನಡೆಯುವವನು ಗುರಿ ಮುಟ್ಟುತ್ತಾನೆ.

ಕೆಲವೊಮ್ಮೆ ನಾವು ನಮ್ಮ ಸೋಲಿಗೆ ಅದೃಷ್ಟವನ್ನು ಹಳಿಯುತ್ತೇವೆ. ಹಾಗೇನಿಲ್ಲ. ಸಮಯಕ್ಕೆ ಬೆಲೆ ಕೊಟ್ಟು ಮಾಡಿದ ಕೆಲಸವನ್ನು ಅದೃಷ್ಟವೇ ಹಿಂಬಾಲಿಸುತ್ತದೆ ಎನ್ನುವುದನ್ನು ಮನಗಾಣಬೇಕು. ನಮ್ಮ ಗೆಲುವಿನಲ್ಲಿ ಅದೃಷ್ಟದ ಪಾಲು ಕೇವಲ ಶೇಕಡಾ ಒಂದರಷ್ಟಿರಬಹುದು. ಮಿಕ್ಕಿದ್ದೆಲ್ಲ ನಮ್ಮ ಪ್ರಯತ್ನಕ್ಕೆ ಸಿಕ್ಕ ಫಲಗಳೇ. ಮೃಗರಾಜನಾದರೂ ಸಿಂಹ ಕುಳಿತಲ್ಲಿಯೇ ಬೇಟೆಗಳು ಬಂದು ಬೀಳುವುದಿಲ್ಲವಲ್ಲ?

ಜಗತ್ತು ಆಧುನಿಕವಾಗುತ್ತಾ ಹೋದಂತೆ ಬದುಕು ಸಂಕೀರ್ಣವಾಗುತ್ತಾ ಹೋಗುತ್ತಿದೆ. ಇಲ್ಲಿ ಸ್ಪರ್ಧೆ ಹೆಚ್ಚು, ಪರಿಣಾಮ ಬೇಗ, ಆಯಸ್ಸು ಕಡಿಮೆ. ಎಲ್ಲವೂ ನಾವಂದುಕೊಂಡಂತೆ ನಡೆಯಲಾರದು. ನಮ್ಮ ಮತಿಯ ಮಿತಿ ನಮಗೆ ತಿಳಿದಿರಬೇಕು. ಯಾವುದೇ ಕ್ಷೇತ್ರವಿರಲಿ, ನಾನಿದನ್ನು ಮಾಡಬಲ್ಲೆನೇ? ಆರಂಭಕ್ಕೆ ಮೊದಲು ಯೋಚನೆ ಮತ್ತು ಯೋಜನೆ ಸರಿಯಾದ ರೀತಿಯಲ್ಲಿ ಸಂಯೋಜನೆಗೊಂಡಿರಬೇಕು. ಸೋಲು ಕೊನೆಯ ನಿಲ್ದಾಣವಲ್ಲ ಎನ್ನುವುದು ತಿಳಿದಿರಲಿ. ಅದಮ್ಯ ವಿಶ್ವಾಸ ಇನ್ನೊಂದು ಯೋಜನೆಗೆ ನಾಂದಿ ಹಾಡುತ್ತದೆ. ಆಗ ಹತಾಶೆ ಗೆಲ್ಲಿದೆ ಜಾಗ? ನನ್ನ ಏಳ್ಗೆಗೆ ನಾನೇ ಕಾರಣನಾದರೆ ನನ್ನ ಸೋಲಿಗೂ ನಾನೇ ಕಾರಣನಾಗಬೇಕಲ್ಲವೇ? ತಾನೊಬ್ಬ ವಾಲಿಬಾಲ್ ಆಟಗಾರ್ತಿಯಾಗಬೇಕೆಂದು ಕನಸು ನನಸಾಗುವ ಹೊತ್ತಿನಲ್ಲಿ ಕಾಲನ್ನೇ ಕಳೆದುಕೊಂಡ ಅರುಣಿಮಾ ಸಿನ್ಹಾ ಅದಾಗದಿದ್ದರೇನಂತೆ ಕೃತ್ರಿಮ ಕಾಲಿನಲ್ಲಿಯೇ ಗೌರೀಶಂಕರವನ್ನೇರುವೆ ಎಂದು ಸಾಧಿಸಿ ತೋರಿಸಿದರಲ್ಲ ! ಆಕೆಯ ಮಾನಸಿಕ ಸ್ಥೈರ್ಯ ಅದೆಷ್ಟು ದೃಢವಾಗಿದ್ದೀತು? ಹೇಗೆ ಸಾಧ್ಯವಾಯಿತು? ಅಲ್ಲಿ ಬದ್ಧತೆ ಇತ್ತು. ಅವರು ನಮ್ಮ ಆದರ್ಶವಾಗಬೇಕು. ಜೀವನಕ್ಕೆ ಪಾಠವಾಗಬೇಕು.

ಹೌದು ! ಜೀವನದಲ್ಲಿ ದೊಡ್ಡ ದೊಡ್ಡ ಗುರಿಯಿರಬೇಕು. ಆದರೆ ಅದನ್ನು ಸಾಧಿಸಬೇಕಾದರೆ ಚಿಕ್ಕ ಚಿಕ್ಕ ಗುರಿಗಳು ಮೆಟ್ಟಿಲಾಗಿರಬೇಕೆಂಬುದನ್ನು ಮರೆಯದಿರೋಣ. ಎಷ್ಟೋ ಜನರು ಪನಾಮಾ ಕಾಲುವೆಯನ್ನು ಈಜಿ ದಡ ಸೇರಿದ್ದಾರೆಂದರೆ ಅವರು ತಮ್ಮೂರಿನ ಚಿಕ್ಕ ಕೆರೆಯಲ್ಲಿ ಈಜಿದ್ದಾರೆಂದೇ ಅರ್ಥ. ಎವರೆಸ್ಟಿನ ತುತ್ತ ತುದಿಯಲ್ಲಿ ಧ್ವಜ ನೆಟ್ಟು ಬಂದವರು ಬಹುಶಃ ತಮ್ಮೂರಿನ ಗುಡ್ಡದ ತುದಿಯಲ್ಲಿಯೇ ಎವರೆಸ್ಟ್ ಏರುವ ಕನಸು ಕಂಡಿರಬೇಕು. ಹುಲಿಯ ಮೊದಲ ಬೇಟೆ ಮೊಲವೇ ಹೊರತು ಆನೆಯಲ್ಲ ಎಂಬುದು ನೆನಪಿರಲಿ.

ಹತಾಶೆಗೆ ಆತ್ಮವಿಮರ್ಶೆಗಿಂತ ದೊಡ್ಡ ಚಿಕಿತ್ಸೆ ಇನ್ನೊಂದಿಲ್ಲ. ಗೆದ್ದವನೊಂದಿಗೆ ಹೋಲಿಕೆಯಿಂದ ನಮ್ಮ ಗೆಲುವು ಅಸಾಧ್ಯ. ಬದಲಾಗಿ ಗೆಲುವಿಗೆ ಬೇಕಾದದ್ದು ಸೋಲಿನ ಅನುಭವವೇ. ಅನುಭವವೆಂಬ ಸಾಣೆಯಿಂದ ಬುದ್ಧಿಯೆಂಬ ಕತ್ತಿ ಹರಿತವಾಗುವುದು.

ಕೊನೆಯಲ್ಲಿ ಮಾತು.

ಬುದ್ಧನಾಗಬೇಕಾದರೆ ಬದ್ಧತೆ ಇರಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರಿನ ಹಳೇ ಸಂತೆಪೇಟೆಯ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯ 46ನೇ ಜಾತ್ರಾ ಮಹೋತ್ಸವ ಪ್ರಯುಕ್ತ ಅದ್ದೂರಿ ರಥೋತ್ಸವ ನೆರವೇರಿತು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಜನರ ಸೇವೆ ಸಲ್ಲಿಸುವ ಅವಕಾಶವನ್ನು ಬಿಜೆಪಿ ಕಲ್ಪಿಸಿದೆ

ಮೈಸೂರು-ಕೊಡಗು ಜನತೆ ಆಶೀರ್ವಾದ ಮಾಡಬೇಕಷ್ಟೇ: ಯದುವೀರ್

ಮೈಸೂರು, ಮಾ.25(ಎಸ್‌ಪಿಎನ್)– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೈಸೂರಿಗರ ಸೇವೆ ಮಾಡಲು ನನಗೊಂದು ಅವಕಾಶವನ್ನು ಬಿಜೆಪಿ ಒದಗಿಸಿದೆ. ಇದಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ಆಶೀರ್ವಾದ ಮಾಡಬೇಕು ಎಂದು ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯಭವನದಲ್ಲಿ ಮೈಸೂರು ಆರಾಧ್ಯ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ ರಾಜಪ್ರಭುತ್ವಕ್ಕೆ ಮನ್ನಣೆ ಇತ್ತು. ಆ ಸಂದರ್ಭದಲ್ಲಿ ನಮ್ಮ ಪೂರ್ವಜರು ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ.

ಶಿಕ್ಷಣ, ಆರೋಗ್ಯ, ನಗರಾಭಿವೃದ್ಧಿ, ಪ್ರವಾಸೋದ್ಯಮ, ಕೈಗಾರಿಕೆ, ನೀರಾವರಿ ಹಾಗೂ ದೇಶಿ ಪರಂಪರೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೂ ಒತ್ತು ನೀಡಿದ್ದರು. ಅದರಲ್ಲಿ ಹತ್ತನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಅಧಿಕಾರಾವಧಿಯಲ್ಲಿ ಮೈಸೂರಿನ ಎಲ್ಲಾ ಕ್ಷೇತ್ರದ ಅಭಿವೃದ್ಧಿ ಉತ್ತುಂಗದಲ್ಲಿತ್ತು ಎಂದು ತಿಳಿಸಿದರು.

ಕಾಲ ಬದಲಾದಂತೆ ರಾಜಪ್ರಭುತ್ವ ಅಳಿದು, ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೆ ಬಂತು. ಈ ವ್ಯವಸ್ಥೆಯನ್ನು ರಾಜ ಮನೆತನವೂ ಒಪ್ಪಿ ಜೀವನ ನಡೆಸುತ್ತಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೈಸೂರು–ಕೊಡಗು ಜನರ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳಲು ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಭಾರತೀಯ ಜನತಾ ಪಾರ್ಟಿ ನನಗೊಂದು ಅವಕಾಶ ನೀಡಿದೆ. ಈ ಅವಕಾಶಕ್ಕೆ ಇವೆರಡು ಜಿಲ್ಲೆಯ ಮತದಾರರು ಮನ್ನಣೆ ನೀಡಬೇಕು ಎಂದು ತಿಳಿಸಿದರು. ಪ್ರಧಾನಿ ಮೋದಿ ಅವರ ಆಡಳಿತಾವಧಿಯಲ್ಲಿ ಭಾರತದ ಅಭಿವೃದ್ಧಿ ನಾಗಾಲೋಟದಲ್ಲಿದೆ. ಈ ಅಭಿವೃದ್ಧಿ ಕಾರ್ಯಗಳು ಮುಂದುವರೆಯಬೇಕಾದರೆ ನರೇಂದ್ರ ಮೋದಿ 'ಮತ್ತೊಮ್ಮೆ ಅಧಿಕಾರಕ್ಕೆ' ಬರ ಬೇಕು. ಹಾಗಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಮತದಾರರು ಬಿಜೆಪಿಗೆ ಮತ ನೀಡುವಂತೆ ಯದುವೀರ್ ಮನವಿ ಮಾಡಿದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ಮೈಸೂರು ಸಂಸ್ಥಾನವೂ ಭಾರತದಲ್ಲಿ ವಿಲೀನವಾಯಿತು. ನಮ್ಮ ತಾತನವರು(ಜಯ ಚಾಮರಾಜೇಂದ್ರ ಒಡೆಯರ್) ಮೈಸೂರು ಸಂಸ್ಥಾನ, ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಮೊದಲು ಸಹಿ ಮಾಡಿದ್ದಾರೆ. ಹಾಗಾಗಿ ಮೈಸೂರು ಸಂಸ್ಥಾನದ ಕೊಡುಗೆಯನ್ನು ಇಂದಿಗೂ ಸ್ಮರಿಸಲು ಕಾರಣ ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮದ ನಂತರ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಅಂಗವಾಗಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಶ್ರೀ ರೇಣುಕಾಚಾರ್ಯ ಮೂರ್ತಿಯ ಮೆರವಣಿಗೆ ನಡೆಸಲಾಯಿತು. ಈ ವೇಳೆ ಯದುವೀರ್ ಪೂಜೆ ಸಲ್ಲಿಸಿದರು. ಮೆರವಣಿಗೆಯಲ್ಲಿ ವೀರಭದ್ರ ಕುಣಿತ ಪ್ರಮುಖ ಆಕರ್ಷಣೆಯಾಗಿತ್ತು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ. ರಾಮಪ್ರಸಾದ್, ಪಾರ್ಥಸಾರಥಿ, ಆರಾಧ್ಯ ಮಹಾಸಭಾ ಅಧ್ಯಕ್ಷ ಪಿ.ನಾಗಭೂಷಣಾರಾಧ್ಯ, ಉಪಾಧ್ಯಕ್ಷೆ ವರಲಕ್ಷ್ಮೀಕುಮಾರಾಧ್ಯ, ಪದಾಧಿಕಾರಿಗಳಾದ ಮಹೇಶರಾಧ್ಯ, ಗಣೇಶಾರಾಧ್ಯ ಸೇರಿದಂತೆ ಇತರರಿದ್ದರು. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಲಾಯಿತು.



ಮೈಸೂರು ಆರಾಧ್ಯ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಜಗದ್ಗುರು ಶ್ರೀ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಿ, ಚಾಮುಂಡೇಶ್ವರಿ ಫೋಟೋ ನೀಡಿ, ಗೌರವಿಸಲಾಯಿತು.

ಯದುವೀರ್ ರೇಡಿಯೋ ಕಾರ್ಯಕ್ರಮ: ಕಾಂಗ್ರೆಸ್ ದೂರು

ಮೈಸೂರು, ಮಾ.25(ಬಿಎಲ್‌ಯು) – ಮೈಸೂರಿನ ರೇಡಿಯೋ ಮಿರ್ಚಿ ಚಾನಲ್‌ನಲ್ಲಿ ಪ್ರಸಾರವಾಗುವ ರಾಜರ ಬಾಯಿಂದ ರಾಜರ ಕಥೆಗಳು ಕಾರ್ಯಕ್ರಮಕ್ಕೆ ನಿರ್ಬಂಧ ಹೇರುವಂತೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಚುನಾವಣಾ ಆಯೋಗಕ್ಕೆ ಮನವಿ ಮಾಡಿದೆ.

ಈ ಸಂಬಂಧ ಕೆಪಿಸಿಸಿ ರಾಜ್ಯ ವಕ್ತಾರ ಹೆಚ್.ಎ.ವೆಂಕಟೇಶ್, ಕಾರ್ಯಕ್ರಮದ ವಿರುದ್ಧ ಚುನಾವಣಾ ಆಯೋಗಕ್ಕೆ ಲಿಖಿತ ದೂರ ಸಲ್ಲಿಸಿದ್ದಾರೆ. ಮೈಸೂರಿನ 104.8 ರೇಡಿಯೋ ಮಿರ್ಚಿ ಚಾನಲ್‌ನಲ್ಲಿ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಮೈಸೂರು ಸಂಸ್ಥಾನದ ಇತಿಹಾಸದ ಬಗ್ಗೆ ಸಂದರ್ಶನದ ರೂಪದಲ್ಲಿ ರಾಜರಿಂದಲೇ ರಾಜರ ಕಥೆಗಳು ಶೀರ್ಷಿಕೆಯಡಿ ಯದುವೀರ್ ಮಾತನಾಡಲಿದ್ದಾರೆ. ರೇಡಿಯೋದಲ್ಲಿ ಮಾತನಾಡುವ ಬಗ್ಗೆ ಕ್ಷಣಕ್ಷಣಕ್ಕೂ ಜಾಹೀರಾತು ಕೂಡ ಪ್ರಕಟಿಸಲಾಗುತ್ತಿದೆ ಎಂದು ಹೆಚ್.ಎವೆಂಕಟೇಶ್ ಆರೋಪಿಸಿದ್ದಾರೆ.



ಒಬ್ಬ ವ್ಯಕ್ತಿಯಾಗಿ ರಾಜರ ಬಗ್ಗೆ ಮಾತನಾಡುವುದು ತಪ್ಪಲ್ಲ. ಆದರೆ ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ ಆಗಲಿದೆ. ಯದುವೀರ್ ಅವರ ಮಾತುಗಳು ಮತದಾರರ ಮೇಲೆ ಪರಿಣಾಮ ಬೀರುವುದರಿಂದ ಈ ಕಾರ್ಯಕ್ರಮದ ಮೇಲೆ ಕೂಡಲೇ ನಿರ್ಬಂಧ ಹೇರುವಂತೆ ವೆಂಕಟೇಶ್ ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ.

ಮತದಾರರ ಪ್ರತಿಜ್ಞಾ ವಿಧಿ ಸ್ವೀಕಾರ



ಮೈಸೂರು,ಮಾ.25– 2024ನೇ ಸಾಲಿನ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಮತದಾನಕ್ಕೆ ಒತ್ತು ನೀಡುವ ಹಿನ್ನೆಲೆಯಲ್ಲಿ ಇತ್ತೀಚೆಗೆ ವೈದ್ಯರ ಭವನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಆವರಣದಲ್ಲಿ ನಡೆದ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ ಬೆಂಗಳೂರು ಉಪಸ್ಥಿತಿಯಲ್ಲಿ ಎಲ್ಲಾ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ತಜ್ಞವೈದ್ಯರು, ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಇಲಾಖೆಯ ಸಿಬ್ಬಂದಿ ಸಮ್ಮುಖದಲ್ಲಿ ಮತದಾರರ ಪ್ರತಿಜ್ಞಾವಿಧಿ ಸ್ವೀಕರಿಸಿದರು. 'ಪ್ರಜಾಪ್ರಭುತ್ವದಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪೌರರಾದ ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ ನ್ಯಾಯ ಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡಿಯುತ್ತೇವೆ. ಪ್ರತಿಯೊಂದು ಚುನಾವಣೆಯಲ್ಲಿ ನಿರ್ಭೀತರಾಗಿ ಮತ್ತು ಧರ್ಮ ಜನಾಂಗ ಜಾತಿ ಮತ ಭಾಷೆ ಅಥವಾ ಯಾವುದೇ ಪ್ರೇರೇಪಣೆಗಳ ದಾಕ್ಷಿಣ್ಯಗಳಿಂದ ಪ್ರಭಾವಿತರಾಗದೆ ಮತ ಚಲಾಯಿಸುತ್ತೇವೆ' ಎಂಬ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಾಗೂ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಲ್ಲಿಗೆ ಹೂವಿನ ಹಾರ ಹಾಕಿ, ಚಾಮುಂಡೇಶ್ವರಿಯ ಬೆಳ್ಳಿ ವಿಗ್ರಹ ನೀಡಿ, ಶುಭ ಕೋರಿದರು. ಈ ವೇಳೆ ಲಕ್ಷ್ಮಣ್, ವಿಜಯ್‌ಕುಮಾರ್, ವಿನೋದ್ ಇತರರಿದ್ದರು.

ನಾಳೆ ರಾಷ್ಟ್ರೀಯ ಯೋಗೋತ್ಸವ

ಮೈಸೂರು, ಮಾ.25(ಎಸ್‌ಪಿಎನ್)– ಜೆಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯದ ಎಂ.ಗೋವಿಂದರಾವ್ ಸ್ಮಾರಕ ಸಭಾಂಗಣದಲ್ಲಿ ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಆಯುಷ್ ಸಚಿವಾಲಯ, ಶ್ರೀ ವೇದ ವ್ಯಾಸ ಯೋಗ ಪ್ರತಿಷ್ಠಾನ ಸಹಯೋಗದಲ್ಲಿ ರಾಷ್ಟ್ರೀಯ ಯೋಗೋತ್ಸವ–2024ರ ಕಾರ್ಯಕ್ರಮವನ್ನು ಮಾ.27 ರಂದು ಬೆಳಗ್ಗೆ 9.30ಕ್ಕೆ ಆಯೋಜಿಸಲಾಗಿದೆ.

ರಾಷ್ಟ್ರೀಯ ಯೋಗೋತ್ಸವದಲ್ಲಿ ಸಾಮೂಹಿಕ ಯೋಗಾಭ್ಯಾಸ, ಮೈಸೂರು ಯೋಗ ಪರಂಪರೆ ಕುರಿತು ಯೋಗ ಪ್ರದರ್ಶನ, ಕಠಿಣ ಯೋಗಾಸನ ಪ್ರದರ್ಶನ ಹಾಗೂ ವಿಶೇಷ ಉಪನ್ಯಾಸ ಸಂಯೋಜಿಸಲಾಗಿದೆ. ಈ ಕಾರ್ಯಕ್ರಮವನ್ನು ಮೈಸೂರು ಮಹಾರಾಜ ಸಂಸ್ಕೃತ ಕಾಲೇಜು ಪ್ರಾಧ್ಯಾಪಕ ಡಾ.ಎಂ.ಎ.ಆಳ್ವಾರ್, ಜೆಎಸ್‌ಎಸ್‌ಎಸ್ ಗೌರವ ಕಾರ್ಯದರ್ಶಿ ವಜನ ಬಿ.ಪಂಡಿತ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದು ಕಾಲೇಜು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.14ರಿಂದ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರ

ಮೈಸೂರು, ಮಾ.25(ಎಸ್‌ಪಿಎನ್)– 8,9 ಹಾಗೂ 10ನೇ ತರಗತಿ ಪರೀಕ್ಷೆ ಬರೆದಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗಾಗಿ ವ್ಯಕ್ತಿತ್ವ ನಿರ್ಮಾಣ, ಯೋಗ, ಮೌಲ್ಯಾಧಾರಿತ ಕಥೆಗಳು, ಚಿತ್ರಕಲೆ, ಸೃಜನಾತ್ಮಕ ಕಲಿಕೆ, ಸಂವಹನ ಕೌಶಲ, ದಿವ್ಯತ್ರಯರ ದಿವ್ಯ ಸಂದೇಶ ಸೇರಿದಂತೆ ಇತರೆ ವಿಷಯಗಳನ್ನೊಳಗೊಂಡ ಬೇಸಿಗೆ ಶಿಬಿರವನ್ನು ಏ.14ರಿಂದ 21ರವರೆಗೆ ಆಯೋಜಿಸಲಾಗಿದೆ. ಶಿಬಿರವು ಬೆಳಗ್ಗೆ 7.45ರಿಂದ ಮಧ್ಯಾಹ್ನ 1 ಗಂಟೆಯವರಿಗೆ ನಡೆಯಲಿವೆ. ಆಸಕ್ತರು ತಮ್ಮ ಹೆಸರನ್ನು ಆಶ್ರಮದ ಕಾರ್ಯಾಲಯದಲ್ಲಿ ನೋಂದಣಿ ಮಾಡಿಸಬೇಕು. ಹೆಚ್ಚಿನ ವಿವರಗಳಿಗಾಗಿ ದೂ.ಸಂ:0821–2417444,2412424 ಕರೆ ಮಾಡಬಹುದು ಎಂದು ರಾಮಕೃಷ್ಣಾಶ್ರಮದ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.28ರಂದು ಆರಾಧನ ಮಹೋತ್ಸವ

ಮೈಸೂರು,ಮಾ.25(ಪಿಎಂ)– ಭಾವೀ ಸಮೀರ ಶ್ರೀ ವಾದಿರಾಜ ಸೇವಾ ಸಮಿತಿ ವತಿಯಿಂದ ಮಾ.28ರಂದು ಭಾವೀ ಸಮೀರ ಶ್ರೀ ವಾದಿರಾಜ ಗುರುಸಾರ್ವಭೌಮರ ಆರಾಧನಾ ಮಹೋತ್ಸವ ಆಯೋಜಿಸಲಾಗಿದೆ. ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಉಡುಪಿ ಶ್ರೀ ಕೃಷ್ಣ ಮಂದಿರದಲ್ಲಿ ಮಹೋತ್ಸವ ನಡೆಯಲಿದ್ದು, ಅಂದು ಬೆಳಗ್ಗೆ 8.30ರಿಂದ 9.15ರವರೆಗೆ ಪಾರಾಯಣ ಸೇವೆ, ಬೆಳಗ್ಗೆ 9.15ರಿಂದ 10ರವರೆಗೆ ಲಕ್ಷ್ಮೀಶೋಭಾನೆ ಮತ್ತು ಭಜನೆ, ಬೆಳಗ್ಗೆ 10ರಿಂದ 12ರವರೆಗೆ ಪ್ರವಚನ ನಡೆಯಲಿದೆ. ಬಳಿಕ ಮಹಾಪೂಜೆಯೊಂದಿಗೆ ತೀರ್ಥ ಪ್ರಸಾದ ವಿತರಣೆ ಮಾಡಲಾಗುವುದು. ಸೇವಾಸಕ್ತರು ಮೊ.ಸಂ. 99807 62324 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾದಕ ವಸ್ತು ಸೇವನೆ ತಡೆಗಾಗಿ ಶಿಕ್ಷಣ ಸಂಸ್ಥೆಗಳ ಬಳಿ ಜಾಗೃತಿ

- ಅಧಿಕಾರಿಗಳಿಗೆ ಪೊಲೀಸ್ ಮಹಾ ನಿರ್ದೇಶಕರ ಸೂಚನೆ
- ಸಿಎಂಗೆ ದಿನೇಶ್ ಗೂಳಿಗೌಡ ಬರೆದ ಪತ್ರದ ಫಲಶೃತಿ

ಮೈಸೂರು, ಮಾ.25(ಎಸ್‌ಬಿಡಿ)– ರಾಜ್ಯದಲ್ಲಿ ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ತಡೆಗಟ್ಟುವುದರ ಜೊತೆಗೆ ಶಿಕ್ಷಣ ಸಂಸ್ಥೆಗಳ ಬಳಿ ಈ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಪೊಲೀಸ್ ಮಹಾ ನಿರ್ದೇಶಕರು, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರು ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದ್ದರು. ಮನವಿಗೆ ಸ್ಪಂದಿಸಿದ ಸಿಎಂ, ಈ ಸಂಬಂಧ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಿದ್ದರ ಹಿನ್ನೆಲೆಯಲ್ಲಿ ಪೊಲೀಸ್ ಮಹಾ ನಿರ್ದೇಶಕರು ಪತ್ರದ ಮೂಲಕ, ವಲಯ ಮಹಾನಿರೀಕ್ಷಕರು, ಬೆಂಗಳೂರು, ಮೈಸೂರು, ಕಲಬುರುಗಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಳಗಾವಿ ನಗರ ಪೊಲೀಸ್ ಆಯುಕ್ತರು, ಕೆಜಿಎಫ್, ರೈಲ್ವೆ ಪೊಲೀಸ್ ಹಾಗೂ ಎಲ್ಲಾ ಜಿಲ್ಲೆಗಳ ಎಸ್ಪಿಗಳಿಗೆ ಸೂಕ್ತ ಕ್ರಮಕ್ಕೆ ಸೂಚಿಸಿದ್ದಾರೆ.

ಮನವಿಯಲ್ಲೇನಿತ್ತು?: ಮಕ್ಕಳು ದೇವರ ರಾಜ್ಯದ ಪ್ರಜೆಗಳು. ರಾಷ್ಟ್ರಕವಿ ಕುವೆಂಪು ಅವರ ಈ ಮಾತು ಅಕ್ಷರಶಃ ಸತ್ಯ. ಆದರೆ, ಈ ನಾಡಿನಲ್ಲಿ ನಿಜಕ್ಕೂ ಏನಾಗುತ್ತಿದೆ? ಮಕ್ಕಳು ನೀತಿವಂತರಾಗಿ, ಸುಸಂಸ್ಕೃತರಾಗಿ, ದುಶ್ಚಟಗಳಿಲ್ಲದೇ ಕಲಿಕೆ ಮಾಡುತ್ತಿದ್ದಾರೆಯೇ? ಅಂಥಹದ್ದೊಂದು ಸುಂದರ ಜೀವನ ಅವರದ್ದಾಗಿದೆಯೇ? ಎಂಬ ಪ್ರಶ್ನೆ ಮೂಡಿದಾಗ ಸಿಗುವ ಉತ್ತರ 'ಇಲ್ಲ'. ನಾನಿಂದು ಅತ್ಯಂತ ವಿಷಾದ ಹಾಗೂ ನೋವಿನಿಂದ ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಅದೂ ನೊಂದ ಮಕ್ಕಳ ಹಾಗೂ ಅವರ ಪೋಷಕರ ಪರವಾಗಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತಿದ್ದೇನೆ.



ಮಾದಕ ವ್ಯಸನಗಳಿಗೆ ಇಂದು ಅನೇಕ ಮಕ್ಕಳು ಬಲಿಯಾಗುತ್ತಿದ್ದಾರೆ. ಬದುಕನ್ನು ಕಟ್ಟಿಕೊಳ್ಳಬೇಕಾದ ಈ ಸಮಯದಲ್ಲಿ ಗಾಂಜಾ ಮತ್ತಿತರೆ ಮಾದಕ ವಸ್ತುಗಳ ದಾಸರಾಗುತ್ತಿದ್ದಾರೆ. ಇದನ್ನು ನಾವೀಗ ತಪ್ಪಿಸಬೇಕಿದೆ. ಮಕ್ಕಳಿಗೆ ಸುಸ್ಥಿರ ಬದುಕನ್ನು ಕಟ್ಟಿಕೊಡಲು ಬಲಿಷ್ಠ ಹಾಗೂ ಬಲಾಢ್ಯ ಕಾನೂನು ರೂಪಿಸಬೇಕಿದೆ. ಮಾದಕ ವ್ಯಸನಗಳಿಗೆ, ಗಾಂಜಾ ವಹಿವಾಟಿಗೆ ಪದೇ ಪದೆ ಮಕ್ಕಳು ಟಾರ್ಗೆಟ್ ಆಗುತ್ತಿರುವ ಬಗ್ಗೆ ನನಗೆ ಸಾಕಷ್ಟು ದೂರುಗಳು ಬಂದಿವೆ. ಯುವ ಜನತೆ ದೊಡ್ಡ ಸಂಖ್ಯೆಯಲ್ಲಿ ಈ ಸುಳಿಯಲ್ಲಿ ಸಿಲುಕಿಕೊಂಡಿದ್ದಾರೆ. ಅವರ ಶೈಕ್ಷಣಿಕ ಬದುಕು ಮೂರಾಬಟ್ಟೆಯಾಗಿದೆ. ಗಾಂಜಾ ಖರೀದಿಗೆ ಹಣವಿಲ್ಲದೆ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದಾರೆ. ಕಳ್ಳತನ, ಸುಲಿಗೆಗೆ ಇಳಿದಿರುವ ಪ್ರಕರಣಗಳಿವೆ. ಪೊಲೀಸರಿಗೆ ಮಾಹಿತಿ ಇದ್ದರೂ ಏಕೆ ಸುಮ್ಮನಿದ್ದಾರೆ ಎಂಬ ಪ್ರಶ್ನೆ ಪೋಷಕರದ್ದಾಗಿದೆ. ಇನ್ನು ಮುಂದೆ ಗಾಂಜಾ ಮಾರಾಟ ಹಾಗೂ ಸೇವನೆ ಜಾಲವನ್ನು ಬೇರು ಸಮೇತ ಕಿತ್ತೊಗೆಯಲು ತಾವು ಮುಂದಾಗಬೇಕು. ಇದಕ್ಕಾಗಿ ವಿಶೇಷ ತಂಡವನ್ನು ರಚನೆ ಮಾಡಿ ತಪ್ಪಿತಸ್ಥರಿಗೆ ಕಾನೂನಿನಡಿ ಕ್ರಮವನ್ನು ಜರುಗಿಸಬೇಕು ಎಂದು ದಿನೇಶ್ ಗೂಳಿಗೌಡರು ಪತ್ರದಲ್ಲಿ ಮನವಿ ಮಾಡಿದ್ದರು.

ವಿಶೇಷ ದಳಕ್ಕೆ ಆಗ್ರಹ: ಜಿಲ್ಲಾ ಮಟ್ಟದಲ್ಲಿ ವಿಶೇಷ ದಳವನ್ನು ರಚಿಸಿ, ಮುಕ್ತ ಅಧಿಕಾರ ಮತ್ತು ಬೆಂಬಲ ನೀಡುವುದು. ಸಾರ್ವಜನಿಕರ ಸಹಕಾರ ಪಡೆಯಲು ಸಹಾಯವಾಣಿ ಆರಂಭಿಸುವುದು. ಮಾಹಿತಿ ನೀಡಿದವರ ಹೆಸರು ಮತ್ತು ವಿಳಾಸವನ್ನು ಗೌಪ್ಯವಾಗಿಡುವುದನ್ನು ಜನರಿಗೆ ಮನದಟ್ಟು ಮಾಡುವುದು. ಶಿಕ್ಷಣ ಸಂಸ್ಥೆಗಳ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ವಿಶೇಷ ಗಸ್ತು ವ್ಯವಸ್ಥೆ ಮಾಡುವುದು. ರಾಜ್ಯಾದ್ಯಂತ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸುವುದು. ಮಾದಕ ವಸ್ತು ಜಾಲದ ಬಗ್ಗೆ ಮಾಹಿತಿ ತಿಳಿದರೆ ಶಾಲಾ ಮುಖ್ಯಸ್ಥರು ಇಲ್ಲವೇ ಪೋಷಕರ ಗಮನಕ್ಕೆ ತರುವಂತೆ ವಿದ್ಯಾರ್ಥಿಗಳಲ್ಲಿ ಮನವರಿಕೆ ಮಾಡುವುದು ಸೇರಿದಂತೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಅವರು ಸಲಹೆ ನೀಡಿದ್ದರು.

'ಅಪ್ಪ ಪ್ರಶಸ್ತಿ'ಗೆ ಪುಸ್ತಕಗಳ ಆಹ್ವಾನ

ಮೈಸೂರು, ಮಾ.25– ಸಾಹಿತ್ಯ ಕ್ಷೇತ್ರದ ಪ್ರತಿಭಾವಂತ ಬರಹಗಾರರ ಪ್ರೋತ್ಸಾಹಿಸಲು ತುಮಕೂರಿನ ಗೆಳೆಯರ ಬಳಗ, ಸುದ್ದಿ ಸಂಗಾತಿ ಯೂಟ್ಯೂಬ್ ಚಾನಲ್ ಹಾಗೂ ಅಪೂರ್ವ ಪ್ರಕಾಶನದ ವತಿಯಿಂದ ಕೊಡಮಾಡುವ 2024ನೆಯ ಸಾಲಿನ ಮೊದಲ ವರ್ಷದ ರಾಜ್ಯ ಮಟ್ಟದ 'ಅಪ್ಪ ಪ್ರಶಸ್ತಿ'ಗೆ ಸಾಹಿತ್ಯಾತ್ಮಕ ಪುಸ್ತಕಗಳನ್ನು ಆಹ್ವಾನಿಸಲಾಗಿದೆ ಎಂದು ಗೆಳೆಯರ ಬಳಗದ ಪರವಾಗಿ ಸಾಹಿತಿ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ.

2021 ಜನವರಿಯಿಂದ 2023 ರವರೆಗಿನ ಡಿಸೆಂಬರ್ ಅವಧಿಯಲ್ಲಿ ಪ್ರಕಟವಾಗಿರುವ ಕತೆ, ಕಾದಂಬರಿ, ನಾಟಕ, ವಿಮರ್ಶೆ, ವೈಚಾರಿಕ, ಲಲಿತ ಪ್ರಬಂಧ, ಸಂಶೋಧನೆ ಸೇರಿದಂತೆ ಸಾಹಿತ್ಯದ ಎಲ್ಲ ಪ್ರಕಾರದ ಕೃತಿಗಳನ್ನು ಸ್ಪರ್ಧೆಗೆ ಕಳುಹಿ ಸಬಹುದು. ಆದರೆ, ಕಾವ್ಯ ಪ್ರಕಾರದ ಕವನ ಸಂಕಲನಗಳನ್ನು ಕಳುಹಿಸು ವಂತಿಲ್ಲ. ಪುಸ್ತಕದ ಮೂರು ಪ್ರತಿಗಳನ್ನು ಕಳುಹಿಸಬೇಕು. ತಲಾ ಐದು ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಫಲಕ ನೀಡಿ ಜೂನ್ ತಿಂಗಳಲ್ಲಿ ನಡೆಯುವ ಸಮಾರಂಭದಲ್ಲಿ ಗೌರವಿಸಲಾಗುವುದು. ಆಸಕ್ತ ಲೇಖಕರು ಏ.31 ರೊಳಗೆ ತಲುಪುವಂತೆ ಹಡವನಹಳ್ಳಿ ವೀರಣ್ಣಗೌಡ, ಲೇಖಕ ಮತ್ತು ಪ್ರಕಾಶಕರು, ಹೊಸ ಬಡಾವಣೆ, ವಕ್ಕೋಡಿ ರಸ್ತೆ, ಹೆಗ್ಗೆರೆ, ಸಿದ್ದಾರ್ಥ ಮೆಡಿಕಲ್ ಕಾಲೇಜು ಅಂಚೆ, ತುಮಕೂರು–572707 ಇಲ್ಲಿಗೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದಂಡಿನ ಶಿವರ ಮಂಜುನಾಥ್ – 9590438329 ಅಥವಾ ಹಡವನಹಳ್ಳಿ ವೀರಣ್ಣಗೌಡ– 9845381834 ಸಂಪರ್ಕಿಸಬಹುದು.

ಮಹಿಳೆ ಈಗ ಎಲ್ಲಾ ರಂಗದಲ್ಲೂ ಸಮಾನ ಸ್ಥಾನಮಾನ ಹೊಂದಿದ್ದಾಳೆ

ವಿಶ್ವ ಮಹಿಳಾ ದಿನಾಚರಣೆಯಲ್ಲಿ ಚಿತ್ರನಟಿ ರೇಖಾದಾಸ್ ಹರ್ಷದ ನುಡಿ



ಮೈಸೂರಿನ ಪುರಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಾಸ್ಯನಟಿ ರೇಖಾದಾಸ್ ಜ್ಯೋತಿ ಬೆಳಗಿಸಿ, ಉದ್ಘಾಟಿಸಿದರು.

ಮೈಸೂರು,ಮಾ.25–ನಗರದ ಸ್ವರಲೋಕ ಸಾಂಸ್ಕೃತಿಕ ಕಲಾ ವೇದಿಕೆ ವತಿಯಿಂದ ಮೈಸೂರಿನ ಪುರಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ ಹಾಗೂ ಕರೋಕೆ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಚಲನಚಿತ್ರ ಹಾಸ್ಯನಟಿ ರೇಖಾದಾಸ್ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಎಲ್ಲಾ ರಂಗಗಳಲ್ಲಿಯೂ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನು ಸರ್ಕಾರ ಕಲ್ಪಿಸಿದೆ. ಇದು ಅತ್ಯಂತ ಹರ್ಷದಾಯಕ ಸಂಗತಿ. ಮಹಿಳೆಯು ನಾಲ್ಕು ಗೋಡೆಗಳ ಮಧ್ಯೆ ಜೀವನ ನಡೆಸುತ್ತಿದ್ದ ಕಾಲವೊಂದಿತ್ತು ಆದರೆ ಪ್ರಸ್ತುತ ದಿನಗಳಲ್ಲಿ ಎಲ್ಲಾ ರಂಗಗಳಲ್ಲಿಯೂ ಮಹಿಳೆಯರು ಸ್ಥಾನ ಪಡೆದಿದ್ದಾರೆ. ರಾಜಕೀಯ, ಚಲನಚಿತ್ರ, ರಂಗಭೂಮಿ, ನೌಕಾಪಡೆ, ವಾಯುಪಡೆ, ವೈದ್ಯಕೀಯ, ವಿಜ್ಞಾನ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ಗಣನೀಯ ಪ್ರಮಾಣದಲ್ಲಿ ಸಾಧನೆ ಮಾಡಿರುವುದು ಇದಕ್ಕೆ ಸಾಕ್ಷಿ ಎಂದರು.

ತೀರ್ಪುಗಾರರಾಗಿ ಆಗಮಿಸಿದ್ದ ಹಿನ್ನೆಲೆ ಗಾಯಕಿ ಜೋಗಿ ಸುನಿತಾ ಮಾತನಾಡಿ, ಚಲನಚಿತ್ರ ಮತ್ತು ಜಾನಪದ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚು ಗಾಯನ, ಸಂಗೀತ, ನೃತ್ಯ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು.

> “ಚಲನಚಿತ್ರ ಹಾಗೂ ರಂಗಭೂಮಿಯಲ್ಲಿ ಸ್ತ್ರೀ ಪಾತ್ರಗಳ ಅಭಿನಯದಿಂದ ಸಮಾಜದಲ್ಲಿ ಉತ್ತಮ, ಆರೋಗ್ಯಕರ ಬದಲಾವಣೆಯನ್ನು ಕಾಣುತ್ತಿದ್ದೇವೆ. ಹಿಂದೆ ಚಲನಚಿತ್ರ ಮತ್ತು ರಂಗಭೂಮಿ ಕಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುತ್ತಿತ್ತು. ಆದರೆ ಇಂದಿನ ಸ್ಪರ್ಧಾ ಯುಗದಲ್ಲಿ ಪೈಪೋಟಿ ಹೆಚ್ಚಿದೆ.
> –ರೇಖಾದಾಸ್, ಚಿತ್ರನಟಿ.

ಸ್ವರಲೋಕ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷರಾದ ಯಶಸ್ವಿನಿ ಲೋಕೇಶ್ವರ್ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಡಾ.ರೇಖಾ ಅರುಣ್, ನಳಿನಿ ತಮ್ಮಯ್ಯ, ಇನ್ಸ್‌ಪೆಕ್ಟರ್ ಮಮತಾ ಹಾಗೂ ಧನಲಕ್ಷ್ಮಿ, ಶುಶ್ರೂಷಕಿ ಕೆ.ಕೆ.ಯಶೋಧ, ರಂಗಭೂಮಿ ಕಲಾವಿದೆ ಮೇರಿ ವಸಂತ್, ಪ್ರಾಧ್ಯಾಪಕಿ ಪ್ರಿಯಾಂಕ ಅವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಗೌರವ ಅಧ್ಯಕ್ಷ ಕಲಾವಿದ ಗೋಪಾಲ್‌ರಾವ್, ಉಪಾಧ್ಯಕ್ಷ ಲೋಕೇಶ್‌ಕೆ, ವಿಜಯಶ್ರೀ, ಪ್ರಧಾನ ಕಾರ್ಯದರ್ಶಿ ಪ್ರಿಯಾ, ಕಾರ್ಯದರ್ಶಿ ಕವಿತಾ, ಖಜಾಂಚಿ ಅಂಕಿತಾ, ಸಂಘಟನಾ ಕಾರ್ಯದರ್ಶಿ ಶಿವರಾಜ್ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ 153ಕ್ಕೂ ಹೆಚ್ಚು ಮಂದಿ, ವಿವಿಧ ಜಿಲ್ಲೆಗಳಿಂದ ಕರೋಕೆ ಗಾಯನದಲ್ಲಿ ಭಾಗವಹಿಸಿದ್ದರು.

ಯುವ ಸಮುದಾಯದಲ್ಲಿ ಈಗ ಗೆಲ್ಲುವ ಧಾವಂತ ಹೆಚ್ಚಾಗಿದೆ

ಅದಮ್ಯ ರಂಗಶಾಲೆ ಸಂಸ್ಥಾಪಕ ಕಾರ್ಯದರ್ಶಿ–ರಂಗಕರ್ಮಿ ಚಂದ್ರು ಮಂಡ್ಯ ಅಭಿಪ್ರಾಯ

ಮೈಸೂರು, ಮಾ.25– ಯುವ ಸಮುದಾಯದಲ್ಲಿ ಇಂದು ಗೆಲ್ಲುವ ಧಾವಂತ ಹೆಚ್ಚಾಗಿದೆ. ಗೆಲ್ಲುವ ಹಂತದಲ್ಲಿನ ಪ್ರಕ್ರಿಯೆ ಮತ್ತು ಸೋಲನ್ನು ಆನಂದಿಸುವ ಮನೋಭಾವವನ್ನೇ ಅವರು ತೊರೆದು ಬಿಟ್ಟಿದ್ದಾರೆ ಎಂದು ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಹಾಗೂ ರಂಗಕರ್ಮಿ ಚಂದ್ರು ಮಂಡ್ಯ ಅಭಿಪ್ರಾಯಪಟ್ಟರು

ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆ ಹಾಗೂ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ) ವತಿಯಿಂದ ಮೈಸೂರು ಹೊರವಲಯದ ಬಸವನಹಳ್ಳಿ (ಗದ್ದಿಗೆ) ಗ್ರಾಮದಲ್ಲಿ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಇಂದಿನ ಯುವಜನರಲ್ಲಿ ಗೆಲುವು ಒಂದೇ ಮಾನದಂಡ ಎಂದು ಕೆಲವು ಪೋಷಕರು ಬಯಸುತ್ತಿದ್ದಾರೆ. ಗೆಲುವು ಕ್ಷಣಿಕವಾದ ಮನೋಲ್ಲಾಸ ಮತ್ತು ಸಂತೋಷವನ್ನು ನೀಡುತ್ತದೆ. ಅದರೆ ಗೆಲ್ಲುವ ಹಂತದಲ್ಲಿ ಸಾವಿರಾರು ಪ್ರಕ್ರಿಯೆಯನ್ನು ಆನಂದಿಸುವುದನ್ನು ಯುವ ಜನತೆ ಮತ್ತು ಪೋಷಕರು ಮರೆತಿದ್ದಾರೆ. ಮಕ್ಕಳಿಗೆ ಕೂಡು ಕುಟುಂಬದ ಪರಿಕಲ್ಪನೆ ಮೂಡುವಂತೆ ಪೋಷಕರು ನಡೆದುಕೊಳ್ಳಬೇಕು. ಗುರು ಹಿರಿಯರಲ್ಲಿ ಭಯ, ಭಕ್ತಿ ಮತ್ತು ವಿಧೇಯತೆಯಿಂದ ಇರಬೇಕೆಂದು ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ರೂಢಿ ಮಾಡಬೇಕು. ಯುವ ಸಮುದಾಯ ಸಾಧ್ಯವಾದಷ್ಟು ಹೃದಯ ವೈಶಾಲ್ಯತೆ ಹೊಂದುವ ಕಡೆ ಗಮನ ಹರಿಸಬೇಕು. ತೀರಾ ವೈಯಕ್ತಿಕ ಮತ್ತು ಕೌಟುಂಬಿಕ ನೆಲೆಯನ್ನು ಮೀರಿ ಸಾಮಾಜಿಕ ನೆಲೆಯಲ್ಲಿ ಬದುಕುವುದನ್ನು ಕಲಿಯಬೇಕು. ಜಾತಿ, ಧರ್ಮಗಳನ್ನು ಮೀರಿ ರಾಷ್ಟ್ರಕವಿ ಕುವೆಂಪುರವರ ಆಶಯದಂತೆ ವಿಶ್ವ ಮಾನವರಾಗುವ ಕಡೆ ಸಾಗಬೇಕು



ಮೈಸೂರಿನ ಬಸವನಹಳ್ಳಿ ಗ್ರಾಮದಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ವತಿಯಿಂದ ನಡೆದ ಎನ್‌ಎಸ್‌ಎಸ್ ವಾರ್ಷಿಕ ಶಿಬಿರವನ್ನು ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಮತ್ತು ರಂಗಕರ್ಮಿ ಚಂದ್ರು ಮಂಡ್ಯ ಉದ್ಘಾಟಿಸಿದರು.

ರಾಷ್ಟ್ರೀಯ ಸೇವಾ ಯೋಜನೆಯಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಯುವ ಸಮುದಾಯದ ಪಾತ್ರ ಅತೀ ಮುಖ್ಯವಾದದ್ದು. ನಾಡಿನ ಕಟ್ಟ ಕಡೆಯ ಗ್ರಾಮವನ್ನು ಕೂಡ ನಗರದಷ್ಟೇ ಮುಖ್ಯವಾಗಿ ಮೇಲ್ಪಂಕ್ತಿಗೆ ತರಲು ಶ್ರಮಿಸಬೇಕು, ಹೆಣ್ಣುಮಕ್ಕಳು ಪುರುಷನಷ್ಟೇ ಸಮರ್ಥವಾಗಿ ಬದುಕು ಕಟ್ಟಿಕೊಳ್ಳಲು ಸಾಧ್ಯವಿದೆ ಎಂದು ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಅಧ್ಯಕ್ಷತೆ ವಹಿಸಿದ್ದರು.

ಚಲನಚಿತ್ರ ನಿರ್ದೇಶಕ ಎನ್. ತೇಜಸ್ವಿ, ಅಂತಾರಾಷ್ಟ್ರೀಯ ಜನಪದ ಕಲಾವಿದ ಅಮ್ಮ ರಾಮಚಂದ್ರ, ಜೆಎಸ್‌ಎಸ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್. ಪ್ರತಿಭಾ, ಚಲನಚಿತ್ರ ಕಲಾವಿದ ಎನ್. ಸ್ವಾಮಿ, ಬಸವನಹಳ್ಳಿ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸವಿತಾ, ಗ್ರಾಮಸ್ಥರಾದ ಎನ್.ಕುಂಟೇಗೌಡ, ಸ್ವಾಮಿಗೌಡ ಉಪಸ್ಥಿತರಿದ್ದರು. ಉದ್ಘಾಟನೆ ಕಾರ್ಯಕ್ರಮದ ನಂತರ ರಂಗಕರ್ಮಿ ಚಂದ್ರು ಮಂಡ್ಯ ನಿರ್ದೇಶನದ ಡಾ.ಬೆಸಗರಹಳ್ಳಿ ರಾಮಣ್ಣನವರ 'ಗಾಂಧಿ' ಮತ್ತು ಡಾ.ವೀಣಾ ಶಾಂತೇಶ್ವರವರ 'ನಿರಾಕರಣೆ' ಕಿರುಚಿತ್ರ ಪ್ರದರ್ಶನ ಮತ್ತು ಸಂವಾದ ಜರುಗಿತು.

ಮೈಸೂರು ಮಿತ್ರ ಮಂಗಳವಾರ 26 ಮಾರ್ಚ್ 2024

ವಿಜೃಂಭಣೆಯ ಶ್ರೀ ಚೆಲುವನಾರಾಯಣಸ್ವಾಮಿ ತೆಪ್ಪೋತ್ಸವ

ಮೇಲುಕೋಟೆ : ಮೇಲುಕೋಟೆ ಪಂಚ ಕಲ್ಯಾಣಿಯಲ್ಲಿ ವೈರಮುಡಿ ಬ್ರಹ್ಮೋತ್ಸವದ ಏಳನೇ ತಿರುನಾಳ್ ಅಂಗವಾಗಿ ಸೋಮ ವಾರ ರಾತ್ರಿ ಜಗಮಗಿಸುವ ವಿದ್ಯುತ್ ದೀಪಾಲಂಕಾರದ ಮೆರುಗಿನೊಂದಿಗೆ ಶ್ರೀ ಚೆಲುವನಾರಾಯಣಸ್ವಾಮಿ ತೆಪ್ಪೋತ್ಸವ ಅದ್ದೂರಿಯಾಗಿ ನೆರವೇರಿತು.

ಕಲ್ಯಾಣಿಯ ನಾಲ್ಕೂ ಕಡೆಯ ಸೋಪಾನ ಗಳಲ್ಲಿ ಕಿಕ್ಕಿರಿದು ತುಂಬಿದ್ದ ಭಕ್ತರು ಚೆಲುವ ನಾರಾಯಣನ ತೆಪ್ಪೋತ್ಸವದ ಸೊಬಗನ್ನು ಕಣ್ತುಂಬಿಕೊಂಡು ಗೋವಿಂದನಾಮ ಘೋಷಣೆ ಕೂಗುತ್ತಾ ಸ್ವಾಮಿಯ ಜಲವಿಹಾರದ ವೈಭವ ದರ್ಶನ ಮಾಡಿ ಪುನೀತರಾದರು.

ಸಂಜೆಯಾಗುತ್ತಿದ್ದಂತೆ ಸಹಸ್ರಾರು ಸಂಖ್ಯೆಯ ಭಕ್ತರ ಚಿತ್ತ ಕಲ್ಯಾಣಿಯತ್ತ ಸಾಗಿತ್ತು. ಕಲ್ಯಾಣಿಯ ನಾಲ್ಕೂ ಕಡೆಯ ಸೋಪಾನಗಳ ಮೇಲೆ ಭಕ್ತರು ಕಿಕ್ಕಿರಿದು ತುಂಬಿದ್ದರು.



ವೈರಮುಡಿ ತೆಪ್ಪೋತ್ಸವದ ಪ್ರಯುಕ್ತ ರಾಜಮುಡಿಯೊಂದಿಗೆ ಅಲಂಕೃತನಾದ ಚೆಲುವನಾರಾಯಣಸ್ವಾಮಿಯ ಉತ್ಸವ ನೆರವೇರಿತು.

ಸಂಜೆ 6–45ರ ವೇಳೆಗೆ ಮೈಸೂರು ಅರಸರಾದ ರಾಜಒಡೆಯರ್ ಸಮರ್ಪಿಸಿರುವ ವಜ್ರಖಚಿತ ರಾಜಮುಡಿ ಕಿರೀಟ ಧರಿಸಿದ ಚೆಲುವನಾರಾಯಣಸ್ವಾಮಿಯ ಉತ್ಸವ ಕಲ್ಯಾಣಿಗೆ ತಲುಪಿತು. ಕಲ್ಯಾಣಿಯಲ್ಲಿ ತಳಿರು ತೋರಣ, ಪುಷ್ಪ ಹಾಗೂ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ತೆಪ್ಪಮಂಟಪದಲ್ಲಿ ಮುಹೂರ್ತಪಠಣ ಬಳಿಕ ಶ್ರೀ ಚೆಲುವ ನಾರಾಯಣಸ್ವಾಮಿ ವಿರಾಜಮಾನನಾದ ನಂತರ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು. ಮಂಗಳವಾದ್ಯದ ನೀನಾದದಲ್ಲಿ ತೆಪ್ಪೋತ್ಸವ ಮೂರು ಪ್ರದಕ್ಷಿಣೆ ಹಾಕಿತು. ತೆಪ್ಪೋತ್ಸವ ಕಾರ್ಯಕ್ರಮಗಳು ರಾತ್ರಿ 9ಕ್ಕೆ ಮುಕ್ತಾಯವಾದವು

ತೆಪ್ಪೋತ್ಸವದ ಹಿನ್ನೆಲೆಯಲ್ಲಿ ಯೋಗನರಸಿಂಹಸ್ವಾಮಿ ಬೆಟ್ಟ ಹಾಗೂ ಬೆಟ್ಟದತಪ್ಪಲಿನಲ್ಲಿರುವ ಕಲ್ಯಾಣಿ ಸಮುಚ್ಚಯದ ಸಾಲು ಮಂಟಪಗಳು, ಭವ್ಯಸ್ಮಾರಕ ಭುವನೇಶ್ವರಿ ಮಂಟಪ, ಧಾರಾಮಂಟಪ ಗಜೇಂದ್ರ ವರದನ ಸನ್ನಿಧಿ ಆವರಣ ಹಾಗೂ ಬಳೆ ಮಂಟಪಗಳಿಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯರ ಸಲಹೆಯಂತೆ ಆಕರ್ಷಕವಾದ ವಿದ್ಯುದ್ದೀಪಾಲಂಕಾರ ಮಾಡಲಾಗಿತ್ತು. ದೇವಾಲಯದ ಇತಿಹಾಸ ಬಿಂಬಿಸುವ ಲೇಸರ್ ಶೋ ಭಕ್ತರ ಮನಸೆಳೆಯಿತು.

ಇವೆಂಟ್ ಮಾದರಿಯ ಕಾರ್ಯಕ್ರಮಗಳನ್ನು ಈ ಸಲವೂ ರದ್ದು ಮಾಡಿದ್ದ ಮಂಡ್ಯ ಜಿಲ್ಲಾಡಳಿತ ಚೆಲುವನಾರಾಯಣಸ್ವಾಮಿ ತೆಪ್ಪೋತ್ಸವ ವೈಭವವನ್ನು ಕಣ್ತುಂಬಿಕೊಳ್ಳಲು ಭಕ್ತರಿಗೆ ಅವಕಾಶ ಮಾಡಿತ್ತು ಸ್ಥಾನೀಕರು, ಅರ್ಚಕರು, ಭಕ್ತರ ಸಲಹೆಗೆ ಮನ್ನಣೆ ನೀಡಿದ ಜಿಲ್ಲಾಧಿಕಾರಿ ಮತ್ತು ಅಪರ ಜಿಲ್ಲಾಧಿಕಾರಿಗಳು ಸಂಪ್ರದಾಯಬದ್ಧ ಉತ್ಸವಗಳ ನಡುವೆ ಅನಗತ್ಯ ಕಾರ್ಯಕ್ರಮಗಳ ಸೇರ್ಪಡೆ ಮಾಡದೆ ತೆಪ್ಪೋತ್ಸವ ನಡೆಸುವುದಾಗಿ ತಿಳಿಸಿದಂತೆ ತೆಪ್ಪೋತ್ಸವ ನಡೆಸಲಾಯಿತು. ತೆಪ್ಪೋತ್ಸವ ನಂತರ ರಾತ್ರಿ ಡೋಲೋತ್ಸವ, ಕುದುರೆವಾಹನೋತ್ಸವ, ಕಳ್ಳಸುಲಿಗೆ ಉತ್ಸವ ನೆರವೇರಿತು. ಮಾ.26ರ ಬೆಳಿಗ್ಗೆ 8 ಗಂಟೆಗೆ ಸಂಧಾನಸೇವೆ ನಡೆಯಲಿದೆ.

ಇಂದು ತೀರ್ಥಸ್ನಾನ, ಪಟ್ಟಾಭಿಷೇಕ

ಶ್ರೀ ಚೆಲುವನಾರಾಯಣಸ್ವಾಮಿ ಜಯಂತಿಯ ಪ್ರಯುಕ್ತ ಮಂಗಳವಾರ ಕಲ್ಯಾಣಿಯಲ್ಲಿ 10 ಗಂಟೆಗೆ ತೀರ್ಥಸ್ನಾನ ಹಾಗೂ ಸಂಜೆ ಚೂರ್ಣಾಭಿಷೇಕ, ಪಟ್ಟಾಭಿಷೇಕ ಮಹೋತ್ಸವ ನಡೆಯಲಿದೆ. ನಂತರ ಪುಷ್ಪಾಲಂಕೃತ ಸಮರ ಭೂಪಾಲ ವಾಹನೋತ್ಸವ ನಡೆಯಲಿದ್ದು ನಂತರ ಪಡಿಮಾಲೆ–ಪೂರ್ಣಾಹುತಿ ನಡೆಯಲಿದೆ. ವೈರಮುಡಿ ಬ್ರಹ್ಮೋತ್ಸವದ ಯಶಸ್ಸಿಗೆ ಕೈಂಕರ್ಯ ಮಾಡಿದ ಸ್ಥಾನೀಕರಿಗೆ ರಾಮಾನುಜರ ಕಾಲದಿಂದ ನಡೆದುಕೊಂಡು ಬಂದಿರುವ ಅನೂಚಾನ ಸಂಪ್ರದಾಯದಂತೆ ಮಾಲೆ ಮರ್ಯಾದೆ ನಡೆಯಲಿದೆ.

ಭಾರತಿನಗರದಲ್ಲಿ ಕಬ್ಬು, ತೆಂಗು ಬೆಂಕಿಗಾಹುತಿ

ಭಾರತೀನಗರ,ಮಾ.25– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ 3 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಬ್ಬು, 300 ಕ್ಕೂ ಹೆಚ್ಚು ತೆಂಗಿನ ಸಸಿಗಳು, ಬೆಲೆ ಬಾಳುವಂತಹ ಮರಗಳು ಸುಟ್ಟು ಕರಕಲಾಗಿರುವ ಘಟನೆ ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಗ್ರಾಮದ ಹೊರವಲಯದ ರೈತರ ಜಮೀನಿನಲ್ಲಿ ನಡೆದಿದೆ.

ಮುಟ್ಟನಹಳ್ಳಿ ಗ್ರಾಮದ ರೈತರಾದ ಯಶೋಧಮ್ಮ ನಿಂಗೇಗೌಡ, ಎಂ.ಜೆ.ಕೆಂಪೇಗೌಡ, ಎಂ.ಜೆ.ಲಕ್ಷ್ಮಣ, ದೇವಮ್ಮ, ಕಾಳೇಗೌಡ, ಎಂ.ಈರೇಗೌಡ, ಆನಂದ್, ದೇವಮ್ಮ ಮೊಟ್ಟೆ ದೇವಯ್ಯ, ಎಂ.ಜೆ.ಹರ್ಷ, ಜವರೇಗೌಡ, ಸುರೇಶ, ಭೀಮನ ತಿಮ್ಮನ ಕೆಂಪೇಗೌಡ, ಚಿಕ್ಕನಾಥೇಗೌಡ ಎಂಬುವವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ತೆಂಗಿನ ಪೈರು, 300 ಕ್ಕೂ ಹೆಚ್ಚು ತೆಂಗಿನ ಸಸಿಗಳು, 400ಕ್ಕೂ ಹೆಚ್ಚು ವಿವಿಧ ಬಗೆಯ ಮರಗಳು ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ಗೆ ಸುಟ್ಟು ಕರಕಲಾಗಿದೆ. ಬೆಂಕಿಕಾಣಿಸಿಕೊಂಡ ತಕ್ಷಣ ಅಗ್ನಿಶಾಮಕ ಠಾಣೆಗೆ ದೂರು ಮುಟ್ಟಿಸಿದರೂ ಬಿಸಿಲಿನ ಬೇಗೆಗೆ ಬೆಂಕಿ ಆವರಿಸಿ 3 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಫಸಲು ಸುಟ್ಟುಹೋಗಿದೆ. ಇದರಿಂದ 3 ಲಕ್ಷಕ್ಕೂ ಹೆಚ್ಚು ನಷ್ಟ ಸಂಭವಿಸಿದೆ.

ಅಗ್ನಿಶಾಮಕ ದಳ 4 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕೆಂದು ಜಮೀನಿನ ಮಾಲೀಕರು ಮತ್ತು ಮುಖಂಡ ಚಂದ್ರಶೇಖರ್ ಒತ್ತಾಯಿಸಿದ್ದಾರೆ

ಸ್ಟಾರ್ ಚಂದ್ರು ಪರ ರಾಹುಲ್ ಗಾಂಧಿ ಪ್ರಚಾರ: ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾಹಿತಿ

ಮಂಡ್ಯ,ಮಾ.25– ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರ ಪರ ಎಐಸಿಸಿ ನಾಯಕ ರಾಹುಲ್ ಗಾಂಧಿ ಮಂಡ್ಯ ನಗರದಲ್ಲಿ ಪ್ರಚಾರ ಕೈಗೊಳ್ಳುವ ಸಾಧ್ಯತೆಯಿದೆ. ಇದಲ್ಲದೇ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಆರ್.ಪೇಟೆ, ಕೆ.ಆರ್.ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರಚಾರ ಮಾಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏ.1ರಂದು ಬೆಳಗ್ಗೆ 10ಕ್ಕೆ ಸ್ಟಾರ್ ಚಂದ್ರು ಮೆರವಣಿಗೆಯಲ್ಲಿ ತೆರಳಿ ನಾಮಪತ್ರ ಸಲ್ಲಿಕೆ ಮಾಡಲಿದ್ದಾರೆ. ಕಳೆದ ಒಂದು ತಿಂಗಳಿಂದ ಪ್ರಚಾರ ನಡೆಸುತ್ತಿದ್ದೇವೆ. ಮೊದಲ ಹಂತದಲ್ಲಿ ಗ್ಯಾರಂಟಿ ಸಭೆಗಳನ್ನು ನಡೆಸಲಾಯಿತು. ಎರಡನೇ ಹಂತದಲ್ಲಿ ಜಿಲ್ಲಾ ಮಟ್ಟದ ಪದಾಧಿಕಾರಿಗಳ ಭೇಟಿ ಮಾಡಿ ತಾಲೂಕು, ಬೂತ್‌ನ ಜವಾಬ್ದಾರಿ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದೇವೆ. 29ರೊಳಗೆ ತಾಲೂಕು ಮಟ್ಟದ ಕಾರ್ಯಕರ್ತರ ಸಭೆ ನಡೆಸಲಾಗುವುದು ಎಂದರು.


ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಅವರು ಯಾವುದೇ ಷರತ್ತು ಇಲ್ಲದೆ ಶೀಘ್ರದಲ್ಲೇ ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ.



ಚಲುವರಾಯಸ್ವಾಮಿ



ರಾಹುಲ್‌ಗಾಂಧಿ



ಸ್ಟಾರ್ ಚಂದ್ರು

ಇವರು ಮಾತ್ರವಲ್ಲದೆ ಹಲವರು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಅವರು ಕಾಂಗ್ರೆಸ್‌ಗೆ ಸೇರ್ಪಡೆ ಆಗುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳಿದರು.

ಸುಮಲತಾ ಅವರು ಅಂಬರೀಶ್ ಕಾಲದಿಂದಲೂ ಪರಿಚಯ. ಅವರ ರಾಜಕೀಯ ನಡೆ ಬಗ್ಗೆ ಮಾತನಾಡಲ್ಲ. ಸುಮಲತಾ ಜೊತೆ ರಾಜಕಾರಣ ಚರ್ಚೆ ಮಾಡಿಲ್ಲ. ಒಂದು ವೇಳೆ ಸುಮಲತಾ ಬೆಂಬಲ ಕೊಟ್ಟರೂ ಬೇಡ ಅನ್ನುವುದಿಲ್ಲ. ಯಾರೇ ಅಭ್ಯರ್ಥಿ ಆದರೂ ಕಾಂಗ್ರೆಸ್ ಶಾಸಕರು, ಬೂತ್ ಕಾರ್ಯಕರ್ತರು ಕೆಲಸ ಮಾಡುತ್ತಾರೆ. ಗ್ಯಾರಂಟಿ ಯೋಜನೆ, ನಮ್ಮ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗಿ ಮತ ಕೇಳ್ತೇವೆ. ಮಂಡ್ಯ ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ, ಕೆ.ಆರ್.ಎಸ್ ಆಧುನೀಕರಣ, ಸಕ್ಕರೆ ಕಾರ್ಖಾನೆ ಸ್ಥಾಪನೆ ಹೀಗೆ ಅಭಿವೃದ್ಧಿ ಕಾರ್ಯಗಳನ್ನು ಮುಂದಿಟ್ಟುಕೊಂಡು ಮತ ಯಾಚಿಸುತ್ತೇವೆ. ಮೈತ್ರಿ ಪಕ್ಷದವರು ಮಂಡ್ಯದಲ್ಲಿ ಒಂದು ತಿಂಗಳಿಂದ ಅಭ್ಯರ್ಥಿ ಘೋಷಿಸಿಲ್ಲ. ಮಂಡ್ಯ ಜನರು ಬುದ್ಧಿವಂತರು, ಹತ್ತು ಬಾರಿ ಯೋಚಿಸಿ ಮತ ಹಾಕುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮಾತನಾಡಿ, ಏ.1ರಂದು ನಾಮಪತ್ರ ಸಲ್ಲಿಕೆ ಮಾಡಲಾಗುತ್ತಿದ್ದು ಪಕ್ಷಾತೀತವಾಗಿ ಬೆಂಬಲ ನೀಡಬೇಕು. ಜಿಲ್ಲೆಯ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು ಎಲ್ಲರ ಸಹಕಾರ, ಬೆಂಬಲ ಕೋರಲಾಗುತ್ತಿದೆ ಎಂದರು.

ಗೋಷ್ಠಿಯಲ್ಲಿ ಶಾಸಕ ಗಣಿಗ ರವಿಕುಮಾರ್, ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ನಗರ ಘಟಕದ ಅಧ್ಯಕ್ಷ ರುದ್ರಪ್ಪ ಇತರರು ಉಪಸ್ಥಿತರಿದ್ದರು.

ಆದಿಚುಂಚನಗಿರಿಯಲ್ಲಿ ಅದ್ದೂರಿ ಗಂಗಾಧರೇಶ್ವರಸ್ವಾಮಿ ರಥೋತ್ಸವ

ಆದಿಚುಂಚನಗಿರಿ, ಮಾ.25– ನಾಗಮಂಗಲ ತಾಲೂಕಿನ ಆದಿಚುಂಚನಗಿರಿಯಲ್ಲಿ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಹೋಳಿ ಹುಣ್ಣಿಮೆ ದಿನದಂದು ಶ್ರೀ ಗಂಗಾಧರೇಶ್ವರ ಮಹಾರಥೋತ್ಸವ ವೈಭವದಿಂದ ನಡೆಯಿತು.

ಸೋಮವಾರ ಮುಂಜಾನೆ ಶ್ರೀ ಗಂಗಾಧರೇಶ್ವರ ರಥೋತ್ಸವ ಭಕ್ತಸಾಗರದ ಹರ್ಷೋದ್ಗಾರ ನಡುವೆ ಭಕ್ತಿ ಭಾವದಿಂದ ಜರುಗಿತು, ವೈಭವಯುತ ರಥೋತ್ಸವವನ್ನು ಅಪಾರ ಸಂಖ್ಯೆ ಭಕ್ತರು ಕಣ್ತುಂಬಿಕೊಂಡರು.

ಶ್ರೀ ಕ್ಷೇತ್ರ ಆದಿಚುಂಚನಗಿರಿಯಲ್ಲಿ ಜಾತ್ರಾ ಮಹೋತ್ಸವದ ಸಂಭ್ರಮ ಮನೆ ಮಾಡಿದ್ದು, ಪ್ರತಿ ವರ್ಷ ಹೋಳಿ ಹುಣ್ಣಿಮೆಯ ದಿನ ಶ್ರೀ ಗಂಗಾಧರೇಶ್ವರಸ್ವಾಮಿ ರಥೋತ್ಸವ ನಡೆಯಲಿದೆ. ಅದರಂತೆ ಮುಂಜಾನೆ 4.30ರ ಬ್ರಾಹ್ಮಿ ಮುಹೂರ್ತದಲ್ಲಿ ವಿಶೇಷ ಪೂಜೆ ಸಲ್ಲಿಸಿ ಶ್ರೀ ಗಂಗಾಧರೇಶ್ವರಸ್ವಾಮಿ ಮಹಾರಥೋತ್ಸವ ಹಾಗೂ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ರಥೋತ್ಸವ ಸಾಗಿತು, ನೂರಾರು ಭಕ್ತರು ತೇರನ್ನು ಎಳೆದು ಭಕ್ತಿ ಭಾವ ಮೆರೆದರೆ, ಹಣ್ಣು– ಜವನ ಎಸೆದು ಪುನೀತರಾದರು. ಕಾಲಭೈರವನಿಗೆ ಜಯಘೋಷ ಮೊಳಗಿಸಿ ನಮಿಸಿದ ಭಕ್ತರು ಅಡ್ಡ ಪಲ್ಲಕ್ಕಿಯಲ್ಲಿ ಆಸೀನರಾಗಿದ್ದ ಚುಂಚಶ್ರೀಗಳಿಗೂ ಗೌರವ ಸಮರ್ಪಿಸಿದರು. ಶ್ರೀ ಗಂಗಾಧರೇಶ್ವರಸ್ವಾಮಿ ರಥೋತ್ಸವವನ್ನು ಅಪಾರ ಸಂಖ್ಯೆಯ ಭಕ್ತರು ಕಣ್ತುಂಬಿಕೊಂಡರು.

ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಸಹಸ್ರಾರು ಭಕ್ತರು ಆದಿಚುಂಚನಗಿರಿಯಲ್ಲಿ ನೆರೆದಿದ್ದು, ರಥೋತ್ಸವದ ನಂತರ ಭಕ್ತರು ಬುತ್ತಿ ಸೇವೆ ಅರ್ಪಿಸಿದರು.



ಶ್ರೀ ಗಂಗಾಧರೇಶ್ವರ ಮಹಾರಥೋತ್ಸವ ವೈಭವದಿಂದ ನಡೆಯಿತು.

ಅರ್ಕೇಶ್ವರ ರಥೋತ್ಸವವೂ ಯಶಸ್ವಿ: ಮಂಡ್ಯ ನಗರದ ಐತಿಹಾಸಿಕ ಧಾರ್ಮಿಕ ದೇಗುಲವಾದ ಗುತ್ತಿಲಿನ ಅರ್ಕೇಶ್ವರ ದೇಗುಲದಲ್ಲೂ ಅರ್ಕೇಶ್ವರ ಸ್ವಾಮಿ ರಥೋತ್ಸವ ಅದ್ದೂರಿಯಾಗಿ ನಡೆಯಿತು. ಸಾವಿರಾರು ಮಂದಿ ಆಗಮಿಸಿ, ರಥೋತ್ಸವವನ್ನು ಕಣ್ತುಂಬಿಕೊಂಡರು.



ಮೈಸೂರಿನಲ್ಲಿ ನಡೆದ ಬಿಜೆಪಿ ಎಸ್ಟಿ ಮೋರ್ಚಾದ ಮುನ್ನಡೆ ಸಮಾವೇಶದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಹುಟ್ಟುಹಬ್ಬದ ಅಂಗವಾಗಿ ನಾಯಕ ಜನಾಂಗದ ಸಂಕೇತವಾದ ಕತ್ತಿ–ಗುರಾಣಿ ನೀಡಿ, ಶುಭಕೋರಲಾಯಿತು. ಈ ವೇಳೆ ರಾಜ್ಯ ಬಿಜೆಪಿ ಲೋಕಸಭಾ ಚುನಾವಣಾ ಉಸ್ತುವಾರಿ ಡಾ.ರಾಧಾ ಮೋಹನ್‌ದಾಸ್ ಅಗರ್‌ವಾಲ್, ಮಾಜಿ ಎಂಎಲ್‌ಸಿ ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಎಸ್ಟಿ ಮೋರ್ಚಾ ನಗರಾಧ್ಯಕ್ಷ ಪಡುವಾರಹಳ್ಳಿ ಎಂ. ರಾಮಕೃಷ್ಣ, ಹರತಲೆ ಚಿಕ್ಕರಂಗನಾಯಕ, ಎಸ್.ತ್ಯಾಗರಾಜ್, ವಿಜಯ್‌ನಾಯಕ, ಎಂ.ಮಹೇಶ್, ಕೃಷ್ಣನಾಯಕ, ಪೈ.ಜಯಸಿಂಹ, ನಂದೀಶ್‌ನಾಯಕ, ರಮ್ಮನಹಳ್ಳಿ ಮದಕರಿ ಇನ್ನಿತರರಿದ್ದರು.

ಮುಖ್ಯಮಂತ್ರಿ ಭರವಸೆ: ಆರು ಮಸೂದೆಗಳಿಗೆ ಕೊನೆಗೂ ರಾಜ್ಯಪಾಲರ ಅಂಕಿತ

ಬೆಂಗಳೂರು: ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡುವ ಮೊದಲೇ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆಗಳಿಗೆ ಅನುಮೋದನೆ ಪಡೆದು, ಅಂಕಿತಕ್ಕೆ ಸಲ್ಲಿಸುವ ರಾಜ್ಯ ಸರ್ಕಾರದ ನಡೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.


ಈ ಕಾರಣಕ್ಕೆ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ್ದ ನಾಲ್ಕು ಮತ್ತು ಬಜೆಟ್ ಅಧಿವೇಶನದಲ್ಲಿ ಮಂಡಿಸಿದ್ದ ಎರಡು ಸೇರಿ ಒಟ್ಟು ಆರು ಮಸೂದೆಗಳನ್ನು ರಾಜ್ಯಪಾಲರು ತಮ್ಮ ಬಳಿಯೇ ಇಟ್ಟುಕೊಂಡಿದ್ದರು. ಇನ್ನು ಮುಂದೆ ಹೀಗಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ ಬಳಿಕ ಒಪ್ಪಿಗೆ ನೀಡಿದ್ದಾರೆ. ಅಲ್ಲದೆ, ಚುನಾವಣಾ ಆಯೋಗದಿಂದ ಅನುಮತಿ ಪಡೆದು ಗೆಜೆಟ್ ಹೊರಡಿಸುವಂತೆ ಕಾನೂನು ಮತ್ತು ಸಂಸದೀಯ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಕರಡು ಮಸೂದೆಗಳನ್ನು, ತುರ್ತು ವಿಷಯವೆಂಬ ಕಾರಣಕ್ಕೆ ಮುಖ್ಯಮಂತ್ರಿಯ ಒಪ್ಪಿಗೆ ಮೇಲೆ ಅಧಿವೇಶನದಲ್ಲಿ ಮಂಡಿಸಲಾಗಿತ್ತು ಈ ರೀತಿ ಮಂಡಿಸಲು 'ಕರ್ನಾಟಕ ಸರ್ಕಾರದ ವ್ಯವಹಾರ ನಿರ್ವಹಣೆಯ ನಿಯಮಗಳು–1977'ರಲ್ಲಿ ಅವಕಾಶ ಇಲ್ಲ. ಈ ರೀತಿ ಮಾಡುವುದಾದರೆ ಈ ನಿಯಮಕ್ಕೆ ತಿದ್ದುಪಡಿ ತರಬೇಕು ಎಂದು ರಾಜ್ಯಪಾಲರು ಜ. 4 ಮತ್ತು ಮಾರ್ಚ್ 13ರಂದು ಬರೆದ ಪತ್ರದಲ್ಲಿ ಸಲಹೆ ನೀಡಿದ್ದರು.

ರಾಜ್ಯಪಾಲರ ಪತ್ರಕ್ಕೆ ಇದೇ 18ರಂದು ಮರು ಪತ್ರ ಬರೆದಿರುವ ಮುಖ್ಯಮಂತ್ರಿ, 'ನಿಮ್ಮ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಾಗುವುದು. ನಿಯಮ ತಿದ್ದುಪಡಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ಸಲ್ಲಿಸಿರುವ ಮಸೂದೆಗಳಿಗೆ ಒಪ್ಪಿಗೆ ನೀಡಬೇಕು' ಎಂದು ಮನವಿ ಮಾಡಿದ್ದರು.

ಇಂದು ವಿಜಯನಗರ ಸೆಸ್ಕ್ ಕಚೇರಿ ಎದುರು ರೈತರ ಪ್ರತಿಭಟನೆ

ಮೈಸೂರು, ಮಾ.25(ಪಿಎಂ)– ಮೈಸೂರು ಜಿಲ್ಲೆಯ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮೈಸೂರಿನ ವಿಜಯನಗರದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಚೇರಿ (ಸೆಸ್ಕ್ ಕಚೇರಿ) ಎದುರು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರ ಸಂಘದ ವತಿಯಿಂದ ಮಾ.26ರಂದು ಬೆಳಗ್ಗೆ 11.30ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್ ಅವರನ್ನು ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್. ನಾಗೇಶ್ ಅಭಿನಂದಿಸಿದರು. ಈ ವೇಳೆ ನಗರ ಓಬಿಸಿ ಘಟಕದ ಮಹೇಶ್, ರಾಜು ಉಪ್ಪಾರ್, ಡಾ. ವಿಜಯರಾಜ್, ರಾಜ್ಯ ಓಬಿಸಿ ಘಟಕದ ಪ್ರಕಾಶ್ ಕುಂಬಾರ್, ಚಂದ್ರ ವಿಶ್ವಕರ್ಮ ಇತರರಿದ್ದರು.



ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ ಪಿ.ದೇವೇಗೌಡ ಅವರನ್ನು ಅವರ ಹುಟ್ಟುಹಬ್ಬದ ಅಂಗವಾಗಿ ಮಾಜಿ ಉಪ ಮೇಯರ್ ಬಿ.ಸಿದ್ದರಾಜು, ಯುವ ಮುಖಂಡ ಕೊಪ್ಪಲ್ ರಾಕೇಶ್‌ಗೌಡ, ಭೈರವ ಗ್ರೂಪ್ ಮಾದೇವ್ ಕಾಳಬರಪ್ಪ, ಸೊಸೈಟಿ ರಾಜು, ಮಾದೇವ ಪಾಂಡೆ, ಚೌಡಪ್ಪ, ಕೆ ಬ್ಲಾಕ್ ಬಸವರಾಜು, ರಾಜಣ್ಣ, ಕೃಷ್ಣಪ್ಪ, ಮಾದಪ್ಪ, ಅಜಯ್ ರಾಜ್, ಮೋಹನ್, ಸುರೇಶ್ ಮುಂತಾದವರು ಅಭಿನಂದಿಸಿದರು.

ಲಂಡನ್‌ನಲ್ಲಿ ಟ್ರಕ್ ಹರಿದು ಭಾರತದ ಪಿಎಚ್.ಡಿ ವಿದ್ಯಾರ್ಥಿನಿ ಸಾವು

ಲಂಡನ್: ಗುರುಗಾಂವ್‌ನ 33 ವರ್ಷದ ಪಿಎಚ್.ಡಿ ವಿದ್ಯಾರ್ಥಿನಿ ಸೈಕಲ್‌ನಲ್ಲಿ ಮನೆಗೆ ಮರಳುತ್ತಿದ್ದಾಗ ಲಾರಿ ಹರಿದು ಮೃತಪಟ್ಟಿದ್ದಾರೆ. ಇವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಪಿಎಚ್.ಡಿ ಮಾಡುತ್ತಿದ್ದರು. 33 ವರ್ಷದ ಚೆಯಿಸ್ತಾ ಕೊಚ್ಚಾರ್ ಮೃತಪಟ್ಟವರು. ಮಾರ್ಚ್ 19ರಂದು ಈ ಅಪಘಾತ ಸಂಭವಿಸಿದೆ.

ಚೆಯಿಸ್ತಾ ಕೊಚ್ಚಾರ್ ಅವರು ನಿವೃತ್ತ ಲೆಫ್ಟಿನೆಂಟ್ ಜನರಲ್, ಸೆಲ್ಯುಲರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ನಿರ್ದೇಶಕ ಡಾ.ಎಸ್.ಪಿ. ಕೊಚ್ಚಾರ್ ಅವರ ಪುತ್ರಿಯಾಗಿದ್ದಾರೆ. ಚೆಯಿಸ್ತಾ ಕೊಚ್ಚಾರ್ ಅವರು ಲಂಡನ್‌ಗೆ ತೆರಳುವ ಮೊದಲು ನೀತಿ ಆಯೋಗದಲ್ಲೂ ಕೆಲಸ ಮಾಡಿದ್ದರು. ಇವರು ಕಳೆದ ವರ್ಷವಷ್ಟೇ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು ಎಂದು ತಿಳಿದುಬಂದಿದೆ. ಅಪಘಾತದ ಬಳಿಕ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಪ್ರಯೋಜನವಾಗಲಿಲ್ಲ.

'ನಾವು ಕಂಡ ಸಿದ್ದರಾಮಯ್ಯ' ನಾಳೆ ಪುಸ್ತಕ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿಮರ್ಶಕ ಪ್ರೊ.ಸಿ.ನಾಗಣ್ಣ ಅವರು 'ನಾವು ಕಂಡ ಸಿದ್ದರಾಮಯ್ಯ' ಪುಸ್ತಕ ಬಿಡುಗಡೆ ಸಂಬಂಧ ಮಾಹಿತಿ ನೀಡಿದರು.

ಮೈಸೂರು,ಮಾ.25(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೀವನ ಕುರಿತು ಬರೆದಿರುವ 'ನಾವು ಕಂಡ ಸಿದ್ದರಾಮಯ್ಯ' ತತ್ವ–ಸತ್ವದ ಸಂಗಮ ಪುಸ್ತಕ ಬಿಡುಗಡೆ ಸಮಾರಂಭ ಮಾ.27ರಂದು ಸಂಜೆ 6ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿದೆ ಎಂದು ವಿಮರ್ಶಕ ಪ್ರೊ.ಸಿ.ನಾಗಣ್ಣ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ಆತ್ಮತೃಪ್ತಿ ಟ್ರಸ್ಟ್ ಹೊರತಂದಿರುವ ಸಿಎಂ ಸಿದ್ದರಾಮಯ್ಯ ಅವರನ್ನು ಕುರಿತ 'ನಾವು ಕಂಡ ಸಿದ್ದರಾಮಯ್ಯ' ಪುಸ್ತಕ ಮೂರು ಭಾಷೆಯಲ್ಲಿ ಸಿದ್ಧಗೊಂಡಿದ್ದು, ಮಾ.27ರಂದು ಸಂಜೆ 6ಕ್ಕೆ ಬಿಡುಗಡೆಗೊಳ್ಳಲಿದೆ. ಕನ್ನಡ, ಇಂಗ್ಲೀಷ್ ಹಾಗೂ ತಮಿಳು ಭಾಷೆಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರ ಜೀವನ ಕುರಿತ ಪುಸ್ತಕ ಅವರ ಅಭಿಮಾನಿಗಳ ಕೈ ತಲುಪಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉಪಸ್ಥಿತಿಯಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಮಾಜಿ ಸಚಿವೆ ಡಾ.ಬಿ.ಟಿ. ಲಲಿತಾನಾಯಕ್ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ನಾಡೋಜ ಬರಗೂರು ರಾಮಚಂದ್ರಪ್ಪ ಕೃತಿ ಬಿಡುಗಡೆ ಮಾಡಲಿದ್ದಾರೆ. ಕೃತಿ ಪರಿಚಯವನ್ನು ವಿಮರ್ಶಕ ಪ್ರೊ.ಸಿ.ನಾಗಣ್ಣ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ರೇಷ್ಮೆ ಸಚಿವ ಕೆ.ವೆಂಕಟೇಶ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಹನೂರು ಶಾಸಕ ಎಂ.ಆರ್.ಮಂಜುನಾಥ್, ಸಂಸದ ಹಾಗೂ ತಮಿಳುನಾಡಿನ ವಿಡುದಲೈ ಚಿರುತೆಗಳ್ ಪಕ್ಷದ ಅಧ್ಯಕ್ಷ ತೋಲ್ ತಿರುಮಾವಾಳವನ್, ತಮಿಳುನಾಡು ರಾಷ್ಟ್ರೀಯ ವಿದ್ಯುತ್ ಒಕ್ಕೂಟದ ಅಧ್ಯಕ್ಷ ಕೆ.ಎ.ಮನೋಹರನ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಮಹನೀಯರ ಬಗ್ಗೆ ಕೃತಿ ರಚನೆ ಮಾಡುವ ಉದ್ದೇಶದಿಂದ ಆತ್ಮತೃಪ್ತಿ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ. ಸಿದ್ದರಾಮಯ್ಯ ಅವರು ಬುದ್ಧ, ಬಸವಣ್ಣ, ಕನಕ, ಅಂಬೇಡ್ಕರ್, ಡಿ.ದೇವರಾಜ ಅರಸು ಅವರ ತತ್ವ ಆದರ್ಶವನ್ನು ಹೇಗೆ ತಮ್ಮ ನೀತಿಗಳ ಮೂಲಕ ಪಾಲಿಸುತ್ತಿದ್ದಾರೆ ಎಂಬ ವಿಶ್ಲೇಷಣೆ ನಾವು ಕಂಡ ಸಿದ್ದರಾಮಯ್ಯ ಪುಸ್ತಕದಲ್ಲಿ ಅಡಗಿದೆ. 150 ಪುಟಗಳ ಹೊಂದಿರುವ ಈ ಪುಸ್ತಕದ ಮುಖಬೆಲೆ 490 ರೂ.ಗಳಾಗಿವೆ ಎಂದರು. ಗೋಷ್ಠಿಯಲ್ಲಿ ಆತ್ಮತೃಪ್ತಿ ಟ್ರಸ್ಟ್ ಅಧ್ಯಕ್ಷ ಬಿ.ಕೆ.ಪ್ರದೀಪ್‌ಕುಮಾರ್, ಬಿ.ಕೆ. ಪ್ರಿಯದರ್ಶಿನಿ, ಯಶಸ್ವಿನಿ, ಅನುಷಾ ಇದ್ದರು.

ನಾಳೆಯಿಂದ ಕಿರುರಂಗಮಂದಿರದಲ್ಲಿ ರಾಷ್ಟ್ರೀಯ ರಂಗೋತ್ಸವ

ಮೈಸೂರು,ಮಾ.25(ಎಂಟಿವೈ)– ಕಲಾಮಂದಿರದ ಕಿರು ರಂಗಮಂದಿರದಲ್ಲಿ ಮಾ.27ರಿಂದ 31ರವರೆಗೆ ಜಿಪಿಐಇಆರ್ ರಂಗ ತಂಡದ ವತಿಯಿಂದ ರಾಷ್ಟ್ರೀಯ ರಂಗೋತ್ಸವ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಮೈಮ್ ರಮೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ನಾಟಕೋತ್ಸವವನ್ನು ಮಾ.27ರಂದು ಸಂಜೆ 6ಕ್ಕೆ ಮೂಡುಬಿದರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಉದ್ಘಾಟಿಸಲಿದ್ದಾರೆ. ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಬುಡಕಟ್ಟು ಸಮುದಾಯದ ಹೋರಾಟಗಾರ ಸೋಮಣ್ಣ ಅವರನ್ನು ಸನ್ಮಾನಿಸಲಾಗುತ್ತದೆ. ಮುಖ್ಯ ಅತಿಥಿಗಳಾಗಿ ಭರತನಾಟ್ಯ ಕಲಾವಿದೆ ಡಾ.ವಸುಂಧರಾ ದೊರೆಸ್ವಾಮಿ, ಕಲಾವಿದ ಅರುಣ್ ಸಾಗರ್, ರಂಗಕರ್ಮಿ ರಾಜಶೇಖರ ಕದಂಬ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಪಾಲ್ಗೊಳ್ಳಲಿದ್ದಾರೆ ಎಂದರು.

ನಾಟಕೋತ್ಸವದ ಸಮಾರೋಪ ಸಮಾರಂಭ ಮಾ.31ರಂದು ಸಂಜೆ 6ಕ್ಕೆ ನಡೆಯಲಿದ್ದು, ಹಿರಿಯ ರಂಗಕರ್ಮಿ ಬಿ.ಸುರೇಶ್ ಸಮಾರೋಪ ನುಡಿ ಆಡಲಿದ್ದಾರೆ. ಜಿಪಿಐಇಆರ್ ರಂಗ ತಂಡ ನಿರ್ದೇಶಕ ಮೈಮ್ ರಮೇಶ್ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ರಂಗಕರ್ಮಿಗಳಾದ ಪ್ರೊ.ಎಸ್.ಆರ್.ರಮೇಶ್, ಜನಾರ್ದನ್ (ಜನ್ನಿ), ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ಹೆಚ್.ಎಸ್.ಸುರೇಶ್ ಬಾಬು ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಷ್ಟ್ರೀಯ ರಂಗೋತ್ಸವ ಕುರಿತ ಪೋಸ್ಟರ್ ಅನ್ನು ಹಿರಿಯ ರಂಗಕರ್ಮಿ ಮೈಮ್ ರಮೇಶ್ ಸೋಮವಾರ ಬಿಡುಗಡೆ ಮಾಡಿದರು.

ನಾಟಕೋತ್ಸವದಲ್ಲಿ ಮಾ.27ರ ಸಂಜೆ 7ಕ್ಕೆ ಕೇರಳ ತಂಡದಿಂದ ಬಾವಲ್ ಮಲೆಯಾಳಂ ನಾಟಕ, ಮಾ.28ರಂದು ಸಂಜೆ 5.30ಕ್ಕೆ ದೇವಾನಂದ್ ವರಪ್ರಸಾದ್ ತಂಡದಿಂದ ಜನಪದ ಗಾಯನ, ಸಂಜೆ 7ಕ್ಕೆ ಜಿಪಿಐಇಆರ್ ತಂಡದಿಂದ ಮಂಟೇಸ್ವಾಮಿ ಕಥಾ ಪ್ರಸಂಗ, ಮಾ.29ರ ಸಂಜೆ 5.30ಕ್ಕೆ ಡಾ. ಮೈಸೂರು ಗುರುರಾಜ್ ಮತ್ತು ತಂಡದಿಂದ ತಂಬೂರಿ ಜಾನಪದ ಗಾಯನ, ಸಂಜೆ 7ಕ್ಕೆ ಉಡುಪಿಯ ಅಮೋಘ ತಂಡದಿಂದ ರೈಲು ಭೂತ ತುಳು ನಾಟಕ ಪ್ರದರ್ಶನವಿರಲಿದೆ.

ಮಾ.30ರಂದು ಸಂಜೆ 5.30ಕ್ಕೆ ವಾಸು ದೀಕ್ಷಿತ್ ಕಲೆಕ್ಟಿವ್ ಸಂಗೀತ ಕಾರ್ಯಕ್ರಮ, ಸಂಜೆ 7ಕ್ಕೆ ಕಹೆ ವಿದುಶಕ್ ಫೌಂಡೇಷನ್‌ನಿಂದ ಸಕಲ್ ಜಾನಿ ಹೇ ನಾಥ್ ಹಿಂದಿ ನಾಟಕ, ಮಾ.31ರ ಸಂಜೆ 5.30ಕ್ಕೆ ಮಂಗಳೂರಿನ ತಂಡದಿಂದ ಸಿಂಗಾರಿ ಮೇಳಂ ಕಾರ್ಯಕ್ರಮ, ಸಂಜೆ 7ಕ್ಕೆ ಬೆಂಗಳೂರಿನ ರಂಗ ಪಯಣ ತಂಡದಿಂದ ನವರಾತ್ರಿಯ ಕೊನೆ ದಿನ ಕನ್ನಡ ನಾಟಕ ಪ್ರದರ್ಶನ ಜರುಗಲಿದೆ. ನಾಟಕೋತ್ಸವದ ವೇಳೆ ಪ್ರತಿದಿನ ಒಬ್ಬರು ಹಿರಿಯ ಕಲಾವಿದರನ್ನು ಸನ್ಮಾನಿಸಲಾಗುತ್ತದೆ ಎಂದರು.

ಇದೇ ವೇಳೆ ಮಾರ್ಚ್ 31ರಂದು ಬೆಳಗ್ಗೆ 10.30ರಿಂದ ಸಂಜೆ 4 ಗಂಟೆವರೆಗೆ ರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ. ಪರಿಣಾಮಕಾರಿ ಶಿಕ್ಷಣದಲ್ಲಿ ರಂಗಭೂಮಿಯ ಪಾತ್ರ ಹಾಗೂ ಸಮಕಾಲೀನ ಸಂದರ್ಭದಲ್ಲಿ ವೃತ್ತಿ ಮತ್ತು ಉದ್ಯಮವಾಗಿ ರಂಗಭೂಮಿ ವಿಷಯ ಕುರಿತು ವಿಚಾರ ಮಂಡನೆಯಾಗಲಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಡಾ. ಹೆಚ್.ಎಂ.ಕುಮಾರಸ್ವಾಮಿ, ಬಸವಣ್ಣ, ಲೋಹಿತ್, ಎಂ.ಪಿ.ಹರಿದತ್ತ ಉಪಸ್ಥಿತರಿದ್ದರು.

ಪಾಲಿಕೆ ಆಯುಕ್ತರಿಂದ ತೆರವುಗೊಂಡ ದೇವರಾಜ ಮಾರುಕಟ್ಟೆ ಸುತ್ತಲ ಪ್ರದೇಶ ಪರಿಶೀಲನೆ





ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು ಫುಟ್‌ಪಾತ್ ತೆರವುಗೊಂಡ ದೇವರಾಜ ಮಾರುಕಟ್ಟೆ ಪರಿಶೀಲನೆ. ಚಿಕ್ಕಗಡಿಯಾರ ಬಳಿ ಹಣ್ಣಿನ ವ್ಯಾಪಾರಿಗಳನ್ನು ತೆರವುಗೊಳಿಸಿರುವುದು. ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆಗೆ ಹೊಂದಿಕೊಂಡಂತಿರುವ ಫುಟ್‌ಪಾತ್ ಒತ್ತುವರಿ ಮುಕ್ತವಾಗಿರುವುದು.

ಮೈಸೂರು, ಮಾ. 25(ಆರ್‌ಕೆ)– ಕಳೆದ ಒಂದು ವಾರದಿಂದ ಅತಿಕ್ರಮ ಹಾಗೂ ರಸ್ತೆಬದಿ ವ್ಯಾಪಾರ ತೆರವುಗೊಳಿಸಿರುವ ಮೈಸೂರಿನ ದೇವರಾಜ ಮಾರುಕಟ್ಟೆ ಆವರಣ ಹಾಗೂ ಸುತ್ತಲಿನ ಫುಟ್‌ಪಾತ್ ಸ್ಥಳವನ್ನು ಸೋಮವಾರ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು ಪರಿಶೀಲಿಸಿದರು.

ದೇವರಾಜ ಮಾರುಕಟ್ಟೆ ಆವರಣ, ಸುತ್ತಮುತ್ತಲಿನ ಪ್ರದೇಶ, ಸಯ್ಯಾಜಿರಾವ್ ರಸ್ತೆ ಹಾಗೂ ಚಿಕ್ಕಗಡಿಯಾರ ಬಳಿ ಫುಟ್‌ಪಾತ್ ಒತ್ತುವರಿ ಮಾಡಿ, ಹಣ್ಣು–ಹಂಪಲು ಮಾರಾಟ ಮಾಡುತ್ತಿದ್ದ 500ಕ್ಕೂ ಹೆಚ್ಚು ಮಂದಿಯನ್ನು ಪಾಲಿಕೆ ಅಧಿಕಾರಿಗಳು ತೆರವುಗೊಳಿಸಿದ್ದರು.

ಸೋಮವಾರ ಬೆಳಗ್ಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದರು. ಈ ವೇಳೆ ಕೆಲ ವರ್ತಕರು ಮಾರುಕಟ್ಟೆಯಲ್ಲಿ ಅಡ್ಡಾದಿಡ್ಡಿಯಾಗಿ ಗ್ರಾಹಕರು ಓಡಾಡುವ ಸ್ಥಳದಲ್ಲಿ ಅಂಗಡಿ ಇರಿಸಿ ವ್ಯಾಪಾರ ಮಾಡುತ್ತಿರುವುದರಿಂದ ಗ್ರಾಹಕರು ಓಡಾಡಲು ತೊಂದರೆಯಾಗುತ್ತಿದೆಯಲ್ಲದೆ, ವ್ಯಾಪಾರಸ್ಥರಿಗೂ ಅನಾನುಕೂಲವಾಗಿದೆ ಎಂದು ಆಯುಕ್ತರಲ್ಲಿ ದೂರು ನೀಡಿದರು.

ಮಾರುಕಟ್ಟೆ ಒಳಗೆ, ಹೊರಗಿನ ಸಯ್ಯಾಜಿರಾವ್ ರಸ್ತೆ ಫುಟ್‌ಪಾತ್ ಮತ್ತು ಚಿಕ್ಕಗಡಿಯಾರ ಬಳಿ ಹಣ್ಣಿನ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುವುದರಿಂದ ಗ್ರಾಹಕರಿಗೆ ಓಡಾಡಲು ತೀವ್ರ ತೊಂದರೆಯಾಗುತ್ತಿರುವ ಬಗ್ಗೆ ತಮ್ಮ ಗಮನಕ್ಕೆ ಬರುತ್ತಿದ್ದಂತೆಯೇ ಎಚ್ಚೆತ್ತ ಪಾಲಿಕೆ ಆಯುಕ್ತರಾದ ಡಾ.ಮಧು, ಕಳೆದ ಒಂದು ವಾರದಿಂದ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿದ್ದರು. ಇಂದು ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದಾಗ ಜನರು ಓಡಾಡಲು ಮೀಸಲಿರುವ ಪಾದಚಾರಿ ರಸ್ತೆ ಮುಕ್ತವಾಗಿರುವುದು ತಿಳಿಯಿತು. ಅಲ್ಲಿ ಮತ್ತೆ ಅನಧಿಕೃತವಾಗಿ ಅಂಗಡಿಗಳನ್ನಿಡದಂತೆ ನಿತ್ಯ ಪೆಟ್ರೋಲಿಂಗ್ ಮಾಡಿ ನಿಗಾ ವಹಿಸಬೇಕು, ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ, ನೆರಳಿನ ವ್ಯವಸ್ಥೆ ಕಲ್ಪಿಸುವಂತೆ ನಗರಪಾಲಿಕೆ ಅಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡಿದರು.

ತಮಗೆ ಬಿಸಿಲು, ಮಳೆಯಿಂದ ರಕ್ಷಣೆಗೆ ಅಂಗಡಿ ಮುಂದಿನ ಪ್ಯಾಸೇಜ್‌ನಲ್ಲಿ ಚಾವಣಿ ನಿರ್ಮಿಸಿಕೊಡಬೇಕು, ನಿತ್ಯ ಎರಡು ಬಾರಿ ಕಸ ತೆಗೆದುಕೊಂಡು ಹೋಗಲು ವ್ಯವಸ್ಥೆ ಮಾಡಬೇಕು ಎಂದು ವರ್ತಕರು ಮನವಿ ಮಾಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ ಮಧು, ಬಿಸಿಲು–ಮಳೆಯಿಂದ ರಕ್ಷಣೆ ಪಡೆಯಲು ಇಡೀ ದೇವರಾಜ ಮಾರುಕಟ್ಟೆ ಆವರಣದಲ್ಲಿ ಒಂದೇ ಮಾದರಿಯಲ್ಲಿ ಶೀಟ್ ಹಾಕಿ ಚಾವಣಿ ನಿರ್ಮಿಸುವುದಾಗಿ ಭರವಸೆ ನೀಡಿದರು. ಅದೇ ರೀತಿ ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ ಸೌಲಭ್ಯ ಒದಗಿಸಿ ವರ್ತಕರು ಹಾಗೂ ಗ್ರಾಹಕರಿಗೆ ಅನುಕೂಲ ಮಾಡುತ್ತೇನೆ. ಆದರೆ ಮತ್ತೆ ಫುಟ್‌ಪಾತ್ ಒತ್ತುವರಿಯಾಗದಂತೆ ಎಚ್ಚರ ವಹಿಸಬೇಕು, ನಿತ್ಯ ಮಾರುಕಟ್ಟೆಯಲ್ಲಿ ಪೆಟ್ರೋಲಿಂಗ್ ಮಾಡಿ ಅಲ್ಲಿನ ಸಮಸ್ಯೆ ಪರಿಹಾರ ಮಾಡಬೇಕೆಂದು ಆಯುಕ್ತರು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು. ಆಯುಕ್ತರ ಕ್ರಮದಿಂದಾಗಿ ಗ್ರಾಹಕರು ಸರಾಗವಾಗಿ ಹಣ್ಣು, ತರಕಾರಿ, ದಿನಸಿ, ಗೃಹೋಪಯೋಗಿ ವಸ್ತು, ಅಲಂಕಾರಿಕ ಸಾಮಗ್ರಿ, ಹೂ ಖರೀದಿಸಲು ಅನುಕೂಲವಾಗಿದೆ. ವರ್ತಕರು, ಗ್ರಾಹಕರಿಂದ ಮಧು ಅವರ ಕಾರ್ಯವೈಖರಿಗೆ ಶ್ಲಾಘನೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ಸಯ್ಯಾಜಿರಾವ್ ರಸ್ತೆ, ಕೆ.ಆರ್. ಸರ್ಕಲ್, ಓಲ್ಡ್ ಬ್ಯಾಂಕ್ ರಸ್ತೆ, ಶಿವರಾಂಪೇಟೆ, ಸಂತೆಪೇಟೆಗಳಲ್ಲೂ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕರು ಓಡಾಡಲು ಮುಕ್ತಗೊಳಿಸುವುದಲ್ಲದೆ, ಮತ್ತೆ ಏನಾದರೂ ಫುಟ್‌ಪಾತ್ ಮೇಲೆ ಅಂಗಡಿ–ಮುಂಗಟ್ಟು ಇಟ್ಟುಕೊಂಡು ವ್ಯಾಪಾರ ಮಾಡಿದರೆ ಪ್ರಕರಣ ದಾಖಲಿಸಿ ಕ್ರಮ ವಹಿಸಲಾಗುವುದು ಎಂದು ಪಾಲಿಕೆ ಆಯುಕ್ತೆ ಡಾ. ಮಧು ಎಚ್ಚರಿಸಿದ್ದಾರೆ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಫ್ಲೆಕ್ಸ್, ಹೋರ್ಡಿಂಗ್, ಬಂಟಿಂಗ್‌ಗಳನ್ನು ತೆರವುಗೊಳಿಸಲಾಗುವುದು. ಪ್ಲಾಸ್ಟಿಕ್ ಮುಕ್ತ ಮೈಸೂರು ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಪ್ಲಾಸ್ಟಿಕ್ ದಾಳಿ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಆಯುಕ್ತರು ತಿಳಿಸಿದ್ದಾರೆ.



ಮೈಸೂರು ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಚಂದ್ರಶೇಖರ್, ಉಪಾಧ್ಯಕ್ಷರಾದ ಚೆನ್ನನಾಯಕ ಅವರನ್ನು ಲಾ ಗೈಡ್ ಪತ್ರಿಕೆ ವತಿಯಿಂದ ಅಭಿನಂದಿಸಲಾಯಿತು. ವಕೀಲರ ಸಂಘದ ಮಾಜಿ ಅಧ್ಯಕ್ಷ ರಾಮಮೂರ್ತಿ, ಪತ್ರಿಕೆ ಸಂಪಾದಕ ಎಚ್.ಎನ್.ವೆಂಕಟೇಶ್, ಹಿರಿಯ ವಕೀಲ ಎನ್.ಜಿ.ಸ್ವಾಮಿ ಚಿತ್ರದಲ್ಲಿದ್ದಾರೆ.

ಅಕ್ರಮ ದತ್ತು ಪ್ರಕರಣ: ರೀಲ್ಸ್ ರಾಣಿ ಸೋನು ಗೌಡಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ಬಾಲಕಿಯ ಅಕ್ರಮ ದತ್ತು ಪ್ರಕರಣದಲ್ಲಿ ನಟಿ ಸೋನು ಗೌಡ ಅವರಿಗೆ ಏಪ್ರಿಲ್ 8 ರವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

ಮಗುವನ್ನು ಅಕ್ರಮವಾಗಿ ಸಾಕುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋನು ಗೌಡಗೆ ಸಿಜೆಎಂ ಕೋರ್ಟ್ ನ್ಯಾಯಾಧೀಶರು ಹದಿನಾಲ್ಕು ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ಕು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು. ಇಂದು ಪೊಲೀಸ್ ಕಸ್ಟಡಿ ಅಂತ್ಯವಾಗಿತ್ತು. ಕಾನೂನು ಬಾಹಿರವಾಗಿ ಮಗುವನ್ನು ದತ್ತು ತೆಗೆದುಕೊಂಡು ಪೊಲೀಸ್ ವಶದಲ್ಲಿದ್ದ ಸೋನು ಶ್ರೀನಿವಾಸ ಗೌಡರನ್ನು ಬೆಂಗಳೂರಿನ ಬ್ಯಾಡರಹಳ್ಳಿ ಪೊಲೀಸರು ನಿನ್ನೆ (ಮಾ.24) ರಾಯಚೂರಿನ ಮಸ್ಕಿ ತಾಲೂಕಿನ ಕಾಚಾಪುರಕ್ಕೆ ಕರೆದುಕೊಂಡು ಬಂದ ಸ್ಥಳ ಮಹಜರು ಮಾಡಿದ್ದರು. ಅಪ್ರಾಪ್ತ ಬಾಲಕಿಯನ್ನ ಸೋನುಗೌಡ ಅಕ್ರಮವಾಗಿ ದತ್ತು ಪಡೆದ ಪ್ರಕರಣದಲ್ಲಿ ಮತ್ತಷ್ಟು ಬೆಳವಣಿಗೆ ಕಂಡು ಬರುತ್ತಿವೆ. ಬಾಲಕಿ ಚಿಕ್ಕಪ್ಪನ ಮನೆಗೆ ಬಂದ ಪೊಲೀಸರು ಕೆಲವೇ ಕ್ಷಣದಲ್ಲಿ ಮಾಹಿತಿ ಕಲೆಹಾಕಿ ಅವಸರದಲ್ಲಿ ಗ್ರಾಮದಿಂದ ಹೊರನಡೆದಿದ್ದರು. ಈ ವೇಳೆ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದು, ಸೋನುಗೌಡ ಇದ್ದ ಕಾರಿಗೆ ಗ್ರಾಮಸ್ಥರು ಮುತ್ತಿಗೆ ಹಾಕಿದ್ದರು.



ಅರ್ಜಿ ಆಹ್ವಾನ

ಮೈಸೂರು: 2024ನೇ ಸಾಲಿಗೆ ಮೈಸೂರಿನ ಕೌಟುಂಬಿಕ ನ್ಯಾಯಾಲಯಗಳಿಗೆ ಸಂಧಾನಕಾರರಾಗಿ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಅನುಭವ ಹೊಂದಿರುವಂತಹ ವ್ಯಕ್ತಿಗಳು, ಮಹಿಳೆಯರಿಗೆ ಮೊದಲ ಆದ್ಯತೆ. ಭಾವಚಿತ್ರದೊಂದಿಗೆ ವಿದ್ಯಾಭ್ಯಾಸ, ಅನುಭವದ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಮಾ.30ರಂದು ಸಂಜೆ 4 ಗಂಟೆಯೊಳಗೆ ಜಯನಗರದ ಮಳಲವಾಡಿಯಲ್ಲಿರುವ ಹೊಸ ನ್ಯಾಯಾಲಯಗಳ ಸಂಕೀರ್ಣದ ಕೌಟುಂಬಿಕ ನ್ಯಾಯಾಲಯದ ಕಛೇರಿಗೆ ಸಲ್ಲಿಸಬೇಕು.



ಜಾನ್ ಫರ್ನಾಂಡಿಸ್ ಎಂಡಿಸಿಸಿಎ ಅಧ್ಯಕ್ಷ

ಮೈಸೂರು,ಮಾ.25–ಮೈಸೂರು ಡಿವಿಷನ್ ಕ್ಯಾಥೋಲಿಕ್ ಕ್ರಿಶ್ಚಿಯನ್ ಅಸೋಸಿಯೇಷನ್ (ಎಂಡಿಸಿಸಿಎ) 2024–25ನೇ ಸಾಲಿನ ನೂತನ ಅಧ್ಯಕ್ಷರಾಗಿ ಜಾನ್ ಫರ್ನಾಂಡಿಸ್ ಅವರನ್ನು ಮಾ.24 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಹೆಸರಿಗಷ್ಟೇ ಮೈಸೂರು ಪಾರಂಪರಿಕ ನಗರ...!

ಪಾರಂಪರಿಕ ಸ್ಮಾರಕಗಳ ರಕ್ಷಣೆ ಬದ್ಧತೆ ಇಲ್ಲ;

ಶೋಚನೀಯ ಸ್ಥಿತಿಗೆ

ಸರ್ಕಾರಿ ಅತಿಥಿ ಗೃಹದ ಕಮಾನು

- ಮಾಹಿತಿ–ಮೀಟಿಂಗ್‌ನಲ್ಲಷ್ಟೇ ಸಂರಕ್ಷಣೆ ಮಂತ್ರ
- ಜನಪ್ರತಿನಿಧಿಗಳು, ಅಧಿಕಾರಿಗಳಿಗರಿವಿಲ್ಲ ಮೈಸೂರು ಮಹತ್ವ






ಶೋಚನೀಯ ಸ್ಥಿತಿ ತಲುಪಿರುವ ಸರ್ಕಾರಿ ಅತಿಥಿ ಗೃಹದ ಕಮಾನು.

ಮೈಸೂರು, ಮಾ.25(ಎಸ್‌ಬಿಡಿ)– ಮೈಸೂರು ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹದ ಪಾರಂಪರಿಕ ಕಮಾನು (ಆರ್ಚ್) ಹಲವು ವರ್ಷಗಳಿಂದ ಆಡಳಿತ ವ್ಯವಸ್ಥೆಯ ದಿವ್ಯ ನಿರ್ಲಕ್ಷಕ್ಕೆ ತುತ್ತಾಗಿದ್ದು, ಇದೀಗ ಶಿಥಿಲಾವಸ್ಥೆ ತಲುಪಿರುವುದು ನಿಜಕ್ಕೂ ದುರ್ದೈವ.

ಪಾರಂಪರಿಕ ನಗರಿ ಮೈಸೂರಿನಲ್ಲಿ ಶತಮಾನ ಪೂರೈಸಿರುವ ಹಲವು ಪಾರಂಪರಿಕ ನಿರ್ಮಾಣಗಳಿದ್ದು, ಸರ್ಕಾರಿ ಅತಿಥಿ ಗೃಹದ ಪ್ರಮುಖ(ಉತ್ತರ) ದ್ವಾರದ ಕಮಾನು ಕೂಡ ಒಂದು. ಅತಿಥಿ ಗೃಹ ಆವರಣದ ಕಾಂಪೌಂಡ್‌ಗೆ ಹೊಂದಿಕೊಂಡಿದ್ದ ಈ ಕಮಾನು, ಅಬ್ಬಾ ರಸ್ತೆ ಅಗಲೀಕರಣ ಪರಿಣಾಮ ಕಾಂಪೌಂಡ್‌ನಿಂದ ಪ್ರತ್ಯೇಕವಾಗಿ ಮಧ್ಯರಸ್ತೆಯಲ್ಲಿ ಒಂಟಿಯಾಗಿ ನಿಂತಿದೆ. ಪತ್ರಿಕೆಗಳು ಚಾಟಿ ಬೀಸಿದ್ದರಿಂದ ಕಮಾನು ರಕ್ಷಣೆಗೆ ಸುತ್ತಲೂ ಕಬ್ಬಿಣದ ಗ್ರಿಲ್ ಅಳವಡಿಸಿದ್ದನ್ನು ಬಿಟ್ಟರೆ ಅದರ ಸಂರಕ್ಷಣೆಗೆ ಕಿಂಚಿತ್ತೂ ಕ್ರಮ ವಹಿಸಿಲ್ಲ.

ಭದ್ರ ಬೇಲಿ ಯಾವ ಪುರುಷಾರ್ಥಕ್ಕೆ: ಪಾರಂಪರಿಕ ಕಮಾನು ಹಲವು ಕಡೆ ಬಿರುಕು ಬಿಟ್ಟಿದೆ. ಗೋಡೆಗಳಲ್ಲಿ ಮೂರ್‍ನಾಲ್ಕು ಮೀಟರ್ ಗಾರೆ ಬಿದ್ದು ಹೋಗಿದ್ದು, ಇಟ್ಟಿಗೆಗಳು ಕಾಣುತ್ತಿವೆ. ಎರಡು–ಮೂರು ಕಡೆ ಇಟ್ಟಿಗೆಗಳೂ ಮಾಯವಾಗಿ ಗೋಡೆಗಳೂ ದರಿ ಬಿದ್ದಿವೆ. ಹೆಗ್ಗಣಗಳು ಬಿಲ ಕೊರೆದು ಅಡಿಪಾಯಕ್ಕೂ ಅಪಾಯ ತಂದೊಡ್ಡಿವೆ. ಗಾಳಿ–ಮಳೆಯಾದರೆ ಕಮಾನು ನೆಲಕ್ಕುರುಳಿದರೂ ಆಶ್ಚರ್ಯವಿಲ್ಲ. ಕೆಲ ತಿಂಗಳ ಹಿಂದೆ ಗಿಡಗಂಟಿಗಳನ್ನು ತೆರವು ಮಾಡಿ ಕೈತೊಳೆದುಕೊಂಡಿದ್ದಾರೆ. ಆದರೆ ಬೀಳುವ ಹಂತ ತಲುಪಿರುವ ಕಮಾನು ರಕ್ಷಣೆಗೆ ಗಮನಹರಿಸಲಿಲ್ಲ. ಪರಿಣಾಮ ದಿನೇ ದಿನೆ ಕಮಾನು ಶೋಚನೀಯ ಸ್ಥಿತಿ ತಲುಪುತ್ತಿದೆ. ಹಾಗಾದರೆ ಲಕ್ಷಾಂತರ ರೂ. ಖರ್ಚು ಮಾಡಿ ಕಮಾನು ಸುತ್ತಲೂ ಕಬ್ಬಿಣದ ಗ್ರಿಲ್ ಅಳವಡಿಸಿದ್ದು ಯಾವ ಪುರುಷಾರ್ಥಕ್ಕೆ?.

> ಸರ್ಕಾರಿ ಅತಿಥಿ ಗೃಹದ ಕಮಾನು ಸೇರಿದಂತೆ ನಾಲ್ಕು ನಿರ್ಮಾಣಗಳ ಸಂರಕ್ಷಣೆಗೆ ಪರಿಶೀಲನೆ ನಡೆಸಿ, ಮೈಸೂರು ನಗರ ಪಾಲಿಕೆಗೆ ವರದಿ ಸಲ್ಲಿಸಲಾಗಿತ್ತು. ಪಾರಂಪರಿಕ ತಜ್ಞರ ಸಮಿತಿಯಲ್ಲೂ ಚರ್ಚಿಸಿ, ಇದಕ್ಕೆ ಅನುಮೋದನೆ ನೀಡಲಾಗಿತ್ತು. ಈ ಕಡತ ಮುಡಾದಲ್ಲಿದೆ ಎಂದು ಕೇಳಿದ್ದೇನೆ. ನಂತರದಲ್ಲಿ ಏನೂ ಕ್ರಮವಾಗಿಲ್ಲ.
> –ಪ್ರೊ.ಎನ್.ರಂಗರಾಜು
> ಪಾರಂಪರಿಕ ತಜ್ಞರ ಸಮಿತಿ ಸದಸ್ಯ





ಐದಾರು ವರ್ಷಗಳ ಹಿಂದೆ 2019ರಲ್ಲಿ ಫೈವ್‌ಲೈಟ್ ಸರ್ಕಲ್‌ನಿಂದ ಹೈದರ್ ಅಲಿ ರಸ್ತೆವರೆಗಿನ ಅಬ್ಬಾ ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ನಡೆಸಲಾಗಿದೆ. ಸುಮಾರು ಮೂರೂವರೆ ಕೋಟಿ ವೆಚ್ಚದಲ್ಲಿ 421 ಮೀಟರ್ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಈ ವೇಳೆ ಸರ್ಕಾರಿ ಅತಿಥಿ ಗೃಹದ ಸ್ವಲ್ಪ ಜಾಗವನ್ನೂ ಬಳಸಿಕೊಂಡಿದ್ದರಿಂದ ಕಮಾನು ಬೇರ್ಪಟ್ಟಿತು. ಪಾರಂಪರಿಕ ನಿರ್ಮಾಣ ಎಂಬ ಕಾರಣಕ್ಕೆ ಅದನ್ನು ನೆಲಸಮಗೊಳಿಸುವ ಪ್ರಯತ್ನಕ್ಕೆ ಕೈ ಹಾಕಲಿಲ್ಲ. ಆದರೆ ಕಮಾನಿಗಿಂತ ಕೆಲ ಮೀಟರ್ ಮುಂದಕ್ಕೆ ಇಕ್ಕೆಲದಲ್ಲಿದ್ದ ಕಂಬಗಳನ್ನು ಸುರಕ್ಷಿತವಾಗಿ ಕಮಾನಿನ ಪಕ್ಕಕ್ಕೆ ಸ್ಥಳಾಂತರಿಸಲಾಯಿತು. ರಸ್ತೆ ಕಾಮಗಾರಿ ಮುಗಿದ ನಂತರ ಪಾರಂಪರಿಕ ಕಮಾನು ಕುದುರೆ ಮಾಳವಾಗಿ ಬದಲಾಗಿತ್ತು. ಅಲ್ಲದೆ ವಾಹನಗಳು ಡಿಕ್ಕಿ ಹೊಡೆದು ಕಮಾನು ಹಾಳಾಗುವ ಸನ್ನಿವೇಶವೂ ಸೃಷ್ಟಿಯಾಗಿತ್ತು.

ಈ ಬಗ್ಗೆ ಪತ್ರಿಕೆಗಳಲ್ಲಿ ನಿರಂತರ ವರದಿ ಪ್ರಕಟವಾಗಿದ್ದರಿಂದ 2022ರಲ್ಲಿ ಈ ಪಾರಂಪರಿಕ ಕಮಾನು ರಕ್ಷಣೆಗೆ ಅದರ ಸುತ್ತಲೂ ಕಬ್ಬಿಣದ ಗ್ರಿಲ್ ಅಳವಡಿಸಲಾಯಿತು. ಆದರೆ ಇದು ಯಾವ ಪುರುಷಾರ್ಥಕ್ಕೆ ಬೇಕಿತ್ತು ಎಂದು ಜನ ಪ್ರಶ್ನಿಸುತ್ತಿದ್ದಾರೆ. ವಾಹನಗಳಿಂದ ಕಮಾನು ಹಾಳಾಗಬಾರದು ಎಂಬ ಕಾರಣಕ್ಕೆ ಗ್ರಿಲ್ ಅಳವಡಿಸಿದ್ದಾರೆ. ಆದರೆ ಆ ಕಮಾನು ಶೋಚನೀಯ ಸ್ಥಿತಿ ತಲುಪಿದ್ದರೂ ಕ್ರಮ ವಹಿಸಿಲ್ಲ. ಸ್ಮಾರಕವೇ ಕುಸಿದು ಬೀಳುವ ಸ್ಥಿತಿಯಲ್ಲಿರುವಾಗ ಸುತ್ತಲೂ ಭದ್ರವಾದ ಬೇಲಿ ನಿರ್ಮಿಸಿದರೆ ಏನು ಪ್ರಯೋಜನ ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಅಂತರಾಳ ದರ್ಶನ: ಮಹಾರಾಜರು ಆಳಿದ ಮೈಸೂರನ್ನು ಸಾಂಸ್ಕೃತಿಕ, ಪಾರಂಪರಿಕ ನಗರಿ ಎಂದು ಹೆಮ್ಮೆಯಿಂದ ಹೇಳುತ್ತೇವೆ. ಆದರೆ ಇಲ್ಲಿನ ಪಾರಂಪರಿಕ ನಿರ್ಮಾಣಗಳು ಒಂದೊಂದಾಗಿ ಇಲ್ಲವಾಗುತ್ತಿವೆ. ಛಾವಣಿ ಕುಸಿದು ದುರಂತ ಸಂಭವಿಸಿದ ನಂತರ ಲ್ಯಾನ್ಸ್‌ಡೌನ್ ಕಟ್ಟಡ ಹಾಳುಕೊಂಪೆಯಾಗಿದೆ. ಹಾಗೆ ಕುಸಿದ ದೇವರಾಜ ಮಾರುಕಟ್ಟೆ ಒಂದು ಭಾಗದ ಅವಶೇಷವೂ ಇನ್ನೂ ಹಾಗೆಯೇ ಇದೆ. ಸರಸ್ವತಿಪುರಂನ ಅಗ್ನಿಶಾಮಕ ಠಾಣೆ ಮುಂಭಾಗವನ್ನು ಇನ್ನೂ ದುರಸ್ತಿ ಮಾಡಿಲ್ಲ. ವಾಣಿ ವಿಲಾಸ ಮಾರುಕಟ್ಟೆ ಕಟ್ಟಡಲ್ಲಿನ ಮಳಿಗೆಯೊಂದರ ಸಜ್ಜಾ ಕುಸಿದರೂ ಅದೇ ಸ್ಥಿತಿಯಲ್ಲಿರುವ ಭಾಗವನ್ನೂ ಭದ್ರಪಡಿಸುವ ಕೆಲಸವಾಗಿಲ್ಲ. ಇದೇ ಸಾಲಿಗೆ ಸರ್ಕಾರಿ ಅತಿಥಿ ಗೃಹದ ಕಮಾನು ಸೇರುವ ದಿನಗಳು ದೂರವಿಲ್ಲ. ಬಿ.ಎನ್.ರಸ್ತೆ ಮೂಲಕ ಮೈಸೂರಿಗೆ ಬರುವ ಪ್ರವಾಸಿಗರಿಗೆ ಶೋಚನೀಯ ಸ್ಥಿತಿಯಲ್ಲಿರುವ ಈ ಕಮಾನು ಪಾರಂಪರಿಕ ನಗರಿ ಅಂತರಾಳದ ದರ್ಶನ ಮಾಡಿಸುತ್ತದೆ. ಕುಸಿಯುವ ಮುನ್ನ ಕಮಾನು ದುರಸ್ತಿ ಕಾರ್ಯ ಕೈಗೊಂಡರೆ ಸುಂದರ ಕಮಾನು ಉಳಿಯುತ್ತದೆ. ಹಾಗಂತ ಈ ಹಿಂದಿನಂತೆ ಸಿಮೆಂಟ್ ಪ್ಲಾಸ್ಟರಿಂಗ್ ಮಾಡಿ, ಅಂದಗೆಡಿಸದೆ ಗಾರೆ ಮೂಲಕ ಕಮಾನು ರಕ್ಷಣೆಗೆ ತ್ವರಿತ ಕ್ರಮ ಕೈಗೊಳ್ಳಬೇಕಿದೆ.

ಮೈಸೂರು ಮಿತ್ರ ಮಂಗಳವಾರ 26 ಮಾರ್ಚ್ 2024

ದೇವಟ್ ಪರಂಬು ಸ್ಮಾರಕಕ್ಕೆ ಪುಷ್ಪ ನಮನ

ಹಿರಿಯರ ಸ್ಮರಿಸಿದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ

ಮಡಿಕೇರಿ, ಮಾ.25–ಅಂತಾರಾಷ್ಟ್ರೀಯ ಜನಾಂಗೀಯ ತಾರತಮ್ಯ ದಿನದ ಅಂಗವಾಗಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ದೇವಟ್ ಪರಂಬುವಿನ ಕೊಡವ ನರಮೇಧದ ಸ್ಮಾರಕ ಸ್ಥಳದಲ್ಲಿ ಪುಷ್ಪ ನಮನ ಸಲ್ಲಿಸಿ ಹಿರಿಯರನ್ನು ಸ್ಮರಿಸಿತು.

ಹಿರಿಯರಿಗಾಗಿ ಶ್ರದ್ಧಾಂಜಲಿ ಅರ್ಪಿಸಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಮಾತನಾಡಿ, ದೇವಟ್ ಪರಂಬುವಿನಲ್ಲಿ ಷಡ್ಯಂತ್ರಕ್ಕೆ ಸಿಲುಕಿ ಕೊಡವ ಜನಾಂಗದ ಹಿರಿಯ ತಲೆಮಾರು ಬಲಿಯಾಯಿತು. ಈ ನೋವು ಅಚಲವಾಗಿ ಉಳಿದಿರುವಾಗಲೇ ಪ್ರಸ್ತುತ ಕೊಡವರ ಮೇಲಿನ ತಾರತಮ್ಯ ನೀತಿ ಮತ್ತಷ್ಟು ನೋವನ್ನುಂಟು ಮಾಡಿದೆ. ಕೊಡವ ಬುಡಕಟ್ಟು ಜನಾಂಗದ ಸಮಗ್ರ ಸಬಲೀಕರಣದ ಗುರಿ ಸಾಧನೆಗಾಗಿ ಹಿರಿಯರ ಆಶೀರ್ವಾದವನ್ನು ಪಡೆಯಲು ದೇವಟ್ ಪರಂಬುವಿನಲ್ಲಿ ಪುಷ್ಪ ನಮನ ಸಲ್ಲಿಸಿ ಸ್ಮರಣೆಯನ್ನು ಮಾಡಲಾಗಿದೆ ಆಡಳಿತ ನಡೆಸುತ್ತಿರುವ ಬಹುಸಂಖ್ಯಾತರು ಅಲ್ಪಸಂಖ್ಯಾತ, ಅತ್ಯಂತ ಸೂಕ್ಷ್ಮ, ಆದಿಮ ಸಂಜಾತ ಕೊಡವ ಬುಡಕಟ್ಟು ಜನರನ್ನು ತಾರತಮ್ಯ ಮನೋಭಾವದಿಂದ ನೋಡುತ್ತಿರುವುದು ವಿಷಾದನೀಯ ಎಂದು ಬೇಸರ ವ್ಯಕ್ತಪಡಿಸಿದರು.



ದೇವಟ್ ಪರಂಬುವಿನ ಸ್ಮಾರಕಕ್ಕೆ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ನಮನ ಸಲ್ಲಿಸಲಾಯಿತು.

ಕೊಡವ ಭೂ ರಾಜಕೀಯ ಸ್ವಾಯತ್ತತೆ ಮತ್ತು ಕೊಡವರ ಆಂತರಿಕ ರಾಜಕೀಯ ಸ್ವರ್ಣಿಯದ ಹಕ್ಕುಗಳನ್ನು ಅನುಷ್ಠಾನಗೊಳಿಸಬೇಕು. ಸಂವಿಧಾನದ 25 ಮತ್ತು 26ನೇ ವಿಧಿಗಳಡಿಯಲ್ಲಿ ಕೊಡವ ಸಂಸ್ಕಾರ ಬಂದೂಕನ್ನು ಸಿಖ್ಖರ 'ಕಿರ್ಪಾನ್'ಗೆ ಸಮಾನವಾಗಿ ಸೇರಿಸಬೇಕು. ಕೊಡವ ಬುಡಕಟ್ಟು ಜನಾಂಗಕ್ಕೆ ಎಸ್‌ಟಿ ಟ್ಯಾಗ್ ನೀಡಬೇಕು. ದೇವಟ್ ಪರಂಬು ದುರಂತ ಹತ್ಯಾಕಾಂಡದ ಸ್ಥಳ, ನಾಲ್ನಾಡ್ ಅರಮನೆ ಮತ್ತು ಮಡಿಕೇರಿ ಕೋಟೆಯಲ್ಲಿ ಅಂತಾರಾಷ್ಟ್ರೀಯ ಕೊಡವ ನರಮೇಧದ ಸ್ಮಾರಕವನ್ನು ಸ್ಥಾಪಿಸಬೇಕು. ಇದಕ್ಕಾಗಿ ಜಿಒಐ, ಯುಎನ್‌ಒ ಮತ್ತು ಫ್ರೆಂಚ್ ಸರ್ಕಾರ ಜಂಟಿಯಾಗಿ ಹಣ ನೀಡಬೇಕು ಎಂದು ಆಗ್ರಹಿಸಿದರು.

> 6 ಯುಎನ್‌ಒ ಮತ್ತು ಭಾರತೀಯ ಸಂಸತ್ತು ಕೊಡವ ನರಮೇಧವನ್ನು ಖಂಡಿಸಬೇಕು ಮತ್ತು ಫ್ರೆಂಚ್ ಸರ್ಕಾರ ಘೋರ ಅಪರಾಧಕ್ಕಾಗಿ ಕ್ಷಮೆಯಾಚಿಸಬೇಕು. ದೇವಟ್ ಪರಂಬು ದುರಂತ ಮತ್ತು ಅರಮನೆಯ ಪಿತೂರಿಯಲ್ಲಿನ ರಾಜಕೀಯ ಹತ್ಯೆಗಳನ್ನು ಯುಎನ್‌ಒದ ಅಂತಾರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು.
>
> –ಎನ್.ಯು.ನಾಚಪ್ಪ ಸಿಎನ್‌ಸಿ ಅಧ್ಯಕ್ಷ

ಸ್ಮರಣೆ ಕಾರ್ಯಕ್ರಮದಲ್ಲಿ ಸಿಎನ್‌ಸಿಯ ಅರೆಯಡ ಗಿರೀಶ್, ಮಂದಪಂಡ ಮನೋಜ್, ಅರೆಯಡ ಸವಿತಾ, ಚೋಳಪಂಡ ಜ್ಯೋತಿ ನಾಣಯ್ಯ, ಅಲ್ಮಂಡ ಜೈ, ಕಾಂಡೇರ ಸುರೇಶ್, ಚಂಬಂಡ ಜನತ್, ಬೇಪಡಿಯಂಡ ಬಿದ್ದಪ್ಪ, ಪುಟ್ಟಿಚಂಡ ದೇವಯ್ಯ, ಚೋಳಪಂಡ ನಾಣಯ್ಯ, ಪಾರ್ವಂಗಡ ನವೀನ್ ಪಾಲ್ಗೊಂಡಿದ್ದರು.

2 ಲಕ್ಷ ಮತಗಳ ಅಂತರದಿಂದ ಯದುವೀರ್‌ಗೆ ಜಯ

ಮಡಿಕೇರಿ, ಮಾ.25–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎದುರು ಬಿಜೆಪಿ ಗೆಲವು ಸುಲಭವಾಗಿದೆ ಎಂದು ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್ ತಿಳಿಸಿದರು.

ಸೋಮವಾರ ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಯಿಗೆ ಬಂದಂತೆ ಮಾತನಾಡುವ ಎಂ. ಲಕ್ಷ್ಮಣ್ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯನ್ನಾಗಿಸಿದೆ. ಇದರಿಂದ ಬಿಜೆಪಿ ಗೆಲವು ಮತ್ತಷ್ಟು ಸುಲಭ ಸಾಧ್ಯವಾಗಲಿದೆ. ಕೊಡಗು ಹಾಗೂ ಮೈಸೂರಿನಲ್ಲಿ ತಲಾ 1 ಲಕ್ಷ ಅಂತರ ಸೇರಿದಂತೆ 2 ಲಕ್ಷ ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿ ಯದುವೀರ್ ಜಯಗಳಿಸುತ್ತಾರೆ. ವಿಧಾನಸಭಾ ಚುನಾವಣೆಯೇ ಬೇರೆ, ಲೋಕಸಭಾ ಚುನಾವಣೆಯೇ ಬೇರೆ. ದೇಶದಲ್ಲಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕೆಂದು ಜನ ಬಯಸಿದ್ದಾರೆ. ಮೋದಿ ಪ್ರಧಾನಿಯಾಗಬೇಕೆಂದರೆ ಕೊಡುಗು–ಮೈಸೂರು ಕ್ಷೇತ್ರದಲ್ಲೂ ಜನ ಬಿಜೆಪಿಗೆ ಮತ ಹಾಕಬೇಕು ಎಂದು ಮನವಿ ಮಾಡಿದರು.



ಅಪ್ಪಚ್ಚು ರಂಜನ್

ಜೆಡಿಎಸ್‌ನಿಂದ ಕೆಲವರು ಕಾಂಗ್ರೆಸ್ ಸೇರಿದ್ದಾರೆ. ಇದರಿಂದ ಬಿಜೆಪಿಗೆ ಯಾವುದೇ ತೊಂದರೆ ಇಲ್ಲ. ಟಿ.ಜಾನ್ ಪುತ್ರ ಪೌಲ್ ಜಾನ್ ಬಿಜೆಪಿ ಸೇರಿದ್ದಾರೆ. ಹಾಗೇ ಬೇರೆ ಪಕ್ಷದ ಅನೇಕರು ಬಿಜೆಪಿ ಸೇರುತ್ತಿದ್ದಾರೆ. ಇಡೀ ಪ್ರಪಂಚ ಮೋದಿ ನಾಯಕತ್ವವನ್ನು ಶ್ಲಾಘಿಸುತ್ತಿದೆ. ಹೀಗಾಗಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿಯೇ ಇಲ್ಲ. ಗ್ಯಾರಂಟಿ ಯೋಜನೆಗಳು ವಿಫಲವಾಗಿದೆ. ಗ್ಯಾರಂಟಿ ಯೋಜನೆಗಳದ್ದು ರಾಜ್ಯದಲ್ಲಿ ಮುಗಿದ ಕಥೆಯಾಗಿದೆ. ಇನ್ನೇನಿದ್ದರೂ ದೇಶಕ್ಕೆ ಮೋದಿಯದ್ದೇ ಗ್ಯಾರಂಟಿ ಎಂದು ಹೇಳಿದರು.

ಜಿತೇಂದ್ರ ರೈಗೆ ಚಿನ್ನದ ಪದಕ



ಮಡಿಕೇರಿ, ಮಾ.25–ರಾಷ್ಟ್ರ ಮಟ್ಟದ ಪೊಲೀಸ್ ಶಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಜಿಲ್ಲಾ ಶಸಸ್ತ್ರ ದಳದ ಎಆರ್‌ಎಸ್‌ಐ ಜಿತೇಂದ್ರ ರೈ ಚಿನ್ನದ ಪದಕ ಪಡೆದಿದ್ದಾರೆ.

ತೆಲಂಗಾಣದಲ್ಲಿ ಪುಲೇಲ ಗೋಪಿಚಂದ್ ಬ್ಯಾಡ್ಮಿಂಟನ್ ಅಕಾಡೆಮಿ ವತಿಯಿಂದ ನಡೆದ ರಾಷ್ಟ್ರ ಮಟ್ಟದ ಪೊಲೀಸ್ ಶಟಲ್ ಬ್ಯಾಡ್ಮಿಂಟನ್‌ನಲ್ಲಿ ಅವರು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಕರ್ನಾಟಕ ತಂಡವನ್ನು ಪ್ರತಿನಿಧಿಸಿದ ಜಿತೇಂದ್ರ ರೈ, ಡಬಲ್ಸ್‌ನಲ್ಲಿ ಕಂಚಿನ ಪದಕ ಹಾಗೂ ಮಿಕ್ಸ್ ಡಬಲ್ಸ್‌ನಲ್ಲಿ ಚಿನ್ನದ ಪದಕವನ್ನು ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಹಿಂದೆಯೂ ರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ಅನೇಕ ಪದಕಗಳನ್ನು ಗೆದ್ದಿದ್ದಾರೆ. ಸೇನಾಪಡೆ, ಭಾರತೀಯ ರೈಲ್ವೆ, ಅರೆಸೇನಾ ಪಡೆ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ ಒಟ್ಟು 28 ರಾಜ್ಯ ಹಾಗೂ ವಿವಿಧ ಘಟಕಗಳು ಈ ಕ್ರೀಡೆಯಲ್ಲಿ ಭಾಗವಹಿಸಿದ್ದವು. ಜಿತೇಂತ್ರ ರೈ ಸಾಧನೆಯನ್ನು ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಶ್ಲಾಘಿಸಿದ್ದಾರೆ.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಮಡಿಕೇರಿ: ಕುಶಾಲನಗರ ತಾಲೂಕಿನ ಬಸವನಹಳ್ಳಿ ಗ್ರಾಮದ ಪೈಸಾರಿ ಜಾಗ ಸರ್ವೆ ನಂ.1/1ರ ಜಾಗದಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮ ವತಿಯಿಂದ ಬಸ್ ಘಟಕ ನಿರ್ಮಾಣ ಕಾಮಗಾರಿಗೆ ಅಡಚಣೆಯಾಗಿರುವ ಮರಗಳ ಬಹಿರಂಗ ಹರಾಜು ಮಾಡುತ್ತಿದ್ದು, ಆಕ್ಷೇಪಣೆ ಇದ್ದಲ್ಲಿ ಮಾ.31ರೊಳಗೆ ಸಲ್ಲಿಸಬೇಕು. 96 ಮರಗಳಿದ್ದು, ಈ ಮರಗಳ ಪೈಕಿ 79 ಮರಗಳು ಗಟ್ಟಿ ಜಾತಿಯ ಮರಗಳನ್ನು ಅರಣ್ಯ ಇಲಾಖೆ ವತಿಯಿಂದ ಕಡಿದು ಸರ್ಕಾರಿ ನಾಟ ಸಂಗ್ರಹಾಲಯ, ಆನೆಕಾಡುವಿಗೆ ಸಾಗಿಸಲು ಮತ್ತು 17 ಮೆದು ಜಾತಿಯ ಮರಗಳನ್ನು ಸ್ಥಳದಲ್ಲೇ ಹೇಗಿದೆಯೋ ಹಾಗೆ ಇರುವ ಸ್ಥಿತಿಯಲ್ಲಿ ಅರಣ್ಯ ಇಲಾಖೆ ವತಿಯಿಂದ ಬಹಿರಂಗ ಹರಾಜು ಮಾಡಲಾಗುವುದು.

ಸಾರ್ವಜನಿಕರು ಈ ಬಗ್ಗೆ ಯಾವುದೇ ಆಕ್ಷೇಪಣೆ ಇದ್ದಲ್ಲಿ ಮಾ.31ರೊಳಗೆ ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಗೆ ಸಲ್ಲಿಸಬೇಕು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲ ದಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರ




ಮಡಿಕೇರಿ, ಮಾ.25–ಸೋಮವಾರದಿಂದ ಕೊಡಗು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭವಾಗಿದ್ದು, ಮೊದಲ ದಿನ ಯಾವುದೇ ಗೊಂದಲಗಳಿಲ್ಲದೆ ಶಾಂತ ರೀತಿ ಪರೀಕ್ಷೆ ನಡೆದಿದೆ. ಜಿಲ್ಲೆಯಲ್ಲಿ 171 ಪ್ರೌಢಶಾಲೆಗಳ 6121 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು. ಈ ಪೈಕಿ 6007 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರೆ, 114 ವಿದ್ಯಾರ್ಥಿಗಳು ವಿವಿಧ ಕಾರಣಗಳಿಗಾಗಿ ಪರೀಕ್ಷೆಗೆ ಗೈರಾಗಿದ್ದಾರೆ.

ಇನ್ನು ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ನಿಗದಿತ ಸಮಯಕ್ಕೆ ಮುಂಚಿತವಾಗಿಯೇ ಪರೀಕ್ಷಾ ಕೇಂದ್ರಗಳಿಗೆ ಆಗಮಿಸಿ ತಮ್ಮ ರಿಜಿಸ್ಟರ್ ನಂಬರ್, ಕೊಠಡಿ ಸಂಖ್ಯೆಗಳನ್ನು ಖಾತ್ರಿ ಮಾಡಿಕೊಳ್ಳುತ್ತಿದ್ದುದು ಕಂಡು ಬಂತು. ಮಡಿಕೇರಿಯಲ್ಲಿ 8, ವಿರಾಜಪೇಟೆ 8 ಮತ್ತು ಸೋಮವಾರಪೇಟೆ ವ್ಯಾಪ್ತಿಯಲ್ಲಿ ಒಟ್ಟು 11 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ.

ಆರೋಗ್ಯ ಸೇವೆಯನ್ನು ಒದಗಿಸಲು ಅಗತ್ಯ ಆರೋಗ್ಯ ಸಿಬ್ಬಂದಿ ನಿಯೋಜಿಸಲಾಗಿತ್ತು. ಇನ್ನು ಎಲ್ಲಾ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತಲ ಪ್ರದೇಶಕ್ಕೆ ಸಾರ್ವಜನಿಕ ಪ್ರವೇಶಕ್ಕೆ ನಿಷೇಧಿಸಲಾಗಿತ್ತು. ಕೇಂದ್ರಗಳ ಸುತ್ತ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಜಿಲ್ಲೆಯ ಎಲ್ಲಾ ಪರೀಕ್ಷಾ ಕೊಠಡಿಗಳಲ್ಲಿ ಈ ಬಾರಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಪರೀಕ್ಷೆಯಲ್ಲಿ ಪಾರದರ್ಶಕತೆ ಕಾಪಾಡಲಾಗಿತ್ತು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಕಾಂತ್ ಮತ್ತು ಪರೀಕ್ಷಾ ನೋಡಲ್ ಅಧಿಕಾರಿ ಎಂ.ಮಹದೇವಸ್ವಾಮಿ ಮಾರ್ಗದರ್ಶನದಲ್ಲಿ ಪರೀಕ್ಷಾ ಸಿದ್ಧತೆ ನಡೆಸಲಾಗಿತ್ತು.

ನಾಳೆ ವಿಜಯೇಂದ್ರ ಮಡಿಕೇರಿಗೆ ಭೇಟಿ



ಮಡಿಕೇರಿ, ಮಾ.25–ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾ.27ರಂದು ಮಡಿಕೇರಿಗೆ ಭೇಟಿ ನೀಡಲಿದ್ದು, ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ನಗರದ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಮಂಗಳವಾರ ಬೆಳಗ್ಗೆ 10 ಗಂಟೆಗೆ ಸಭೆ ನಡೆಯಲಿದ್ದು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಸೇರಿದಂತೆ ರಾಜ್ಯ ಹಾಗೂ ಜಿಲ್ಲಾ ಮಟ್ಟದ ನಾಯಕರು ಪಾಲ್ಗೊಳ್ಳಲಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರಾದ ನಂತರ ಇದೇ ಮೊದಲ ಬಾರಿಗೆ ಕೊಡಗು ಜಿಲ್ಲೆಗೆ ಆಗಮಿಸುತ್ತಿರುವ ವಿಜಯೇಂದ್ರ ಅವರನ್ನು ಸಹಸ್ರಾರು ಕಾರ್ಯಕರ್ತರು ಕುಶಾಲನಗರದ ಕೊಪ್ಪ ಗೇಟ್ ಬಳಿ ಅದ್ಧೂರಿಯಾಗಿ ಸ್ವಾಗತಿಸಲಿದ್ದಾರೆ ಎಂದು ಪಕ್ಷದ ಜಿಲ್ಲಾ ವಕ್ತಾರ ಸುಬ್ರಹ್ಮಣ್ಯ ಉಪಾಧ್ಯಾಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಭವನಕ್ಕೆ ನೌಕಾ ದಳದ ಅಧಿಕಾರಿಗಳ ತಂಡ ಭೇಟಿ



ಮಡಿಕೇರಿಯ ಬಾಲಭವನಕ್ಕೆ ನೌಕಾ ದಳದ ಅಧಿಕಾರಿ ರಿಯರ್ ಅಡ್ಮಿರಲ್ ರಾಮಕೃಷ್ಣನ್ ನೇತೃತ್ವದ ತಂಡ ಭೇಟಿ ನೀಡಿತು.

ಮಡಿಕೇರಿ, ಮಾ.25– ಕರ್ನಾಟಕ ಪರಂಪರೆ ರ‍್ಯಾಲಿ ಪರಿಕಲ್ಪನೆಯೊಂದಿಗೆ ಜಿಲ್ಲೆಗೆ ಆಗಮಿಸಿರುವ ನೌಕಾ ದಳದ ಅಧಿಕಾರಿಗಳ ತಂಡ ನಗರದ ಬಾಲಭವನ ಹಾಗೂ ಶಕ್ತಿ ವೃದ್ಧಾಶ್ರಮಕ್ಕೆ ಭೇಟಿ ನೀಡಿತು.

ನೌಕಾ ದಳದ ಅಧಿಕಾರಿ ರಿಯರ್ ಅಡ್ಮಿರಲ್ ರಾಮಕೃಷ್ಣನ್ ನೇತೃತ್ವದಲ್ಲಿ ಬಾಲಭವನಕ್ಕೆ ಭೇಟಿ ನೀಡಿ, ಅಲ್ಲಿನ ಮಕ್ಕಳಿಗೆ ಅಗ್ನಿಪಥ್ ಯೋಜನೆಯ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಹಲವು ಮಾಹಿತಿಗಳನ್ನು ನೀಡಲಾಯಿತು. ನಂತರ ಮಕ್ಕಳೊಂದಿಗೆ ಸಂವಾದ ನಡೆಸಿದ ತಂಡದ ಪ್ರಮುಖರು, ಮಕ್ಕಳಿಗೆ ಅಗತ್ಯ ವಸ್ತುಗಳ ಜೊತೆ ಸಿಹಿ ವಿತರಿಸಿದರು. ಬಳಿಕ ಶಕ್ತಿ ವೃದ್ಧಾಶ್ರಮಕ್ಕೆ ಭೇಟಿ ನೀಡಿ, ಅಲ್ಲಿ ಆಶ್ರಯಪಡೆದಿರುವವರನ್ನು ಭೇಟಿಯಾಗಿ ಅಗತ್ಯ ವಸ್ತುಗಳನ್ನು ಕೊಡುಗೆಯಾಗಿ ನೀಡಿದರು.

ಪ್ರಮುಖರೊಂದಿಗೆ ಸಮಾಲೋಚನೆ: ನಿವೃತ್ತ ಸೇನಾಧಿಕಾರಿಗಳು ಹಾಗೂ ಇತರ ಪ್ರಮುಖರೊಂದಿಗೆ ನೌಕಾ ದಳದ ತಂಡ ನಗರದ ಕ್ಯಾಪಿಟಲ್ ವಿಲೇಜ್‌ನಲ್ಲಿ ಸಮಾಲೋಚನಾ ಸಭೆ ನಡೆಸಿತು.

ಅಧಿಕಾರಿಗಳಿಗೆ ಕೊಡಗಿನ ಕೊಡವ ಸಂಸ್ಕೃತಿಯಾದ ಉಮ್ಮತ್ತಾಟ್, ಕತ್ತಿಯಾಟ್, ಬೊಳಕಾಟ್ ನಂತಹ ಜನಪದ ಕಲೆಗಳನ್ನು ಪ್ರದರ್ಶಿಸಿ ವಿಶೇಷತೆ ಕುರಿತು ವಿವರಿಸಲಾಯಿತು ಎಂದು 30 ಅಧಿಕಾರಿಗಳ ತಂಡದೊಂದಿಗೆ ಆಗಮಿಸಿದ ಕೊಡಗಿನವರಾದ ಲೆಫ್ಟಿನೆಂಟ್ ಕಮಾಂಡರ್ ಕುಂಚೆಟ್ಟಿರ ಸುಬ್ಬಯ್ಯ ತಿಳಿಸಿದರು.

ಮೋದಿ ಪ್ರಧಾನಿ ಆದ ಬಳಿಕ ವಿಶ್ವದಲ್ಲೇ ಭಾರತಕ್ಕೆ ಪ್ರಮುಖ ಸ್ಥಾನ

ಗುಂಡ್ಲುಪೇಟೆ, ಮಾ.25–ಹತ್ತು ವರ್ಷಗಳಿಂದ ದೇಶ ಪ್ರಗತಿಯತ್ತ ಸಾಗುತ್ತಿದ್ದು, ಭಾರತದ ಮತ್ತಷ್ಟು ಅಭಿವೃದ್ಧಿಗಾಗಿ ಮತ್ತೊಮ್ಮೆ ನರೇಂದ್ರ ಮೋದಿ ಪ್ರಧಾನಿ ಆಗಬೇಕು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಮಾಜಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರ, ಭಯೋತ್ಪಾದಕತೆ ಬಗ್ಗೆ ಮಾತ್ರ ಮಾತನಾಡಬೇಕಾಗಿತ್ತು ಆದರೆ, ಮೋದಿ ಪ್ರಧಾನಿ ಆದ ನಂತರ ಭಾರತ ವಿಶ್ವದಲ್ಲೇ ಪ್ರಮುಖ ದೇಶವಾಗಿ ಹೊರಹೊಮ್ಮುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬರಗಾಲದಿಂದ ತೊಂದರೆ ಎದುರಿಸುವಂತಾಗಿದೆ. ಹುಸಿ ಭರವಸೆ ನೀಡಿ ಜನರನ್ನು ವಂಚಿಸುತ್ತಿದೆ ಎಂದು ದೂರಿದರು.

ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಮಾತನಾಡಿ, ದೇಶಕ್ಕೆ ಮೋದಿಯವರು ಪ್ರಧಾನಿ ಆಗುವುದು ಅನಿವಾರ್ಯ ಎಂಬುದು ಕಟ್ಟ ಕಡೆಯ ವ್ಯಕ್ತಿಗೂ ಅರಿವಿದೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗ ಜನಾಂಗದ ವ್ಯಕ್ತಿಗಳು ಸಹ ಮೋದಿ ಪ್ರಧಾನಿ ಆಗಬೇಕು ಎನ್ನುತ್ತಿದ್ದಾರೆ. ನಾನು ಯಾವುದೇ ಊರಿಗೆ ಹೋದರು ಅಲ್ಲಿನ ಜನರು ಮೋದಿ ಬಗ್ಗೆ ಮಾತನಾಡುತ್ತಾರೆ. ಹೀಗಾಗಿ ಮೋದಿಯವರ ವರ್ಚಸ್ಸು ನಮ್ಮ ಗೆಲುವನ್ನು ಸುಲಭ ಮಾಡಿಕೊಟ್ಟಿದೆ.



ಗುಂಡ್ಲುಪೇಟೆ ಅಂಬೇಡ್ಕರ್ ಭವದಲ್ಲಿ ಆಯೋಜಿಸಿದ್ದ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಸಿ.ಎಸ್.ನಿರಂಜನಕುಮಾರ್ ಉದ್ಘಾಟಿಸಿದರು. ಎಸ್.ಬಾಲರಾಜು, ಸೋಮಶೇಖರ್, ಎನ್.ಮಹೇಶ್, ಸಿ.ಮಹದೇವಪ್ರಸಾದ್, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಇದ್ದರು.

ನನಗೆ ಟಿಕೆಟ್ ಸಿಗುತ್ತದೆಂಬ ಸೂಚನೆಯನ್ನು ನೀಡಿದ್ದೇ ಮಲೆಮಹದೇಶ್ವರರು ಎಂದು ಸ್ಮರಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ಕಳೆದ ಬಾರಿ ಶಾಸಕರಾಗಿದ್ದ ನಾನು ಮತ್ತು ಗುಂಡ್ಲುಪೇಟೆಯ ಸಿ.ಎಸ್. ನಿರಂಜನಕುಮಾರ್ ಇಬ್ಬರೂ ಉತ್ತಮವಾಗಿ ಕೆಲಸ ಮಾಡಿದ್ದರೂ ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಸೋಲಿಸುವ ಮೂಲಕ ಮೌಲ್ಯಮಾಪಕರು (ಮತದಾರರು) ಸರಿಯಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಕೊಟ್ಟಂತಾಗಿದೆ. ಆದ್ದರಿಂದ ಲೋಕಸಭೆ ಚುನಾವಣೆಯಲ್ಲಿ ಅದೇ ತಪ್ಪು ಮಾಡದೆ ಯೋಚಿಸಿ ಮತದಾನ ಮಾಡಬೇಕು ಎಂದು ಮನವಿ ಮಾಡಿದರು.

ಕಾರ್ಯಕರ್ತರ ಸಭೆಗೂ ಮುನ್ನ ಎಸ್. ಬಾಲರಾಜು ತಾಲೂಕಿನ ಸೋಮಹಳ್ಳಿ ಮಠಕ್ಕೆ ತೆರಳಿ ಶ್ರೀಗಳಿಂದ ಆಶೀರ್ವಾದ ಪಡೆದರು. ನಂತರ ತಮ್ಮ ಹಳೆಯ ಗೆಳೆಯ ಭೋಗಂಯ್ಯನಹುಂಡಿ ಸಾಹುಕಾರ್ ದಿ.ಬಿ.ಪಿ.ಮುದ್ದುಮಲ್ಲು ಅವರ ಸಮಾಧಿಗೆ ನಮನ ಸಲ್ಲಿಸಿದರು. ಇದೇ ವೇಳೆ ಜೆಡಿಎಸ್ ಮುಖಂಡ ಕಡಬೂರು ಮಂಜುನಾಥ್ ಅವರನ್ನು ಭೇಟಿ ಮಾಡಿ ಬೆಂಬಲ ಕೋರಿದರು. ಬಿಜೆಪಿ ಮಂಡಲಾಧ್ಯಕ್ಷ ಸಿ.ಮಹದೇವ ಪ್ರಸಾದ್, ನಿಕಟಪೂರ್ವ ಅಧ್ಯಕ್ಷ ಡಿ.ಪಿ.ಜಗದೀಶ್, ಜಿಲ್ಲಾ ಉಪಾಧ್ಯಕ್ಷ ಹಿರೀಕಾಟಿ ಸೋಮಶೇಖರ್, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಪ್ರಭಾರಿ ಪಣೀಶ್, ಎಂ.ರಾಮಚಂದ್ರು, ಚಾಮುಲ್ ಅಧ್ಯಕ್ಷ ನಾಗೇಂದ್ರ, ಮೂಡ್ನಾಕೂಡು ಪ್ರಕಾಶ್, ವೃಷಭೇಂದ್ರ, ಎಸ್‌ಟಿ ಮೋರ್ಚಾ ನಿಕಟಪೂರ್ವ ಅಧ್ಯಕ್ಷ ಎನ್. ಮಲ್ಲೇಶ್, ಮುಖಂಡರಾದ ಕೊಡಸೋಗೆ ಶಿವಬಸಪ್ಪ ಮುಂತಾದವರು ಇದ್ದರು.

ಗುತ್ತಿಗೆ ನೌಕರರ ಬಂಧನ, ಬಿಡುಗಡೆ

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಎಐಯುಟಿಯುಸಿ ಪ್ರತಿಭಟನೆ

ಚಾಮರಾಜನಗರ, ಮಾ.25–ವಜಾಗೊಳಿಸಿರುವ ಗುತ್ತಿಗೆ ನೌಕರರನ್ನು ಕೂಡಲೇ ಮರು ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾರ್ಮಿಕರ ಸಂಘ ಹಾಗೂ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ)ನ ಧರಣಿನಿರತರನ್ನು ಪೊಲೀಸರು ಸೋಮವಾರ ಬಂಧಿಸಿ, ನಂತರ ಬಿಡುಗಡೆಗೊಳಿಸಿದರು.



ವಜಾಗೊಳಿಸಿರುವ ಗುತ್ತಿಗೆ ನೌಕರರನ್ನು ಮರು ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾರ್ಮಿಕರ ಸಂಘ ಹಾಗೂ ಎಐಯುಟಿಯುಸಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾ ಆಸ್ಪತ್ರೆ ಎದುರು ಸಂಘಟನೆಯ ಪ್ರಮುಖರು ಹಾಗೂ ವಜಾಗೊಂಡ ಗುತ್ತಿಗೆ ನೌಕರರು ಶಾಮಿಯಾನ ಹಾಕಿ, ನ್ಯಾಯಬೇಕು ಎಂದು ಧರಣಿ ಕುಳಿತ್ತಿದ್ದರು. ಆಸ್ಪತ್ರೆಯ ಡೀನ್, ಆರೋಗ್ಯ ಇಲಾಖೆ ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ಧರಣಿ ನಡೆಸಿದರು. ನಂತರ ಸ್ಥಳಕ್ಕಾಗಮಿಸಿದ ಪೊಲೀಸರು, ಇದು ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಪ್ರತಿಭಟನೆಯಿಂದ ಶಬ್ದ ಮಾಲಿನ್ಯವಾಗುತ್ತಿದೆ. ಇದರಿಂದ ತಾಯಿ, ಮಗು ಹಾಗೂ ಸಂಬಂಧಿಕರಿಗೆ ಆಸ್ಪತ್ರೆಗೆ ಬರಲು ಕಿರಿಕಿರಿಯಾಗುತ್ತಿದೆ. ಇಲ್ಲಿ ಧರಣಿ ನಡೆಸದಂತೆ ಸೂಚನೆ ನೀಡಿದರು.

ಅಲ್ಲದೇ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹೆಚ್ಚು ಕಾಲ ಧರಣಿ ನಡೆಸಲು ಅನುಮತಿ ಇಲ್ಲ ಎಂದು ಪೊಲೀಸರು 10ಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧಿಸಿ, ಶಾಮಿಯಾನ, ಚೇರ್‌ಗಳನ್ನು ವಶಪಡಿಸಿಕೊಂಡರು. ಸಾಯಂಕಾಲ ಎಲ್ಲರನ್ನು ಬಿಡುಗಡೆ ಮಾಡಿದರು.

ಇದಕ್ಕೂ ಮುನ್ನ ಮಾತನಾಡಿದ ಸಂಘಟನೆಯ ಅಧ್ಯಕ್ಷ ಚಂದ್ರಶೇಖರ್ ಮೇಟಿ, ಸಿಮ್ಸ್ ಆಸ್ಪತ್ರೆಯಲ್ಲಿ ಗುತ್ತಿಗೆ ನೌಕರರ ನೇಮಕಾತಿಯಲ್ಲಿ ಬಹಳ ಶೋಷಣೆ ನಡೆಯುತ್ತಿದೆ. ನೌಕರರಿಗೆ ಸರಿಯಾಗಿ ಸಂಬಳ ನೀಡದಿರುವುದು. ಹೆಚ್ಚು ದುಡಿಸಿಕೊಳ್ಳುವುದು ಸೇರಿದಂತೆ ಕಾರ್ಮಿಕ ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಲಾಗುತ್ತಿದೆ. ಈ ಬಗ್ಗೆ ಕಾರ್ಮಿಕರಿಗೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸಲು ಮುಂದಾದಾಗ ನೌಕರನ್ನೇ ವಜಾಗೊಳಿಸಲಾಗಿದೆ. ಈ ನೌಕರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಿಸುತ್ತಿದ್ದರೂ ಸಿಮ್ಸ್ ಹಾಗೂ ಗುತ್ತಿದಾರರು ಸೊಪ್ಪು ಹಾಕುತ್ತಿಲ್ಲ ಎಂದು ದೂರಿದರು. ಕಾರ್ಮಿಕ ಇಲಾಖೆ ಉಪಆಯುಕ್ತರ ಆದೇಶದಂತೆ ಐವರು ಕಾರ್ಮಿಕರು ಹಾಗೂ ಶುಶ್ರೂಷಕರ ಮೂರು ತಿಂಗಳ ವೇತನವನ್ನು ತಕ್ಷಣ ನೀಡಬೇಕು. ಕೋರಾನಾ ವಾರಿಯರ್ಸ್ ಆಗಿ ಕೆಲಸ ಮಾಡಿದ ಶುಶ್ರೂಷಕರಾದ ಪೂರ್ಣಿಮಾ ಮತ್ತು ರಂಜಿತಾ ಅವರಿಗೆ ಹೆರಿಗೆ ರಜಾ ಕಾರಣದಿಂದ ಕೆಲಸ ನೀಡ ನಿರಾಕರಿಸಲಾಗಿದೆ. ಮತ್ತೆ ಇವರಿಗೆ ತಕ್ಷಣ ಕೆಲಸ ನೀಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ಮಹದೇವ್, ಖಜಾಂಚಿ ಕುಮಾರ್, ಉಪಾಧ್ಯಕ್ಷ ಬೀರೇಗೌಡ, ಜಂಟಿ ಕಾರ್ಯದರ್ಶಿ ಮಹೇಶ್, ವಿನಯ್, ಸಂಘಟನೆಗಳ ಮುಖಂಡರಾದ ಡಿಎಸ್‌ಎಸ್‌ನ ಸಂಯೋಜಕ ಕೆ.ಎಂ.ನಾಗರಾಜು, ಸಂಚಾಲಕ ಸಿ.ಎಂ.ಶಿವಣ್ಣ, ಸಿ.ಎಂ. ಕೃಷ್ಣಮೂರ್ತಿ, ಹೊಂಡರಬಾಳು ವಾಸು, ಬಾಬು, ರಾಮಸಮುದ್ರ ಸುರೇಶ್, ಪ್ರಶಾಂತ್ ಇತರರು ಇದ್ದರು.

ದೊಡ್ಡಿಂದುವಾಡಿಯಲ್ಲಿ ಮಾಜಿ ಸಚಿವ ರಾಜುಗೌಡ ಸ್ಮರಣೆ



ದೊಡ್ಡಿಂದುವಾಡಿ ಗ್ರಾಮದಲ್ಲಿ ಸೋಮವಾರ ಮಾಜಿ ಸಚಿವ ದಿವಂಗತ ಜಿ. ರಾಜುಗೌಡ ಅವರ ಸ್ಮರಣೆ ಅಂಗವಾಗಿ ಅವರ ಸಮಾಧಿಗೆ ಪೂಜೆ ಸಲ್ಲಿಸಲಾಯಿತು.

ಹನೂರು, ಮಾ.25–ದೊಡ್ಡಿಂದುವಾಡಿ ಗ್ರಾಮದಲ್ಲಿ ಮಾಜಿ ಸಚಿವ ದಿವಂಗತ ಜಿ. ರಾಜುಗೌಡ ಅವರ 20ನೇ ವರ್ಷದ ಸ್ಮರಣೆ ಕಾರ್ಯಕ್ರಮ ನಡೆಯಿತು.

ಇದೇ ವೇಳೆ ದಿ.ರಾಜುಗೌಡರ ಸಮಾಧಿಗೆ ಪೂಜೆ ಸಲ್ಲಿಸಿ ಮಾತನಾಡಿದ ಮಾಜಿ ಶಾಸಕ ಆರ್.ನರೇಂದ್ರ, ನಮ್ಮ ತಂದೆ ರಾಜುಗೌಡ ಸಚಿವರಾಗಿ ಹನೂರು ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಶಾಸಕರಾಗಿದ್ದ ವೇಳೆ ಹನೂರು ಕ್ಷೇತ್ರವನ್ನು ಗುಡಿಸಲು ಮುಕ್ತ ಕ್ಷೇತ್ರವನ್ನಾಗಿ ಮಾಡಲು ಪಣತೊಟ್ಟಿ ಕ್ಷೇತ್ರದ ಉದ್ದಗಲಕ್ಕೂ ಬಡವರಿಗೆ ಸಾವಿರಾರು ನಿವೇಶನಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿ ಮನೆ ಕಟ್ಟಿಸಿಕೊಟ್ಟಿದ್ದರು ಎಂದರು.

ನಾನು ಸಹ 15 ವರ್ಷ ಶಾಸಕನಾಗಿ ನಮ್ಮ ತಂದೆಯವರ ಹಾದಿಯಲ್ಲಿಯೇ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿ, ಸರ್ಕಾರದಿಂದ ಸಾವಿರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿಪಡಿಸಿದ್ದೇನೆ. ಹನೂರು ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಮಾಡಲು ನಮ್ಮ ತಂದೆ ಕನಸು ಕಂಡಿದ್ದರು. ಅವರ ಕನಸನ್ನು ನಾನು ನೆನೆಸು ಮಾಡಿದ್ದೇನೆ. ಅವರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಹನೂರು ಕ್ಷೇತ್ರದ ಜನರಿಗೆ ಸ್ಪಂದಿಸುತ್ತಿದ್ದೇನೆ ಎಂದರು.

ನೂರಾರು ಅಭಿಮಾನಿಗಳು ಮಾಜಿ ಸಚಿವ ದಿ.ರಾಜುಗೌಡ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು. ಮಾಜಿ ಶಾಸಕ ಆರ್.ನರೇಂದ್ರ ಪತ್ನಿ ಆಶಾ ನರೇಂದ್ರ, ಪುತ್ರ ನವನೀತ್‌ಗೌಡ, ಪುತ್ರಿ ನಿಖಿತಾಗೌಡ, ಎಂಸಿಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಪ್ರವೀಣ್ ಕುಮಾರ್, ಪಟ್ಟಣ ಪಂಚಾಯಿತಿ ಸದಸ್ಯರಾದ ಗಿರೀಶ್, ಹರೀಶ್, ಸುದೇಶ್, ಮಾಜಿ ಉಪಾಧ್ಯಕ್ಷ ಬಸವರಾಜು, ಮುಖಂಡರಾದ ಹೊನ್ನೇಗೌಡ, ಮಾದೇಶ್, ಎಲ್.ರಾಜೇಂದ್ರ, ಕೊಪ್ಪಳಿ ಮಹಾದೇವ ನಾಯಕ, ಎಲ್.ನಾಗೇಂದ್ರ, ಲಿಂಗರಾಜು, ಮಾದೇವ, ರಾಮಲಿಂಗಣ್ಣ, ಅರುಣ್, ವಕೀಲರಾದ ನಾಗರಾಜು, ಸಿದ್ದಲಿಂಗೇಗೌಡ, ಮಂಗಲ ಪುಟ್ಟರಾಜು ಹಾಜರಿದ್ದರು.

ವಿಜೃಂಭಣೆಯ ಲಕ್ಷ್ಮೀ ನಾರಾಯಣಸ್ವಾಮಿ ರಥೋತ್ಸವ

ಚಾಮರಾಜನಗರ: ತಾಲೂಕಿನ ಬೆಂಡರವಾಡಿ ಗ್ರಾಮದಲ್ಲಿ ಅಪಾರ ಭಕ್ತರ ನಡುವೆ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ಜರುಗಿತು.

ನಂದಿಧ್ವಜ, ಬ್ಯಾಂಡ್, ಕೊಂಬು, ಸತ್ತಿಗೆ, ಸೂರಿಪಾಣಿ, ಮಂಗಳವಾದ್ಯ ಹಾಗೂ ವೀರ ಮಕ್ಕಳ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ರಥೋತ್ಸವ ನಡೆಯಿತು. ಗ್ರಾಮದ ಪ್ರಮುಖ ಬೀದಿಯಲ್ಲಿ ರಥ ಸಂಚರಿಸಿ ಮಧ್ಯಾಹ್ನ 12.45ಕ್ಕೆ ಸ್ವಸ್ಥಾನ ನಾರಾಯಣಸ್ವಾಮಿ ದೇವಸ್ಥಾನ ತಲುಪಿತು. ಜಯ ಘೋಷಗಳೊಂದಿಗೆ ರಥ ಎಳೆಯಲು ಭಕ್ತರು ಮುಗಿಬಿದ್ದರು. ಬಾಳೆಹಣ್ಣು, ವೀಳ್ಯದೆಲೆ ಎಸೆದು ನಮಿಸಿದರು. ಅಲ್ಲಲ್ಲಿ ಮಜ್ಜಿಗೆ, ಪಾನಕ, ಕೋಸಂಬರಿ, ಪಂಚಾಮೃತ ವಿತರಿಸಲಾಯಿತು. ಭಾನುವಾರ ಮುಂಜಾನೆ ಲಕ್ಷ್ಮೀದೇವಿ ಜಾತ್ರೆ ಉರುಳು ಸೇವೆಯೊಂದಿಗೆ ಪ್ರಾರಂಭವಾಗಿ ಇಡೀ ರಾತ್ರಿ ವಿವಿಧ ಧಾರ್ಮಿಕ ಪೂಜಾ ಕಾರ್ಯ ಹಾಗೂ ವಿಜೃಂಭಣೆಯ ಮೆರವಣಿಗೆ ನಡೆಯಿತು.

ಸೋಮವಾರ ನಸುಕಿನಲ್ಲಿ ಲಕ್ಷ್ಮೀದೇವಿ ದೇವಸ್ಥಾನ ಮುಂಭಾಗ ಕೊಂಡೋತ್ಸವ ನಡೆಯಿತು. ಈ ವೇಳೆ ಪಟಾಕಿ ಸಿಡಿಸಿ, ಬಾಣ–ಬಿರುಸುಗಳನ್ನು ಹಾರಿಸಲಾಯಿತು. ಬಳಿಕ ಲಕ್ಷ್ಮೀ ನಾರಾಯಣಸ್ವಾಮಿ ರಥೋತ್ಸವ ನಡೆಯಿತು. ಇದರೊಂದಿಗೆ ಎರಡು ದಿನಗಳ ದಿನಗಳ ಜಾತ್ರೆ ಸಂಪನ್ನಗೊಂಡಿತು. ಬಿ.ಮಲ್ಲಯ್ಯನಪುರ, ಮೇಗಲಹುಂಡಿ, ಕೆರೆಹಳ್ಳಿ, ಹೆಗ್ಗವಾಡಿ, ಭುಜಗನಪುರ, ಪಾಳ್ಯ, ಮುತ್ತಿಗೆ ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು.



ಸಂತೇಮರಹಳ್ಳಿ ಆಸ್ಪತ್ರೆಯಲ್ಲಿ ರೋಗಿಗಳಿಂದ ಹಣ ವಸೂಲಿ

ಚಾಮರಾಜನಗರ, ಮಾ.25–ತಾಲೂಕಿನ ಸಂತೇಮಹರಳ್ಳಿಯ ತಾಯಿ ಮತ್ತು ಮಕ್ಕಳ ಸಮುದಾಯ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಂದ ಹಣ ವಸೂಲಿ ಮಾಡಲಾಗತ್ತಿದೆ ಎಂಬ ದೂರುಗಳು ಕೇಳಿ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಆಸ್ಪತ್ರೆಯ ಸಿಬ್ಬಂದಿಯೊಬ್ಬರು ಆಶಾ ಕಾರ್ಯಕರ್ತೆಯರಿಂದ ಹಣ ಪಡೆಯುತ್ತಿರುವ ಎರಡು ವಿಡಿಯೋ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಉತ್ತಮ ಆಸ್ಪತ್ರೆ ಎಂಬ ಹೆಗ್ಗಳಿಕೆಯನ್ನು ಪಡೆದಿದ್ದ ಆಸ್ಪತ್ರೆಯಲ್ಲಿ ಈಗ ವ್ಯಾಪಕ ಭ್ರಷ್ಟಾಚಾರದ ಆರೋಪ ಕೇಳಿ ಬರುತ್ತಿದೆ.

ಆಸ್ಪತ್ರೆಯಲ್ಲಿ ಒಂದೊಂದು ಚಿಕಿತ್ಸೆಗೆ ಒಂದೊಂದು ರೀತಿ ರೋಗಿಗಳಿಂದ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಆಸ್ಪತ್ರೆಯ ಕೆಲ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಆರೋಪ ಕೇಳಿ ಬಂದಿದೆ. ಇದಕ್ಕೆ ಪೂರಕವಾಗಿ ವೈದ್ಯರ ಪರವಾಗಿ ಆಸ್ಪತ್ರೆಯ ನರ್ಸ್ ಒಬ್ಬರು ಹಣ ವಸೂಲಿ ಮಾಡುವ ವಿಡಿಯೋ ವೈರಲ್ ಆಗಿದೆ. ಪ್ರತಿ ಡೆಲಿವರಿಗೆ ಆಶಾ ಕಾರ್ಯಕರ್ತೆಯೊಬ್ಬರಿಂದ ಹಣ ವಸೂಲಿ ಮಾಡಿಸಲಾಗುತ್ತಿದೆ. ಅದಕ್ಕೆ ಅವರು ಒಪ್ಪದಿದ್ದರೆ ಅವರ ಮೇಲೆ ಕರ್ತವ್ಯ ಲೋಪದ ಆರೋಪ ಮಾಡಿ ನೋಟಿಸ್ ನೀಡಲಾಗುತ್ತದೆ ಎಂದು ಸ್ಥಳೀಯರು ದೂರಿದ್ದಾರೆ.



ಸಂತೇಮಹಳ್ಳಿ ತಾಯಿ ಮತ್ತು ಮಕ್ಕಳ ಸಮುದಾಯ ಆರೋಗ್ಯ ಕೇಂದ್ರ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಚಾಮರಾಜನಗರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ. ಚಿದಂಬರ, ಈ ಸಂಬಂಧ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಅಲ್ಲಿನ ಸಿಬ್ಬಂದಿಯಿಂದ ಮಾಹಿತಿ ಪಡೆಯಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಖಲಿಸ್ತಾನಿ ಉಗ್ರನ ಬಿಡುಗಡೆಗೆ ಬದಲಾಗಿ ಕೇಜ್ರಿವಾಲ್ 134 ಕೋಟಿ ರೂ. ಪಡೆದಿದ್ದಾರೆ

ಗುರುಪತ್ವಂತ್ ಸಿಂಗ್ ಪನ್ನು ಆರೋಪ

ನವದೆಹಲಿ: ಅಬಕಾರಿ ನೀತಿ ಹಗರಣ ಸಂಬಂಧ ಜೈಲು ಸೇರಿರುವ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಖಲಿಸ್ತಾನಿ ಪ್ರತ್ಯೇಕತಾವಾದಿ ಗುಂಪುಗಳಿಂದ ಬರೋಬ್ಬರಿ 134 ಕೋಟಿ ರೂಪಾಯಿ ಪಡೆದ ಆರೋಪ ಕೇಳಿ ಬಂದಿದೆ.

ಅರವಿಂದ್ ಕೇಜ್ರಿವಾಲ್ ವಿರುದ್ಧ ಸಿಖ್ ಫಾರ್ ಜಸ್ಟಿಸ್ ಎಂಬ ಪ್ರತ್ಯೇಕತಾವಾದಿ ಸಂಘಟನೆ ಸಂಸ್ಥಾಪಕ ಗುರುಪತ್ವಂತ್ ಸಿಂಗ್ ಪನ್ನು ಗಂಭೀರ ಆರೋಪ ಮಾಡಿದ್ದು ಇದು ದೇಶದ ರಾಜಕಾರಣದಲ್ಲಿ ತೀವ್ರ ಸಂಚಲನ ಸೃಷ್ಟಿಸಿದೆ. ವಿಡಿಯೋ ಬಿಡುಗಡೆ ಮಾಡಿರುವ ಪನ್ನು ದೆಹಲಿ ಬಾಂಬ್ ಸ್ಫೋಟದ ರುವಾರಿ ದೇವಿಂದರ್ ಪಾಲ್ ಸಿಂಗ್ ಭುಲ್ಲರ್ ಅವರನ್ನು ಬಂಧಮುಕ್ತ ಸಲುವಾಗಿ ಎಎಪಿಗೆ ಹಣ ನೀಡಲಾಗಿದೆ. ಹೀಗಾಗಿ ಕೇಜ್ರಿವಾಲ್ ಭುಲ್ಲರ್‌ನನ್ನು ಬಿಡುಗಡೆ ಮಾಡಲು ಮುಂದಾಗಿರುವುದನ್ನು ಬಹಿರಂಗಪಡಿಸಿದ್ದಾನೆ. ಇದೇ ಅಲ್ಲದೆ 2014 ಮತ್ತು 2022ರ ನಡುವೆ, ಅರವಿಂದ್ ಕೇಜ್ರಿವಾಲ್ ಖಲಿಸ್ತಾನಿಗಳಿಂದ ಒಟ್ಟು 134 ಕೋಟಿ ರೂಪಾಯಿ ಹಣ ತೆಗೆದುಕೊಂಡಿದ್ದಾರೆ ಎಂದು ಪನ್ನು ಆರೋಪಿಸಿದ್ದಾರೆ. ವೀಡಿಯೊದಲ್ಲಿ ತನ್ನನ್ನು ಪ್ರಾಮಾಣಿಕ ಭಾರತೀಯ ಹಿಂದೂ ಎಂದು ಕರೆದುಕೊಳ್ಳುವ ಅರವಿಂದ್ ಕೇಜ್ರಿವಾಲ್, ಅಪ್ರಾಮಾಣಿಕ ಭಾರತೀಯ ಹಿಂದೂಗಿಂತ ಹೆಚ್ಚು ಅಪಾಯಕಾರಿ. 2014ರಲ್ಲಿ ಅರವಿಂದ್ ಕೇಜ್ರಿವಾಲ್ ಅಧಿಕಾರದಲ್ಲಿ ಇರಲಿಲ್ಲ. ನಂತರ ಅಮೆರಿಕಕ್ಕೆ ಬಂದು ನಮ್ಮ ಸರ್ಕಾರ ರಚನೆಯಾದರೆ ಐದು ಗಂಟೆಯೊಳಗೆ ಪ್ರೊ.ದೇವಿಂದರ್ ಪಾಲ್ ಸಿಂಗ್ ಭುಲ್ಲರ್ ಅವರನ್ನು ಬಿಡುಗಡೆ ಮಾಡುವುದಾಗಿ ನ್ಯೂಯಾರ್ಕ್‌ನಲ್ಲಿ ಭರವಸೆ ನೀಡುತ್ತಾರೆ. ಇಂದಿಗೆ 9 ವರ್ಷಗಳು ಕಳೆದರೂ ದೇವಿಂದರ್ ಪಾಲ್ ಅವರನ್ನು ಬಿಟ್ಟಿಲ್ಲ. ಆದರೆ, ಅವರು ಆಮ್ ಆದ್ಮಿ ಪಕ್ಷದ ಸರ್ಕಾರ ರಚಿಸಲು ನಮ್ಮಿಂದ 16.70 ಮಿಲಿಯನ್ ಡಾಲರ್ ತೆಗೆದುಕೊಂಡಿದ್ದಾರೆ.

ಒಂದನೇ ಪುಟದಿಂದ

ಮೂರೂ ಪಕ್ಷಗಳು

ದಿನ ಬಾಕಿ ಉಳಿದಿದೆ. ರಾಜ್ಯದ ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ, ತುಮಕೂರು, ಹಾಸನ, ಉಡುಪಿ–ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಆರಂಭಕ್ಕೆ ಮಾರ್ಚ್ 28ರಂದು ಅಧಿಸೂಚನೆ ಹೊರಬೀಳಲಿದೆ. ಈ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ ಅಧಿಸೂಚನೆ ಹೊರ ಬೀಳುವುದರೊಂದಿಗೆ ಆರಂಭಗೊಂಡು, ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 4 ಕೊನೆಯ ದಿನವಾಗಿದೆ. 5ರಂದು ನಾಮಪತ್ರ ಪರಿಶೀಲನೆ, ನಾಮಪತ್ರ ಹಿಂಪಡೆಯಲು ಏಪ್ರಿಲ್ 8 ಕೊನೆಯ ದಿನವಾಗಿರುತ್ತದೆ.

ಏಪ್ರಿಲ್ 26 ರಂದು ಈ 14 ಕ್ಷೇತ್ರಗಳಿಗೆ ಮತದಾನ ನಡೆದು ಜೂನ್ 4ರಂದು ಫಲಿತಾಂಶ ಹೊರಬೀಳಲಿದೆ. ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಈ ಕ್ಷೇತ್ರಗಳಿಗೆ ಹೆಸರಿಸಲ್ಪಟ್ಟಿರುವ ಅಭ್ಯರ್ಥಿಗಳು ಈಗಾಗಲೇ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಮೈಸೂರು–ಕೊಡಗು ಹಾಗೂ ಬೆಂಗಳೂರು ಗ್ರಾಮಾಂತರ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಬಹಳ ಪ್ರತಿಷ್ಠೆಯ ಕ್ಷೇತ್ರಗಳಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ವಕ್ಷೇತ್ರವಾದ ಮೈಸೂರು–ಕೊಡಗಿನಲ್ಲಿ ಬಿಜೆಪಿ ರಾಜವಂಶಸ್ಥರ ಕುಟುಂಬದವರನ್ನೇ ಕಣಕ್ಕಿಳಿಸಿದೆ. ಈ ಕುಟುಂಬದ ವಿರುದ್ಧ ಹೋರಾಟ ನಡೆಸಿ ತಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ಪರಿಸ್ಥಿತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರ್ಮಾಣವಾಗಿದೆ. ಇನ್ನೊಂದೆಡೆ ಬೆಂಗಳೂರು ಗ್ರಾಮಾಂತರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಅವರನ್ನು ಮಣಿಸಲು ಬಿಜೆಪಿ, ಖ್ಯಾತ ಹೃದಯ ತಜ್ಞ ಡಾ. ಮಂಜುನಾಥ್ ಅವರನ್ನು ಚುನಾವಣಾ ಕಣಕ್ಕಿಳಿಸಿದೆ.

ಸಂಸದರಲ್ಲಿ ಯದುವೀರ್ ಒಬ್ಬರಾಗಿರುತ್ತಾರೆ!

ಕರ್ನಾಟಕದಲ್ಲಿನ ಕಾಂಗ್ರೆಸ್ ಸರ್ಕಾರ ತಮಿಳುನಾಡಿಗೆ ನೀರು ಬಿಟ್ಟಿರುವುದರಿಂದಲೇ ಇಂದು ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿದೆ. ಮೇಕೆದಾಟು ಯೋಜನೆಗೆ ಡಿಎಂಕೆ ಬಹಿರಂಗವಾಗಿ ವಿರೋಧಿಸುತ್ತಿದ್ದರೂ ಕಾಂಗ್ರೆಸ್ ಅವರೊಂದಿಗೆ 'ಇಂಡಿಯಾ' ಒಕ್ಕೂಟದಲ್ಲಿದೆ ಎಂದು ಹರಿಹಾಯ್ದರು. ರಾಜ್ಯದಲ್ಲಿ ಮುಸ್ಲಿಮರಿಂದ, ಮುಸ್ಲಿಮರಿಗಾಗಿ, ಮುಸ್ಲಿಮರಿಗೋಸ್ಕರ ಓಲೈಕೆಯ ಆಡಳಿತ ನಡೆಯುತ್ತಿದೆ ಎಂಬ ಭಾವನೆ ಎಲ್ಲಾ ಜಾತಿಯವರಲ್ಲಿದೆ. ಇದಕ್ಕೆ ಪೂರಕವಾಗಿ ವಿಧಾನಸೌಧದಲ್ಲಿ ಬಹಿರಂಗವಾಗಿಯೇ ಪಾಕಿಸ್ತಾನ್ ಪರ ಘೋಷಣೆ ಕೂಗಲಾಗಿದೆ. ಉಗ್ರರ ದಾಳಿಯೂ ನಡೆದಿದೆ. ಇತ್ತೀಚೆಗೆ ಹನುಮಾನ್ ಚಾಲೀಸ್ ಪಠಿಸಿದ ಎಂಬ ಕಾರಣಕ್ಕೆ ಯುವಕನೊಬ್ಬನನ್ನು ಥಳಿಸಲಾಗಿದೆ. ಇವೆಲ್ಲದ ನಡುವೆ ಹಿಂದೂಗಳ ದೇವಾಲಯಗಳ ಮೇಲೆ ರಾಜ್ಯ ಸರ್ಕಾರ ತೆರಿಗೆ ವಿಧಿಸಲು ಮುಂದಾಗಿದ್ದು, ಇದು ಔರಂಗಜೇಬನ ತೆರಿಗೆ ನೀತಿಯನ್ನು ಅನುಸರಿಸಿದಂತಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿಕಾಳಪ್ಪ, ಮಾಜಿ ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ, ವಿಧಾನ ಪರಿಷತ್ ಸದಸ್ಯ ಎಂ.ಪಿ.ಸುಜಾಕುಶಾಲಪ್ಪ, ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಬಿಜೆಪಿ ಪ್ರಮುಖರು ಹಾಜರಿದ್ದರು.

ಮಂಜುನಾಥ್‌ಗೆ ಮತ ನೀಡಿ!

ಮತ್ತೊಮ್ಮೆ ಪ್ರಧಾನಿ ಆಗೋದು ಅಷ್ಟೇ ಸತ್ಯ. ಡಾ.ಮಂಜುನಾಥ್ ಅವರು ಮೋದಿ ಸಂಪುಟದಲ್ಲಿ ಸಚಿವರಾಗೋದು ಅಷ್ಟೇ ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ವರ್ಗಕ್ಕೆ ಹೋದರೆ ರಂಭೆ, ಊರ್ವಶಿ, ಮೇನಕೆ ನೋಡಬಹುದು. ನರಕ್ಕೆ ಯಾಕೆ ಹೋಗುತ್ತೀರಾ. ನಾನೇ ಕಠಾರಿವೀರ ಅಂತ ಒಂದು ಸಿನಿಮಾ ಮಾಡಿದ್ದೇನೆ. ಅದರಲ್ಲಿ ಸ್ವರ್ಗ, ನರಕ ಹೇಗಿರುತ್ತೆ ಅಂತ ನೋಡಿ. ಈ ಚುನಾವಣೆ ರಾಮ–ರಾವಣರ ಯುದ್ಧ. ನಿಮಗೆ ರಾಮಬೇಕಾ? ರಾವಣ ಬೇಕಾ? ನಾವು ಈ ರಾಮನನ್ನು ಪಾರ್ಲಿಮೆಂಟ್‌ಗೆ ಕಳುಹಿಸಬೇಕು. ಬಿಜೆಪಿ ಹೃದಯದಲ್ಲಿ ಜೆಡಿಎಸ್ ಇದೆ. ಮತ ಹಾಕುವಾಗ ಜೆಡಿಎಸ್ ಇಲ್ಲ ಎಂದು ಗೊಂದಲಕ್ಕೀಡಾಗಬೇಡಿ. ಮಂಜುನಾಥ್ ಹೃದಯದಲ್ಲಿ ಜೆಡಿಎಸ್ ಇದೆ. ಹಾಗಾಗಿ ಬಿಜೆಪಿ ಚಿಹ್ನೆಗೆ ಮತ ಹಾಕಿ ಎಂದರು.

ಕೋಟ್ಯಾಂತರ ರೂ.ಗಳಿಗೆ ಮಾರಾಟ!

ರಸ್ತೆ ನಿರ್ಮಾಣಕ್ಕೆ ನಿಗಧಿಪಡಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) 2001ರ ಆಗಸ್ಟ್ 10ರಂದು ಭವ್ಯ ಭಾರತ ಗೃಹ ನಿರ್ಮಾಣ ಸಹಕಾರ ಸಂಘದ ಬಡಾವಣೆ ನಕ್ಷೆಗೆ ಅನುಮೋದನೆ ನೀಡಿತ್ತು. ಅದರಂತೆ ವಸತಿ ಬಡಾವಣೆ ರಚಿಸಿದ ಸಂಘವು ವಿವಿಧ ಅಳತೆಯ 79 ನಿವೇಶನ ರಚಿಸಿ ಮಾರಾಟ ಮಾಡಿರುವುದು ಸರಿಯಷ್ಟೆ, ಆದರೆ ಉದ್ಯಾನವನಕ್ಕೆಂದು ನಿಗಧಿಪಡಿಸಿದ್ದ 4,936 ಚದರ ಮೀಟರ್, 3,673 ಚದರ ಸಿಎ ನಿವೇಶನ ಹಾಗೂ 7,826 ಚ.ಮೀ ರಸ್ತೆ ಜಾಗವನ್ನು ಸಂಘದ ಅಧ್ಯಕ್ಷರಾದ ವಿಧಾನ ಪರಿಷತ್ ಸದಸ್ಯ ಸಿಎನ್.ಮಂಜೇಗೌಡರು(ಇವರು ಮುಡಾ ಸದಸ್ಯರು ಹೌದು), 2002ರ ಜುಲೈ 9ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ (ಬಿಟ್ಟುಕೊಡಲಾದ)ಮೂಲಕ ಬರೆದುಕೊಟ್ಟಿದ್ದು, ಅದು ಮೈಸೂರು ಉತ್ತರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿದೆ. ನಂತರ ಮಂಜೇಗೌಡರಿಗೆ 79 ನಿವೇಶನಗಳನ್ನು ನಿಯಮಾನುಸಾರ ಮಂಜೂರು ಮಾಡಲಾಗಿದೆ. ಆದರೆ ಈಗಾಗಲೇ ಮುಡಾಗೆ ಬಿಟ್ಟು ಕೊಟ್ಟಿರುವ ಉದ್ಯಾನವನದ ಜಾಗದಲ್ಲಿ ಮತ್ತೆ 40X60 ಅಳತೆಯ 8 ನಿವೇಶನಗಳನ್ನು ಅಭಿವೃದ್ಧಿಪಡಿಸಿ, ಪ್ರಾಧಿಕಾರದ ಅನುಮೋದನೆ ಇಲ್ಲದೆ, ಸಿಡಿ ಪಟ್ಟಿ ಪಡೆಯದಿದ್ದರೂ, ಅನುಮೋದಿತ ನಕ್ಷೆಗೆ ವಿರುದ್ಧವಾಗಿ ಕೋಟ್ಯಾಂತರ ರೂ.ಗಳಿಗೆ ಮಾರಾಟ ಮಾಡಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಶುದ್ಧ ಕ್ರಯ ಪತ್ರವನ್ನು ಮಾಡಿಕೊಟ್ಟಿದ್ದಾರೆ. ನಿವೇಶನ ಖರೀದಿಸಿದ 79 ಮಂದಿ ಆ ಬಡಾವಣೆಯಲ್ಲಿ ಉದ್ಯಾನವನ ನಾಪತ್ತೆಯಾದ ಬಗ್ಗೆ ಪರಿಶೀಲಿಸಿದಾಗ ಆ ಉದ್ದೇಶಕ್ಕೆಂದು ಮೀಸಲಿರಿಸಿದ್ದ ಜಾಗದಲ್ಲಿ ಅನಧಿಕೃತವಾಗಿ ನಿವೇಶನ ರಚಿಸಿ, ಅಮಾಯಕರಿಗೆ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ.

ಈ ಮಧ್ಯೆ ಆರ್‌ಟಿಐ ಕಾರ್ಯಕರ್ತರು ಮಾಹಿತಿ ಹಕ್ಕು ಕಾಯ್ದೆಯನ್ವಯ ದಾಖಲಾತಿ ಪ್ರತಿಗಳನ್ನು ಪಡೆದಾಗ ಉದ್ಯಾನವನದ ಜಾಗದಲ್ಲಿ ನಿವೇಶನ ಮಾಡಿ ಮಾರಾಟ ಮಾಡಿರುವುದು ದೃಢಪಟ್ಟ ಹಿನ್ನಲೆಯಲ್ಲಿ ಅಕ್ರಮ ತೆರವುಗೊಳಿಸುವಂತೆ ಮುಡಾ ಅಧ್ಯಕ್ಷರು ಹಾಗೂ ಆಯುಕ್ತರಿಗೆ ಲಿಖಿತ ದೂರು ನೀಡಲಾಗಿತ್ತು. ಅದರನ್ವಯ ದಾಖಲೆಗಳನ್ನು ಪರಿಶೀಲಿಸಿದ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ ಅವರು, ವರದಿ ತರಿಸಿಕೊಂಡು ಇಂದು ಅಧಿಕಾರಿಗಳನ್ನು ಕಳುಹಿಸಿ ಉದ್ಯಾನವನಕ್ಕೆಂದು ಗುರುತಿಸಿರುವ ಜಾಗದಲ್ಲಿ '**ಇದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಸ್ತಿ, ಅತಿಕ್ರಮ ಪ್ರವೇಶ ನಿಷೇಧಿಸಲಾಗಿದೆ**' ಫಲಕ ಅಳವಡಿಸಿ, ತಂತಿ ಬೇಲಿ ಹಾಕಿಸುವ ಪ್ರಕ್ರಿಯೆ ಆರಂಭಿಸಿದ್ದಾರೆ.

ಪಾರ್ಕ್ ಜಾಗ ಮುಡಾ ವಶಕ್ಕೆ ಪಡೆದಿದ್ದೇವೆ...

ಹಿನ್ನಲೆಯಲ್ಲಿ ಅಧಿಕಾರಿಗಳನ್ನು ಕಳುಹಿಸಿ ಸೂಕ್ತ ಕ್ರಮ ವಹಿಸಲಾಗಿದೆ ಎಂದರು. ಈ ಕೂಡಲೇ ಉಪ ನೊಂದಣಾಧಿಕಾರಿಗಳಿಗೆ ಪತ್ರ ಬರೆದು ನೋಂದಣಿ ಮಾಡಿರುವ ಅನಧಿಕೃತ ಕ್ರಯಪತ್ರ ರದ್ದುಪಡಿಸುವಂತೆ ತಿಳಿಸುತ್ತೇವೆ. ಅಷ್ಟೇ ಅಲ್ಲದೆ, ಈ ರೀತಿ ಪಾರ್ಕ್, ಸಿಎ ನಿವೇಶನವನ್ನು ನಿಯಮ ಬಾಹಿರವಾಗಿ ನಿವೇಶನಗಳನ್ನಾಗಿ ಮಾಡಿರುವವರ ವಿರುದ್ಧವೂ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಸಿದ್ದಾರೆ. ಅನುಮೋದಿತ ನಕ್ಷೆಯನ್ವಯ ಅಗತ್ಯ ಮೂಲ ಸೌಲಭ್ಯಗಳೊಂದಿಗೆ ಶೇ.100 ರಷ್ಟು ಅಭಿವೃದ್ಧಿಗೊಳಿಸಿರುವ ಬಡಾವಣೆಗಳಿಗೆ ಮಾತ್ರ ನಾನೇ ಖುದ್ದು ಸ್ಥಳ ಪರಿಶೀಲಿಸಿದ ಬಳಿಕವಷ್ಟೇ ನಿವೇಶನಗಳನ್ನು ಬಿಡುಗಡೆ ಮಾಡಿ, ಸಿಡಿ ಪಟ್ಟಿ ನೀಡಲು ಕ್ರಮವಹಿಸುತ್ತೇನೆ ಎಂದ ಪ್ರಾಧಿಕಾರದ ಅಧ್ಯಕ್ಷರು, ಯಾರು ಎಷ್ಟೇ ಪ್ರಭಾವಿಗಳಾದರೂ, ಪ್ರತಿಷ್ಠಿತ ವ್ಯಕ್ತಿಗಳಾದರೂ ಸಹ ಅಕ್ರಮ, ನಿಯಮ ಬಾಹಿರ ಬಡಾವಣೆಗೆ ಅವಕಾಶ ನೀಡುವುದಿಲ್ಲ ಎಂದರು. ಈ ರೀತಿ ಮಾಡುವುದರಿಂದ ಮುಡಾಗೂ ಅನುಕೂಲ ವಾಗಲಿದೆಯಲ್ಲದೆ ನಿವೇಶನ ಖರೀದಿಸಿದವರೂ ಮೋಸ ಹೋಗುವುದನ್ನು ತಪ್ಪಿಸಬಹುದಾಗಿದೆ ಎಂದೂ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ತಿಂಗಳ ತಿಳಿವು ಪ್ರಥಮ ಕಾರ್ಯಕ್ರಮ

ಜಗತ್ತಿಗೆ ಶ್ರೀರಾಮಕೃಷ್ಣ ಪರಮಹಂಸರ ಚಿಂತನೆ ಪಸರಿಸುವುದು ಅಗತ್ಯ

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್



ಮೈಸೂರಿನ ಶ್ರೀರಾಮಕೃಷ್ಣ ಪರಮಹಂಸ ವೃತ್ತದ ಪರಮಹಂಸ ಮಂಟಪದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ತಿಂಗಳ ತಿಳಿವು ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್ ಉದ್ಘಾಟಿಸಿದರು.

ಮೈಸೂರು,ಮಾ.25(ಪಿಎಂ)– ಇಂದು ಜಗತ್ತು ಅತೃಪ್ತಿ ಮತ್ತು ಅಶಾಂತಿ ಎಂಬ ಬೆಂಕಿಯಲ್ಲಿ ಬೇಯುತ್ತಿದ್ದು, ಇದನ್ನು ನಿವಾರಿಸಿಕೊಂಡು ಶಾಂತಿ ಮತ್ತು ನೆಮ್ಮದಿ ಬದುಕು ಮಾಡಲು ಶ್ರೀರಾಮಕೃಷ್ಣ ಪರಮಹಂಸರು, ವಿವೇಕಾನಂದರು ಮತ್ತು ಶಾರದಾದೇವಿಯವರ ಚಿಂತನೆಗಳನ್ನು ಪಸರಿಸುವುದು ಅಗತ್ಯ ಎಂದು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಸನ್ಯಾಸಿಗಳಾದ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್ ಹೇಳಿದರು.

ಮೈಸೂರಿನ ಶ್ರೀರಾಮಕೃಷ್ಣ ಪರಮಹಂಸ ವೃತ್ತದ ಪರಮಹಂಸ ಮಂಟಪದ (ಪ್ರತಿಮೆ ಆವರಣ) ಆವರಣದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ತಿಂಗಳ ತಿಳಿವು ಸಂಚಿಕೆ–1 (ಪ್ರತಿ ತಿಂಗಳು ಹುಣ್ಣಿಮೆಯಂದು ನಡೆಯುವ ಮೊದಲ ಕಾರ್ಯಕ್ರಮ) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ತಿಂಗಳು ಹುಣ್ಣಿಮೆಯಂದು ಆಧ್ಯಾತ್ಮ ಚಿಂತನೆಗಾಗಿ ಇಂತಹ ಕಾರ್ಯಕ್ರಮ ನಡೆಸಲು ಉದ್ದೇಶಿಸಿರುವುದು ಸ್ವಾಗತಾರ್ಹ. ಶ್ರೀ ರಾಮಕೃಷ್ಣರ ಸ್ಮರಣೆಯಿಂದ ಭಕ್ತಿಯ ಜಲ ಉದ್ಭವಿಸಿ ಶಾಂತಿ ಮೂಡಲಿದೆ. ಜೊತೆಗೆ ಜಾತಿ, ಮತ ಸೇರಿದಂತೆ ಮೊದಲಾದ ಕಾರಣಕ್ಕೆ ಉಂಟಾಗುವ ಕಲಹಗಳು ದೂರವಾಗಲಿವೆ. ರಾಮಕೃಷ್ಣರು ಸುಲಭವಾಗಿ ಭಗವಂತನ ಕೃಪೆಗೆ ಪಾತ್ರರಾಗುವ ದಾರಿ ತೋರಿದ್ದಾರೆ. ಅವರ ಚಿಂತನೆಗಳಿಂದ ನಮ್ಮಲ್ಲಿ ಶ್ರದ್ಧಾಭಕ್ತಿ ಉದಯಿಸಲಿದೆ ಎಂದು ತಿಳಿಸಿದರು.

ರಾಮಕೃಷ್ಣರ ಸ್ಮರಣೆಯಿಂದ ನಮ್ಮ ಅಂತರಂಗದಲ್ಲಿ ದೈವತ್ವದ ಆನಂದ ಅನುಭವಿಸುವ ಶಕ್ತಿ ಮೂಡಲಿದೆ. ನಾವು ಆಲೋಚನೆ ಮಾಡಿದಂತೆಯೇ ಆಗುತ್ತವೇ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ನಮ್ಮ ಮೆದುಳಿನಲ್ಲಿ ಅಂತಹ ಶಕ್ತಿ ಇದೆ. ಹಾಗಾಗಿ ಸರಿಯಾದ ಮಾರ್ಗದಲ್ಲಿ ನಮ್ಮ ಆಲೋಚನ ಕ್ರಮ ಬೆಳೆಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಲಿವೆ ಎಂದು ಹೇಳಿದರು.

ಅಹಂಕಾರ ಶೂನ್ಯರಾದ ರಾಮಕೃಷ್ಣರ ಚಿಂತನೆಗಳು ದೇವರು ನಮಗೆ ಹತ್ತಿರವಾಗಲು ದಾರಿ ತೋರಲಿವೆ. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಹಾಗೂ ಶಾರದಾದೇವಿಯವರ ಜೀವನ ಎಂದರೆ ಅನೇಕ ಘಟನೆಗಳ ಅತ್ಯಂತ ಸುಂದರವಾದ ಉದ್ಯಾನವನ ಇದ್ದಂತೆ. ಈ ದಿವ್ಯತ್ರಯರ ಚಿಂತನೆಗಳಿಂದ ನಾವು ನಮ್ಮ ಮನಸ್ಸನ್ನು ಪರಿಶುದ್ಧ ಮಾಡಿಕೊಳ್ಳಬಹುದು ಎಂದರು.

'ಕುವೆಂಪು ಅವರ ಮೇಲೆ ರಾಮಕೃಷ್ಣ ಪರಮಹಂಸರ ಪ್ರಭಾವ' ಕುರಿತು ಉಪನ್ಯಾಸ ನೀಡಿದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ಕೆ.ರಾಜೇಂದ್ರ, ದಿವ್ಯತ್ರಯರ ಸಂದೇಶಗಳು ಇಡೀ ನಾಡಿಗೆ ಹರಡಬೇಕು. ಕುವೆಂಪು ಅವರ ಮೇಲೆ ರಾಮಕೃಷ್ಣರ ಪ್ರಭಾವ ಅಗಾಧವಾಗಿದೆ. ಅಲ್ಲದೆ, ಹಲವರ ಮೇಲೆ ರಾಮಕೃಷ್ಣರ ಪ್ರಭಾವ ಉಂಟಾಗಿದೆ. ಪ್ರತಿಷ್ಠಾನವು ಒಂದು ರೀತಿಯಲ್ಲಿ ಆದರ್ಶಪ್ರಾಯವಾಗಿದೆ. ಉಳಿದ ಬಡಾವಣೆಗಳಿಗೆ ಮಾದರಿಯಾಗುವ ರೀತಿಯಲ್ಲಿ ಪ್ರತಿಷ್ಠಾನ ಮುನ್ನಡೆಯುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಪ್ರತಿ ತಿಂಗಳು ಹುಣ್ಣಿಮೆಯ ದಿನದಂದು ಪರಮಹಂಸರ ಈ ಸನ್ನಿಧಿಯಲ್ಲಿ ಇಂತಹ ಕಾರ್ಯಕ್ರಮ ನಡೆಸಲಾಗುವುದು. ಇಂದು ಅದರ ಪ್ರಥಮ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿಸಿದರು. ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ, ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮೀ ಕಿರಣ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಕಾಂಗ್ರೆಸ್‌ಗೆ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಬೆಂಬಲ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಮುಖ್ಯಸ್ಥ ಹರಿಹರ ಆನಂದಸ್ವಾಮಿ ಸುದ್ದಿಗೋಷ್ಠಿ ನಡೆಸಿದರು.

ಮೈಸೂರು,ಮಾ.25(ಎಂಟಿವೈ)– ಈ ಬಾರಿ ಕೇಂದ್ರದಲ್ಲಿ ಕೋಮುವಾದಿ ಹಾಗೂ ಸಂವಿಧಾನ ವಿರೋಧಿ ಬಿಜೆಪಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವುದನ್ನು ತಡೆಯುವ ನಿಟ್ಟಿನಲ್ಲಿ ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದೆ ಎಂದು ಸಂಘಟನೆಯ ಮುಖಂಡ ಹರಿಹರ ಆನಂದಸ್ವಾಮಿ ತಿಳಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014 ರಿಂದ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳು ಸೇರಿ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿವೆ. ಅಂದಿನಿಂದಲೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹೆಡ್ಗೆವಾರ್, ಗೋಳ್ವಾಳ್ಕರ್ ಮತ್ತು ಸಾವರ್ಕರ್ ಪ್ರತಿಪಾದಿಸಿದ ಹಿಂದುತ್ವದ ಸಿದ್ಧಾಂತವನ್ನು ಸಂವಿಧಾನಕ್ಕೆ ವಿರುದ್ಧವಾಗಿ ಜಾರಿಗೊಳಿಸಲಾಗುತ್ತಿದೆ. ಇದರಿಂದ ಡಾ.ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂವಿಧಾನದ ಆಶಯಕ್ಕೆ ಧಕ್ಕೆಯಾಗುತ್ತಿದೆ. ಸಂವಿಧಾನ ಬದಲಿಸುವ ಹೇಳಿಕೆಗಳು ಆತಂಕವನ್ನುಂಟು ಮಾಡುತ್ತಿವೆ ಎಂದು ವಿಷಾದಿಸಿದರು.

ಅಹಿಂದ ವರ್ಗಕ್ಕೆ ಸಂವಿಧಾನ ನೀಡಿದ್ದ ಹಕ್ಕು ಮತ್ತು ಸೌಲಭ್ಯಗಳಿಗೂ ಬಿಜೆಪಿ ಸರ್ಕಾರ ಕುತ್ತು ತರಲು ಕಸರತ್ತು ನಡೆಸುತ್ತಿದೆ. ಅಸಮಾನತೆ ಮತ್ತೆ ಮುನ್ನೆಲೆಗೆ ಬಂದಿದ್ದು, ಬಡವ– ಶ್ರೀಮಂತರ ಅಂತರ ಹೆಚ್ಚಾಗುವಂತೆ ಸಂಚು ನಡೆಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಚುನಾವಣಾ ಬಾಂಡ್‌ಗಳ ಮೂಲಕ ಕಾರ್ಪೊರೇಟ್ ಕುಳಗಳು ಮತ್ತು ಕೈಗಾರಿಕೋದ್ಯಮಿಗಳಿಂದ ಸಾವಿರಾರು ಕೋಟಿ ಲಂಚ ಪಡೆದಿದ್ದಾರೆ. ಅಧಿಕಾರಕ್ಕೆ ಬರುವ ಮುನ್ನ ನರೇಂದ್ರ ಮೋದಿ ನೀಡಿದ್ದ ಭರವಸೆಯಂತೆ ಪ್ರತಿ ಕುಟುಂಬಕ್ಕೆ 15 ಲಕ್ಷ ನೀಡಿಲ್ಲ. ಯುವಜನರಿಗೆ ವಾರ್ಷಿಕ ಎರಡು ಕೋಟಿ ಉದ್ಯೋಗ ಸೃಷ್ಟಿಸಿಲ್ಲ. ರೈತರ ಆದಾಯ ದ್ವಿಗುಣಗೊಂಡಿಲ್ಲ. ಕೇವಲ ದೇವರು, ಧರ್ಮ ಎಂದು ಭಾವನಾತ್ಮಕ ವಿಚಾರಗಳನ್ನು ಜನರಲ್ಲಿ ತುಂಬಿ ಇಡೀ ರಾಷ್ಟ್ರವನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಹೀಗಾಗಿ ತಮ್ಮ ಸಂಘಟನೆ ಈ ಬಾರಿ ಕಾಂಗ್ರೆಸ್ಸನ್ನು ಬೆಂಬಲಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬಂಗವಾದಿ ನಾರಾಯಣಪ್ಪಹೊರಳವಾಡಿ ನಂಜುಂಡಸ್ವಾಮಿ ಸತೀಶ್, ಟಿ. ಈರಯ್ಯ ತಾತನಹಳ್ಳಿ ಇದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅರಮನೆಯ ಕೋಟೆ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಂತರ ಯದುವೀರ್ ಅವರಿಗೆ ಶ್ರೀ.ಚಾಮುಂಡೇಶ್ವರಿ ದೇವಿ ಬೆಳ್ಳಿ ವಿಗ್ರಹ ನೀಡಿ, ಬೃಹತ್ ಮೈಸೂರು ಮಲ್ಲಿಗೆ ಹಾರ ಹಾಕಿ ಶುಭ ಕೋರಿದರು. ಈ ವೇಳೆ ಲಕ್ಷ್ಮಣ್ ವಿಜಯ್ ಕುಮಾರ್ ಹಾಗೂ ವಿನೋದ್ ಇದ್ದರು.

ಮಾ.28, 'ವಾಸು ಎಂಬ ಸಭ್ಯತಾ ಚೇತನಕ್ಕೆ ಶ್ರದ್ಧಾಂಜಲಿ' ಕಾರ್ಯಕ್ರಮ



ಮೈಸೂರು, ಮಾ.25(ಎಸ್‌ಬಿಡಿ)– ವಾಸು ವಿಶ್ವಾಸಿ ಬಳಗದ ವತಿಯಿಂದ 'ವಾಸು ಎಂಬ ಸಭ್ಯತಾ ಚೇತನಕ್ಕೆ ಶ್ರದ್ಧಾಂಜಲಿ' ಕಾರ್ಯಕ್ರಮವನ್ನು ಮಾ.28(ಗುರುವಾರ) ರಂದು ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜ್ ಕ್ಯಾಂಪಸ್‌ನ ಸಾಹುಕಾರ್ ಚೆನ್ನಯ್ಯ ಸಭಾಂಗಣದಲ್ಲಿ ಅಂದು ಸಂಜೆ 4ರಿಂದ ರಾತ್ರಿ 8ರವರೆಗೆ ಕಾರ್ಯಕ್ರಮ ನಡೆಯಲಿದ್ದು, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಆದಿ ಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಯುಕ್ತೇಶಾನಂದ ಜೀ ಮಹಾರಾಜ್, ಮೈಸೂರು ಕ್ರೈಸ್ತ ಧರ್ಮ ಪ್ರಾಂತದ ವಿಶ್ರಾಂತ ಧರ್ಮಾಧ್ಯಕ್ಷರಾದ ಬಿಷಪ್ ಡಾ. ಥಾಮಸ್ ಆ್ಯಂಟನಿ ವಾಳಪಿಳ್ಳಿ ಅವರು ಆಶೀರ್ವಚನ ನೀಡಲಿದ್ದಾರೆ.

ನಾಡಿನ ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು, ಶಿಕ್ಷಣ ತಜ್ಞರು, ವಿಜ್ಞಾನಿಗಳು, ವೈದ್ಯರು ಸೇರಿದಂತೆ ಅಪಾರ ಗಣ್ಯರು ಸಭೆಯಲ್ಲಿ ಭಾಗವಹಿಸಿ, ನುಡಿನಮನ ಸಲ್ಲಿಸಲಿದ್ದಾರೆ. ವಾಸು ಅವರ ಅಭಿಮಾನಿಗಳು, ವಿಶ್ವಾಸಿಗಳು, ಆಸಕ್ತರು ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಗಲಿದ ಮಹಾಚೇತನಕ್ಕೆ ಗೌರವ ಪೂರ್ಣ ಶ್ರದ್ಧಾಂಜಲಿ ಸಲ್ಲಿಸುವಂತೆ ವಾಸು ವಿಶ್ವಾಸಿ ಬಳಗದ ಪರವಾಗಿ ಮಾಜಿ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಮನವಿ ಮಾಡಿದ್ದಾರೆ.

ಮೈಸೂರಿನ ಜಂಟಲ್‌ಮನ್ ರಾಜಕಾರಣಿ ಎಂದೇ ಪ್ರಸಿದ್ಧರಾಗಿದ್ದ ವಾಸು ಅವರ ನಿಧನದಿಂದ ಮೈಸೂರಿಗೆ ಮಾತ್ರವಲ್ಲ ಇಡೀ ರಾಜ್ಯಕ್ಕೆ ಬಹು ದೊಡ್ಡ ನಷ್ಟವಾಗಿದೆ. ನಾಲ್ಕು ದಶಕ ಮೀರಿ ಸಾರ್ವಜನಿಕ ಬದುಕಿನಲ್ಲಿ ಕ್ರಿಯಾಶೀಲರಾಗಿದ್ದ ಅವರು ರಾಜಕೀಯದ ಏಳು–ಬೀಳುಗಳಲ್ಲೂ ಸಮಚಿತ್ತರಾಗಿ ಇತರರಿಗೆ ಮಾದರಿಯಾಗಿದ್ದ ಪ್ರಬುದ್ಧ ವ್ಯಕ್ತಿಯಾಗಿದ್ದರು. ಮೂವತ್ತೈದು ವರ್ಷಗಳ ನಂತರವೂ ಬಹಳ ಜನರು ಅವರನ್ನು ಮೇಯರ್ ವಾಸು ಎಂದೇ ಗುರುತಿಸುತ್ತಿದ್ದದ್ದು ಅವರ ಜನಪ್ರಿಯತೆಗೆ ಸಾಕ್ಷಿ. ವೀರಪ್ಪಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ರಾಜಕೀಯ ಕಾರ್ಯದರ್ಶಿಯಾಗಿ, ಪ್ರಭಾವಿ ರಾಜಕಾರಣಿಯಾಗಿ ಬೆಳೆದರು. ನಂತರ ಚಾಮರಾಜ ಕ್ಷೇತ್ರದ ಶಾಸಕರಾಗಿ ಚರಿತ್ರೆಯಲ್ಲಿ ಉಳಿಯುವ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿದರು. ತಾವೇ ಕಟ್ಟಿ ಬೆಳೆಸಿದ 'ಪ್ರಜಾನುಡಿ' ಪತ್ರಿಕೆಯ ರಜತ ಮಹೋತ್ಸವಕ್ಕೆ ಯೋಜನೆ ರೂಪಿಸಿದ್ದರು. ಅಷ್ಟರಲ್ಲೇ ಅವರು ನಮ್ಮನ್ನೆಲ್ಲಾ ಅಗಲಿದರು. ಅಗಾಧ ಶಿಕ್ಷಣ ಪ್ರೇಮಿಯಾಗಿದ್ದ ವಾಸು ಅವರು ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ಸಾಮಾನ್ಯರಿಂದ ಹಿಡಿದು ಎಲ್ಲಾ ವರ್ಗದ ಹಿರಿಯರು, ಕಿರಿಯರು ಅವರ ಸ್ನೇಹ ವಲಯದಲ್ಲಿದ್ದರು. ಸಹಾಯ ಕೇಳಿಕೊಂಡು ಬಂದವರಿಗೆ ಜಾತಿ, ಪಕ್ಷ, ಜಿಲ್ಲೆ, ರಾಜ್ಯ ಏನೂ ವಿಚಾರಿಸದೆ ಸಹಾಯ ಮಾಡುತ್ತಿದ್ದ ಅವರಲ್ಲಿ ಸಾವಿರ ಸದ್ಗುಣಗಳಿದ್ದವು ಎಂದು ಕೆ.ವಿ.ಶ್ರೀಧರ್ ಪ್ರಕಟಣೆಯಲ್ಲಿ ಸ್ಮರಿಸಿಕೊಂಡಿದ್ದಾರೆ.

ವಯನಾಡಿನಲ್ಲಿ ರಾಹುಲ್ ಗಾಂಧಿ ವಿರುದ್ಧ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸಿದ ಬಿಜೆಪಿ



ತಿರುವನಂತಪುರಂ: ಕೇರಳದ ಉಳಿದ ನಾಲ್ಕು ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿರುವ ಬಿಜೆಪಿ ರಾಜ್ಯ ಮುಖ್ಯಸ್ಥ ಕೆ ಸುರೇಂದ್ರನ್ ಅವರನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ವಯನಾಡ್ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ.

ವಿದ್ವಾಂಸ ಮತ್ತು ಶ್ರೀಶಂಕರ ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಕೆಎಸ್ ರಾಧಾಕೃಷ್ಣನ್ ಮತ್ತು ನಟ–ರಾಜಕಾರಣಿ ಜಿ ಕೃಷ್ಣಕುಮಾರ್ ಅವರು ಕ್ರಮವಾಗಿ ಎರ್ನಾಕುಲಂ ಮತ್ತು ಕೊಲ್ಲಂ ಕ್ಷೇತ್ರಗಳಿಂದ ಸ್ಪರ್ಧಿಸಲಿದ್ದಾರೆ. ಸರ್ಕಾರಿ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಟಿ.ಎನ್.ಸರಸು ಅವರನ್ನು ಉತ್ತರ ಪಾಲಕ್ಕಾಡ್ ಜಿಲ್ಲೆಯ ಆಲತ್ತೂರಿನಿಂದ ಕಣಕ್ಕಿಳಿಸಲಾಗಿದೆ ಎಂದು ಪಕ್ಷ ಭಾನುವಾರ ಪ್ರಕಟಿಸಿದೆ.

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಪ್ರಾಬಲ್ಯವನ್ನು ಮುರಿಯಲು ಬಿಜೆಪಿ ಶ್ರಮಿಸುತ್ತಿದೆ. ಪಕ್ಷವು ಈ ಹಿಂದೆ 12 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಘೋಷಿಸಿತ್ತು ಅದರ ಮಿತ್ರ ಪಕ್ಷವಾದ ಬಿಡಿಜೆಎಸ್ ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ.

ಕಾಂಗ್ರೆಸ್‌ನ ಸಾಂಪ್ರದಾಯಿಕ ಭದ್ರಕೋಟೆಯಾಗಿರುವ ವಯನಾಡಿನಲ್ಲಿ ಸುರೇಂದ್ರನ್ ಅವರ ಅನಿರೀಕ್ಷಿತ ಉಮೇದುವಾರಿಕೆಯೊಂದಿಗೆ, ರಾಹುಲ್ ಗಾಂಧಿ ವಿರುದ್ಧ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಬಿಜೆಪಿ ತನ್ನ ಎದುರಾಳಿಗಳಿಗೆ ತಕ್ಕ ಪ್ರತ್ಯುತ್ತರ ನೀಡಲು ಪ್ರಯತ್ನಿಸುತ್ತಿದೆ.

ಇಂದು ದೇವಲಾಪುರದಲ್ಲಿ ದೊಡ್ಡಮ್ಮ ತಾಯಿ ಜಾತ್ರೆ

ಮೈಸೂರು, ಮಾ.25– ತಾಲೂಕಿನ ದೇವಲಾಪುರ ಗ್ರಾಮದಲ್ಲಿ ಮಂಗಳವಾರ ಗ್ರಾಮದೇವತೆ ಶ್ರೀ ದೊಡ್ಡಮ್ಮ ತಾಯಿ ಜಾತ್ರಾ ಮಹೋತ್ಸವ ಜರುಗಲಿದೆ.

ನಾಲ್ಕು ವರ್ಷಗಳ ಬಳಿಕ ನಡೆಯುತ್ತಿರುವ ಜಾತ್ರಾ ಮಹೋತ್ಸವಕ್ಕೆ ವಿದ್ಯುತ್ ದೀಪಾಲಂಕಾರ, ತಳಿರು ತೋರಣಗಳಿಂದ ಗ್ರಾಮವನ್ನು ಸಿಂಗರಿಸಲಾಗಿದೆ. ರಾತ್ರಿ 8 ಗಂಟೆಗೆ ಗ್ರಾಮದ ಸಮೀಪವಿರುವ ಚಿಕ್ಕ ಹೊಳೆಯಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಶ್ರೀ ಮಹದೇಶ್ವರ, ದೊಡ್ಡಮ್ಮ ತಾಯಿ ಹಾಗೂ ಮೂಗ ಬಸವಣ್ಣ ದೇವರನ್ನು ದೇವಸ್ಥಾನಕ್ಕೆ ಕರೆ ತರಲಾಗುವುದು. ಬಳಿಕ ದೇವಸ್ಥಾನ ಆವರಣದಲ್ಲಿ ಚಿತ್ತಾಕರ್ಷಕ ಸಿಡಿ ಮದ್ದುಗಳನ್ನು ಸಿಡಿಸಿದ ನಂತರ ಭಕ್ತರು ದೇವರ ದರ್ಶನ ಪಡೆಯಬಹುದು. ಬುಧವಾರ ಬೆಳಗಿನ ಜಾವದವರೆಗೂ ದೇವರ ಮೆರವಣಿಗೆ ನಡೆಯಲಿದ್ದು, ಈ ವೇಳೆ ಭಕ್ತರು ಹರಕೆ ತೀರಿಸಲಿದ್ದಾರೆ ಎಂದು ಜಾತ್ರಾ ಮಹೋತ್ಸವ ಸಮಿತಿಯ ಎಲ್.ಮಹೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಗೃಹಲಕ್ಷ್ಮಿ' ಬಾರದೇ ಇರಲು ಬ್ಯಾಂಕ್‌ಗಳಲ್ಲಿನ ತಾಂತ್ರಿಕ ಸಮಸ್ಯೆ ಕಾರಣ!

ಪೋಸ್ಟ್ ಆಫೀಸ್‌ಗಳಲ್ಲಿ ಝೀರೋ ಬ್ಯಾಲೆನ್ಸ್ ಖಾತೆ ತೆರೆಯಲು ಸಲಹೆ

- ಬಂದ ಹಣವೆಲ್ಲಾ ಸಾಲಕ್ಕೆ, ದಂಡಕ್ಕೆ ಪಾವತಿ
- ಪಾನ್, ಆಧಾರ್ ಕಾರ್ಡ್ ಜೋಡಣೆ ಆಗದಿರುವುದು ಮತ್ತೊಂದು ಕಾರಣ
- ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಮಸ್ಯೆ ಪರಿಹಾರಕ್ಕೆ ಸಿಗದ ಸ್ಪಂದನೆ

ಮೈಸೂರು, ಮಾ.25(ಬಿಎಲ್‌ಯು)– ಕೆಲವು ತಾಂತ್ರಿಕ ಕಾರಣದಿಂದ ಗೃಹಲಕ್ಷ್ಮಿ ಯೋಜನೆಯಡಿ ಮೈಸೂರಿನ ಸಾವಿರಾರು ಫಲಾನುಭವಿಗಳಿಗೆ ಇನ್ನು ಕೂಡ ಹಣ ಪಾವತಿಯಾಗಿಲ್ಲ. ಇದಕ್ಕೆ ಕಾರಣ ತಾಂತ್ರಿಕ ಸಮಸ್ಯೆ. ಇದನ್ನು ಪರಿಹಾರ ಮಾಡಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಉತ್ತಮ ಸ್ಪಂದನೆ ದೊರೆಯದ ಕಾರಣ ಪೋಸ್ಟ್ ಆಫೀಸ್‌ಗಳಲ್ಲಿ ಫಲಾನುಭವಿಗಳ ಖಾತೆ ತೆರೆಯಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ತೀರ್ಮಾನ ಮಾಡಿದೆ.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಸ್ಕೀಂನಲ್ಲಿ ಗೃಹಲಕ್ಷ್ಮಿ ಯೋಜನೆಯೂ ಒಂದು. ಮನೆಯೊಡತಿಗೆ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಪಾವತಿ ಮಾಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆ ಮಹಿಳೆಯರಿಗೆ ಬಹುಪಯೋಗಿ. ಸ್ವಲ್ಪ ಮಟ್ಟಿಗೆ ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ.

ಆದರೆ ಮೈಸೂರು ಜಿಲ್ಲೆಯ ಸಾವಿರಾರು ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಪಾವತಿಯಾಗಿಲ್ಲ. ಪಾನ್ ಕಾರ್ಡ್ ಇಲ್ಲದಿರುವುದು, ನಾನಾ ರೀತಿಯ ಸಾಲ ಪಡೆದಿರುವುದು, ಬ್ಯಾಂಕ್ ಬ್ಯಾಲೆನ್ಸ್ ಶೂನ್ಯವಾಗಿರುವುದು ಸೇರಿದಂತೆ ಹಲವು ಕಾರಣಗಳಿಂದ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ದೊರೆಯುತ್ತಿಲ್ಲ.

ಲಕ್ಷಾಂತರ ಮಹಿಳೆಯರು ಅನಕ್ಷರಸ್ಥರಿದ್ದಾರೆ. ಇದರಿಂದ ಪಾನ್ ಕಾರ್ಡ್ ಅಂದರೇನು, ಬ್ಯಾಂಕ್‌ನ ನಿಬಂಧನೆಗಳೇನು ಎಂಬ ತಿಳಿವಳಿಕೆ ಅವರಿಗಿಲ್ಲ ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಲಿಂಕ್ ಮಾಡಿಸದ ಕಾರಣ ಅವರ ಬ್ಯಾಂಕ್ ಖಾತೆ ಚಾಲ್ತಿಯಲ್ಲಿಲ್ಲ. ಇದರಿಂದ ಗೃಹಲಕ್ಷ್ಮಿ ಯೋಜನೆಯ ಎರಡು ಸಾವಿರ ರೂಪಾಯಿ ಹಣ ಅವರ ಬ್ಯಾಂಕ್ ಖಾತೆಗೆ ಪಾವತಿಯಾಗುತ್ತಿಲ್ಲ.

> ಕೆಲವು ಮಹಿಳೆಯರು ಸಾಲ ಪಡೆದಿರುವ ಕಾರಣ ಬಂದ ಹಣವೆಲ್ಲಾ ಸಾಲಕ್ಕೆ ಜಮಾ ಆಗುತ್ತಿದೆ. ಇನ್ನು ಕೆಲವು ಮಹಿಳೆಯರ ಬ್ಯಾಂಕ್ ಖಾತೆಯಲ್ಲಿ ಬ್ಯಾಲೆನ್ಸ್ ಇಲ್ಲದ ಕಾರಣ ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣ ದಂಡವಾಗಿ ಪರಿಣಮಿಸಿದೆ. ಈ ಎಲ್ಲಾ ಕಾರಣಗಳಿಂದ ಸಾವಿರಾರು ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ದಕ್ಕುತ್ತಿಲ್ಲ.

ಮೈಸೂರು ಜಿಲ್ಲೆಯಲ್ಲಿ 6,63,457 ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಇವರಲ್ಲಿ ಸಾವಿರಾರು ಜನರಿಗೆ ಇನ್ನು ಗೃಹಲಕ್ಷ್ಮಿ ಯೋಜನೆಯ ಎರಡು ಸಾವಿರ ರೂಪಾಯಿ ಹಣ ಬಂದಿಲ್ಲ.

ಇಂತಹ ತಾಂತ್ರಿಕ ಸಮಸ್ಯೆ ಹಿನ್ನೆಲೆಯಲ್ಲಿ ಫಲಾನುಭವಿಗಳಿಗೆ ಪೋಸ್ಟ್ ಆಫೀಸ್‌ನಲ್ಲಿ ಖಾತೆ ತೆರೆಯುವಂತೆ ಸೂಚನೆ ನೀಡಲಾಗುತ್ತಿದೆ. ಝೀರೋ ಬ್ಯಾಲೆನ್ಸ್ ಉಳಿತಾಯ ಖಾತೆಗಳನ್ನು ತೆರೆದಾಗ ಇಂತಹ ಸಮಸ್ಯೆಗಳು ಎದುರಾಗುವುದಿಲ್ಲ ಎಂದು ಮೈಸೂರಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸುರೇಶ್ ತಿಳಿಸಿದರು.

ಈ ಬಗ್ಗೆ 'ಮೈಸೂರು ಮಿತ್ರ'ಕ್ಕೆ ವಿವರ ನೀಡಿದ ಅವರು, ತಾಂತ್ರಿಕ ಸಮಸ್ಯೆ ಉಂಟಾಗಿರುವ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಪಾವತಿ ಮಾಡಲು ಪ್ರಯತ್ನ ಮಾಡಿದ್ದೇವೆ. ಆದರೆ ತಾಂತ್ರಿಕ ಸಮಸ್ಯೆ ಪರಿಹಾರ ಮಾಡಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನಮಗೆ ಸ್ಪಂದನೆ ದೊರೆಯುತ್ತಿಲ್ಲ ಎಂದು ಹೇಳಿದರು.

ಈ ಕಾರಣಗಳಿಂದ ಪೋಸ್ಟ್ ಆಫೀಸ್‌ನಲ್ಲಿ ಝೀರೋ ಬ್ಯಾಲೆನ್ಸ್ ಅಕೌಂಟ್ ತೆರೆಯಲು ತೀರ್ಮಾನ ಮಾಡಲಾಗಿದೆ. ಅಂಚೆ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು ಸಭೆ ನಡೆಸಿ ಈ ಬಗ್ಗೆ ತೀರ್ಮಾನ ಮಾಡಿದ್ದಾರೆ. ಪೋಸ್ಟ್ ಆಫೀಸ್‌ಗಳಲ್ಲಿ ಖಾತೆ ತೆರೆಯಲು ಸರ್ಕಾರ ನಮಗೆ ಸಮ್ಮತಿ ಸೂಚಿಸಿದೆ ಎಂದು ಸುರೇಶ್ ಮಾಹಿತಿ ನೀಡಿದರು.

ಪೋಸ್ಟ್ ಆಫೀಸ್ ಸಹ ಹೆಚ್ಚು ಶಾಖೆ ಹೊಂದಿವೆ. ಜೊತೆಗೆ ಅವರಿಗೆ ಅಷ್ಟಾಗಿ ಕಾರ್ಯದ ಒತ್ತಡ ಇರುವುದಿಲ್ಲ. ಈ ಕಾರಣಗಳಿಂದ ಪೋಸ್ಟ್ ಆಫೀಸ್‌ಗಳಲ್ಲಿ ಖಾತೆ ತೆರೆಯುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ತಿಳಿಸಿದರು.

ಕೆಲವು ಸಮಸ್ಯೆ ಪರಿಹಾರ ಮಾಡಲು ಸಾಧ್ಯವಿಲ್ಲ ಎಂದಾಗ ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂ ಬಳಿ ಇರುವ ಇಲಾಖೆಯ ಗ್ರಾಮಾಂತರ ಕಚೇರಿ ಹಾಗೂ ವಿಜಯನಗರ ಎರಡನೇ ಹಂತದಲ್ಲಿರುವ ನಗರ ವ್ಯಾಪ್ತಿಯ ಕಚೇರಿಯಲ್ಲಿ ಮಕ್ಕಳ ಅಭಿವೃದ್ಧಿ ಅಧಿಕಾರಿ ಭೇಟಿ ಮಾಡುವಂತೆ ಸಲಹೆ ನೀಡಿದ್ದಾರೆ.

ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ತಾಂತ್ರಿಕ ಸಮಸ್ಯೆ ಪರಿಹಾರ ಮಾಡಲು ಪ್ರತ್ಯೇಕ ಸಿಬ್ಬಂದಿ ನಿಯೋಜಿಸಿದ್ದು, ಅಲ್ಲಿ ಭೇಟಿ ಮಾಡಿದರೆ ಸಮಸ್ಯೆ ಪರಿಹಾರ ಮಾಡುತ್ತಾರೆ ಎಂದು ಸುರೇಶ್ ಹೇಳಿದರು.



ಐಪಿಎಲ್ ಸಂಪೂರ್ಣ ವೇಳಾಪಟ್ಟಿ ಪ್ರಕಟ: ಚೆನ್ನೈಗೆ ಫೈನಲ್ ಆತಿಥ್ಯ

ದೆಹಲಿ, ಮಾ.25– ಪ್ರಸ್ತುತ ಸಾಗುತ್ತಿರುವ 2024ರ ಇಂಡಿಯನ್ ಪ್ರೀಮಿಯರ್ ಲೀಗ್ ಸಂಪೂರ್ಣ ವೇಳಾಪಟ್ಟಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಸೋಮವಾರ ಪ್ರಕಟಿಸಿದ್ದು, ಟೂರ್ನಿಯ 2ನೇ ಅವಧಿಯ ಪಂದ್ಯಗಳು ಭಾರತದಲ್ಲಿಯೇ ನಡೆಯಲಿವೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಟೂರ್ನಿಯ 2ನೇ ಅವಧಿಯ ಪಂದ್ಯಗಳನ್ನು ವಿದೇಶದಲ್ಲಿ ಆಯೋಜಿಸಬಹುದೆಂದು ವರದಿಯಾಗಿತ್ತು. ಆದರೆ, ಸೋಮವಾರ ಬಿಸಿಸಿಐ ಪ್ರಕಟಿಸಿದ ವೇಳಾಪಟ್ಟಿಯಲ್ಲಿ ಸಂಪೂರ್ಣ ಟೂರ್ನಿ ಭಾರತದಲ್ಲಿ ನಡೆಯಲಿದೆ ಎಂಬುದು ಸ್ಪಷ್ಟವಾಗಿದೆ.

ಟೂರ್ನಿಯ ಮೊದಲ ಕ್ವಾಲಿಫೈಯರ್ ಹಾಗೂ ಎಲಿಮಿನೇಟರ್ ಪಂದ್ಯಗಳು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕ್ರಮವಾಗಿ ಮೇ 21 ಹಾಗೂ ಮೇ 22 ರಂದು ನಡೆಯಲಿವೆ. ಎರಡನೇ ಕ್ವಾಲಿಫೈಯರ್ ಹಾಗೂ ಫೈನಲ್ ಪಂದ್ಯ ಚೆನ್ನೈನ ಎಂಎ ಚಿದಂಬರಂ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮೇ 24 ಹಾಗೂ ಮೇ 26 ರಂದು ನಡೆಯಲಿದೆ.

ಐಪಿಎಲ್ 2ನೇ ಅವಧಿಯ ವೇಳಾಪಟ್ಟಿ

ದಿನಾಂಕ	ಪಂದ್ಯಗಳು	ಸಮಯ& ಸ್ಥಳ
ಏ.8	ಚೆನ್ನೈ ಸೂಪರ್ ಕಿಂಗ್ಸ್/ ಕೋಲ್ಕತ್ತಾ ನೈಟ್ ರೈಡರ್ಸ್	7.30 ಚೆನ್ನೈ
ಏ.9	ಪಂಜಾಬ್ ಕಿಂಗ್ಸ್/ ಸನ್‌ರೈಸರ್ಸ್ ಹೈದರಾಬಾದ್	7.30 ಮೊಹಾಲಿ
ಏ.10	ರಾಜಸ್ಥಾನ್ ರಾಯಲ್ಸ್ /ಗುಜರಾತ್ ಟೈಟಾನ್ಸ್	7.30 ಜೈಪುರ್
ಏ.11	ಮುಂಬೈ ಇಂಡಿಯನ್ಸ್/ ರಾಯಲ್ ಚಾಲೆಂಜರ್ಸ್ ಬೆಂಗಳೂರು	7.30 ಮುಂಬೈ
ಏ.12	ಲಕ್ನೋ ಸೂಪರ್ ಜೈಂಟ್ಸ್/ ಡೆಲ್ಲಿ ಕ್ಯಾಪಿಟಲ್ಸ್	7.30 ಲಕ್ನೋ
ಏ.13	ಪಂಜಾಬ್ ಕಿಂಗ್ಸ್/ ರಾಜಸ್ಥಾನ್ ರಾಯಲ್ಸ್	7.30 ಮೊಹಾಲಿ
ಏ.14	ಕೋಲ್ಕತ್ತಾ ನೈಟ್ ರೈಡರ್ಸ್ / ಲಕ್ನೋ ಸೂಪರ್ ಜೈಂಟ್ಸ್	3.30 ಕೋಲ್ಕತ್ತಾ
ಏ.14	ಮುಂಬೈ ಇಂಡಿಯನ್ಸ್ / ಚೆನ್ನೈ ಸೂಪರ್ ಕಿಂಗ್ಸ್	7.30 ಮುಂಬೈ
ಏ.15	ರಾಯಲ್ ಚಾಲೆಂಜರ್ಸ್ ಬೆಂಗಳೂರು / ಸನ್‌ರೈಸರ್ಸ್ ಹೈದರಾಬಾದ್	7.30 ಬೆಂಗಳೂರು
ಏ.16	ಗುಜರಾತ್ ಟೈಟಾನ್ಸ್ / ಡೆಲ್ಲಿ ಕ್ಯಾಪಿಟಲ್ಸ್	7.30 ಅಹಮದಾಬಾದ್
ಏ.17	ಕೋಲ್ಕತ್ತಾ ನೈಟ್ ರೈಡರ್ಸ್ / ರಾಜಸ್ಥಾನ್ ರಾಯಲ್ಸ್	7.30 ಕೋಲ್ಕತ್ತಾ
ಏ.18	ಪಂಜಾಬ್ ಕಿಂಗ್ಸ್ / ಮುಂಬೈ ಇಂಡಿಯನ್ಸ್	7.30 ಮೊಹಾಲಿ
ಏ.19	ಲಕ್ನೋ ಸೂಪರ್ ಜೈಂಟ್ಸ್/ ಚೆನ್ನೈ ಸೂಪರ್ ಕಿಂಗ್ಸ್	7.30 ಲಕ್ನೋ
ಏ.20	ಡೆಲ್ಲಿ ಕ್ಯಾಪಿಟಲ್ಸ್ / ಸನ್‌ರೈಸರ್ಸ್ ಹೈದರಾಬಾದ್	7.30 ದೆಹಲಿ
ಏ.21	ಕೋಲ್ಕತ್ತಾ ನೈಟ್ ರೈಡರ್ಸ್ / ರಾಯಲ್ ಚಾಲೆಂಜರ್ಸ್ ಬೆಂಗಳೂರು	3.30 ಕೋಲ್ಕತ್ತಾ
ಏ.21	ಪಂಜಾಬ್ ಕಿಂಗ್ಸ್ / ಗುಜರಾತ್ ಟೈಟಾನ್ಸ್	7.30 ಮೊಹಾಲಿ
ಏ.22	ರಾಜಸ್ಥಾನ್ ರಾಯಲ್ಸ್ / ಮುಂಬೈ ಇಂಡಿಯನ್ಸ್	7.30 ಜೈಪುರ
ಏ.23	ಚೆನ್ನೈ ಸೂಪರ್ ಕಿಂಗ್ಸ್ / ಲಕ್ನೋ ಸೂಪರ್ ಜೈಂಟ್ಸ್	7.30 ಚೆನ್ನೈ
ಏ.24	ಡೆಲ್ಲಿ ಕ್ಯಾಪಿಟಲ್ಸ್ / ಗುಜರಾತ್ ಟೈಟಾನ್ಸ್	7.30 ದೆಹಲಿ
ಏ.25	ಸನ್‌ರೈಸರ್ಸ್ ಹೈದರಾಬಾದ್ / ರಾಯಲ್ ಚಾಲೆಂಜರ್ಸ್ ಬೆಂಗಳೂರು	7.30 ಹೈದರಾಬಾದ್
ಏ.26	ಕೋಲ್ಕತ್ತಾ ನೈಟ್ ರೈಡರ್ಸ್ / ಪಂಜಾಬ್ ಕಿಂಗ್ಸ್	7.30 ಕೋಲ್ಕತ್ತಾ
ಏ.27	ಡೆಲ್ಲಿ ಕ್ಯಾಪಿಟಲ್ಸ್ / ಮುಂಬೈ ಇಂಡಿಯನ್ಸ್	3.30 ದೆಹಲಿ
ಏ.27	ಲಕ್ನೋ ಸೂಪರ್ ಜೈಂಟ್ಸ್/ ರಾಜಸ್ಥಾನ್ ರಾಯಲ್ಸ್	7.30 ಲಕ್ನೋ
ಏ.28	ಗುಜರಾತ್ ಟೈಟಾನ್ಸ್ / ರಾಯಲ್ ಚಾಲೆಂಜರ್ಸ್ ಬೆಂಗಳೂರು	7.30 ಲಕ್ನೋ
ಏ.28	ಚೆನ್ನೈ ಸೂಪರ್ ಕಿಂಗ್ಸ್ / ಸನ್‌ರೈಸರ್ಸ್ ಹೈದರಾಬಾದ್	7.30 ಚೆನ್ನೈ
ಏ.29	ಕೋಲ್ಕತ್ತಾ ನೈಟ್ ರೈಡರ್ಸ್ / ಡೆಲ್ಲಿ ಕ್ಯಾಪಿಟಲ್ಸ್	7.30 ಕೋಲ್ಕತ್ತಾ
ಏ.30	ಲಕ್ನೋ ಸೂಪರ್ ಜೈಂಟ್ಸ್/ ಮುಂಬೈ ಇಂಡಿಯನ್ಸ್	7.30 ಲಕ್ನೋ
ಮೇ 1	ಚೆನ್ನೈ ಸೂಪರ್ ಕಿಂಗ್ಸ್ / ಪಂಜಾಬ್ ಕಿಂಗ್ಸ್	7.30 ಚೆನ್ನೈ
ಮೇ 2	ಸನ್‌ರೈಸರ್ಸ್ ಹೈದರಾಬಾದ್ / ರಾಜಸ್ಥಾನ್ ರಾಯಲ್ಸ್	7.30 ಹೈದರಾಬಾದ್
ಮೇ 3	ಮುಂಬೈ ಇಂಡಿಯನ್ಸ್ / ಕೋಲ್ಕತ್ತಾ ನೈಟ್ ರೈಡರ್ಸ್	7.30 ಮುಂಬೈ
ಮೇ 4	ರಾಯಲ್ ಚಾಲೆಂಜರ್ಸ್ ಬೆಂಗಳೂರು / ಗುಜರಾತ್ ಟೈಟಾನ್ಸ್	7.30 ಬೆಂಗಳೂರು
ಮೇ 5	ಪಂಜಾಬ್ ಕಿಂಗ್ಸ್ / ಚೆನ್ನೈ ಸೂಪರ್ ಕಿಂಗ್ಸ್	3.30 ಧರ್ಮಶಾಲಾ
ಮೇ 5	ಲಕ್ನೋ ಸೂಪರ್ ಜೈಂಟ್ಸ್/ ಕೋಲ್ಕತ್ತಾ ನೈಟ್ ರೈಡರ್ಸ್	7.30 ಲಕ್ನೋ
ಮೇ 6	ಮುಂಬೈ ಇಂಡಿಯನ್ಸ್ / ಸನ್‌ರೈಸರ್ಸ್ ಹೈದರಾಬಾದ್	7.30 ಮುಂಬೈ
ಮೇ 7	ಡೆಲ್ಲಿ ಕ್ಯಾಪಿಟಲ್ಸ್ / ರಾಜಸ್ಥಾನ್ ರಾಯಲ್ಸ್	7.30 ದೆಹಲಿ
ಮೇ 8	ಸನ್‌ರೈಸರ್ಸ್ ಹೈದರಾಬಾದ್ / ಲಕ್ನೋ ಸೂಪರ್ ಜೈಂಟ್ಸ್	7.30 ಹೈದರಾಬಾದ್
ಮೇ 9	ಪಂಜಾಬ್ ಕಿಂಗ್ಸ್ / ರಾಯಲ್ ಚಾಲೆಂಜರ್ಸ್ ಬೆಂಗಳೂರು	7.30 ಧರ್ಮಶಾಲಾ
ಮೇ 10	ಗುಜರಾತ್ ಟೈಟಾನ್ಸ್ / ಚೆನ್ನೈ ಸೂಪರ್ ಕಿಂಗ್ಸ್	7.30 ಅಹಮದಾಬಾದ್
ಮೇ 11	ಕೋಲ್ಕತ್ತಾ ನೈಟ್ ರೈಡರ್ / ಮುಂಬೈ ಇಂಡಿಯನ್ಸ್	7.30 ಕೋಲ್ಕತ್ತಾ
ಮೇ 12	ಚೆನ್ನೈ ಸೂಪರ್ ಕಿಂಗ್ಸ್ / ರಾಜಸ್ಥಾನ್ ರಾಯಲ್ಸ್	3.30 ಚೆನ್ನೈ
ಮೇ 12	ರಾಯಲ್ ಚಾಲೆಂಜರ್ಸ್ ಬೆಂಗಳೂರು / ಡೆಲ್ಲಿ ಕ್ಯಾಪಿಟಲ್ಸ್	7.30 ಬೆಂಗಳೂರು
ಮೇ 13	ಗುಜರಾತ್ ಟೈಟಾನ್ಸ್ / ಕೋಲ್ಕತ್ತಾ ನೈಟ್ ರೈಡರ್ಸ್	7.30 ಅಹಮದಾಬಾದ್
ಮೇ 14	ಡೆಲ್ಲಿ ಕ್ಯಾಪಿಟಲ್ಸ್ / ಲಕ್ನೋ ಸೂಪರ್ ಜೈಂಟ್ಸ್	7.30 ದೆಹಲಿ
ಮೇ 15	ರಾಜಸ್ಥಾನ್ ರಾಯಲ್ಸ್ / ಪಂಜಾಬ್ ಕಿಂಗ್ಸ್	7.30 ಗುವಾಹಟಿ
ಮೇ 16	ಸನ್‌ರೈಸರ್ಸ್ ಹೈದರಾಬಾದ್ / ಗುಜರಾತ್ ಟೈಟಾನ್ಸ್	7.30 ಹೈದರಾಬಾದ್
ಮೇ 17	ಮುಂಬೈ ಇಂಡಿಯನ್ಸ್ / ಲಕ್ನೋ ಸೂಪರ್ ಜೈಂಟ್ಸ್	7.30 ಮುಂಬೈ
ಮೇ 18	ರಾಯಲ್ ಚಾಲೆಂಜರ್ಸ್ ಬೆಂಗಳೂರು/ ಚೆನ್ನೈ ಸೂಪರ್ ಕಿಂಗ್ಸ್	7.30 ಬೆಂಗಳೂರು
ಮೇ 19	ಸನ್‌ರೈಸರ್ಸ್ ಹೈದರಾಬಾದ್/ ಪಂಜಾಬ್ ಕಿಂಗ್ಸ್	3.30 ಹೈದರಾಬಾದ್
ಮೇ 19	ರಾಜಸ್ಥಾನ್ ರಾಯಲ್ಸ್ / ಕೋಲ್ಕತ್ತಾ ನೈಟ್ ರೈಡರ್ಸ್	7.30 ಗುವಾಹಟಿ
ಮೇ 21	ಕ್ವಾಲಿಫೈಯರ್–1	7.30 ಅಹಮದಾಬಾದ್
ಮೇ 22	ಎಲಿಮಿನೇಟರ್	7.30 ಅಹಮದಾಬಾದ್
ಮೇ 24	ಕ್ವಾಲಿಫೈಯರ್–2	7.30 ಚೆನ್ನೈ
ಮೇ 26	ಫೈನಲ್	7.30 ಚೆನ್ನೈ

ಭರ್ಜರಿ ಗೆಲುವಿನ ಮೂಲಕ ಆರ್‌ಸಿಬಿ ಕಮ್‌ಬ್ಯಾಕ್

ಕೊಹ್ಲಿ, ದಿನೇಶ್ ಕಾರ್ತಿಕ್ ಅಬ್ಬರಕ್ಕೆ ತತ್ತರಿಸಿದ ಪಂಜಾಬ್



ಬೆಂಗಳೂರು, ಮಾ.25– ಸೋಲಿನೊಂದಿಗೆ ಪ್ರಸ್ತ ಸಾಲಿನ ಐಪಿಎಲ್ ಪಂದ್ಯಾವಳಿ ಆರಂಭಿಸಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಇದೀಗ ಭರ್ಜರಿ ಗೆಲುವಿನ ಮೂಲಕ ಕಮ್‌ಬ್ಯಾಕ್ ಮಾಡಿದೆ. ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ನೀಡಿದ 177 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 19.2 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿ 4 ವಿಕೆಟ್‌ಗಳಿಂದ ಜಯ ಗಳಿಸಿದೆ. ಟಾರ್ಗೆಟ್ ಬೆನ್ನತ್ತಿದ ಆರ್‌ಸಿಬಿಗೆ ವಿರಾಟ್ ಕೊಹ್ಲಿ ಉತ್ತಮ ಆರಂಭ ನೀಡಿದರು. ಆದರೆ ನಾಯಕ ಫಾಫ್ ಡುಪ್ಲೆಸಿಸ್ ಬಹುಬೇಗನೆ ವಿಕೆಟ್ ಕೈಚೆಲ್ಲಿ ನಿರಾಸೆ ಮೂಡಿಸಿದರು. ಇದರ ಬೆನ್ನಲ್ಲೇ ಕ್ಯಾಮರೂನ್ ಗ್ರೀನ್ ಕೂಡ ವಿಕೆಟ್ ಒಪ್ಪಿಸಿದರು. ಡುಪ್ಲೆಸಿಸ್ ಹಾಗೂ ಗ್ರೀನ್ ತಲಾ 3 ರನ್ ಸಿಡಿಸಿ ಪೆವಿಲಿಯನ್ ಸೇರಿಕೊಂಡರು. ನಂತರ ಜೊತೆಯಾದ ಕೊಹ್ಲಿ ಹಾಗೂ ರಜತ್ ಪಾಟೀದಾರ್ 3ನೇ ವಿಕೆಟ್‌ಗೆ 43 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಪಾಟೀದಾರ್ 18ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ ಪಂಜಾಬ್ ವಿರುದ್ಧವೂ ಮುಗ್ಗರಿಸಿ ಕೇವಲ 3 ರನ್ ಸಿಡಿಸಿ ಔಟಾದರು. ಮತ್ತೊಂದೆಡೆ ಏಕಾಂಗಿ ಹೋರಾಟ ಮುಂದುವರೆಸಿದ ಕೊಹ್ಲಿ ಹಾಫ್ ಸೆಂಚುರಿ ಸಿಡಿಸಿ ತಂಡವನ್ನು ಗೆಲುವಿನ ದಡ ಸೇರಿಸಲು ಮತ್ತಷ್ಟು ಅಗ್ರೆಸ್ಸೀವ್ ಆಟಕ್ಕೆ ಮುಂದಾದರು. ಆದರೆ 49 ಎಸೆತದಲ್ಲಿ 11 ಬೌಂಡರಿ ಹಾಗೂ 2 ಸಿಕ್ಸರ್ ಒಳಗೊಂಡ ಮೂಲಕ ಕೊಹ್ಲಿ 77 ರನ್ ಸಿಡಿಸಿ ಔಟಾದರು. ಕೊಹ್ಲಿ ವಿಕೆಟ್ ಪತನ ತಂಡದ ಆತಂಕ ಹೆಚ್ಚಿಸಿತ್ತು ಇತ್ತ ಅಭಿಮಾನಿಗಳಲ್ಲೂ ಸೋಲಿನ ಭಯ ಕಾಡತೊಡಗಿತ್ತು. ಇದರ ಬೆನ್ನಲ್ಲೇ ಅನೂಜ್ ರಾವತ್ 11 ರನ್ ಸಿಡಿಸಿ ಔಟಾದರು. ಆದರೆ ಮಹಿಪಾಲ್ ಲೊಮ್ರೋರ್ ಹಾಗೂ ದಿನೇಶ್ ಕಾರ್ತಿಕ್ ಆಟ ಪಂದ್ಯದ ಗತಿ ಬದಲಿಸಿತು. ಅಂತಿಮ ಓವರ್‌ನಲ್ಲಿ 10 ರನ್ ಅವಶ್ಯಕತೆ ಇತ್ತು ಮೊದಲ ಎಸೆತದಲ್ಲೇ ಸಿಕ್ಸರ್ ಸಿಡಿಸಿದ ಕಾರ್ತಿಕ್, ಮರು ಎಸೆತದಲ್ಲಿ ಬೌಂಡರಿ ಸಿಡಿಸಿ ತಂಡಕ್ಕೆ ರೋಚಕ ಗೆಲುವು ತಂದುಕೊಟ್ಟರು. ಲೊಮ್ರೋರ್ ಹಾಗೂ ಕಾರ್ತಿಕ್ ಬೌಂಡರಿ, ಸಿಕ್ಸರ್ ಆಟ ಬೆಂಗಳೂರು ತಂಡಕ್ಕೆ ಗೆಲುವಿನ ಸಿಹಿ ನೀಡಿತು. ಕಾರ್ತಿಕ್ 10 ಎಸೆತದಲ್ಲಿ ಅಜೇಯ 28 ರನ್ ಸಿಡಿಸಿದರೆ, ಲೊಮ್ರೋರ್ ಅಜೇಯ 17 ರನ್ ಸಿಡಿಸಿದರು. ಪಂಜಾಬ್ ಪರ ಕಗಿಸೋ ರಬಾಡ, ಹರ್‌ಪ್ರೀತ್ ಬ್ರಾರ್ ತಲಾ 2, ಸ್ಯಾಮ್ ಕರನ್ ಹಾಗೂ ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜಾನಿ ಬೈರ್‌ಸ್ಟೋವ್ 8ರನ್ ಗಳಿಸಿ ನಿರ್ಗಮಿಸಿದರು. ಇನ್ನು ಅತ್ಯುತ್ತಮ ಬ್ಯಾಟಿಂಗ್ ಮಾಡಿದ ಶಿಖರ್ ಧವನ್ 37 ಎಸೆತಗಳಲ್ಲಿ 45 ರನ್ ಗಳಿಸಿ ಕೇವಲ 5 ರನ್ ಅಂತರದಲ್ಲಿ ಅರ್ಧಶತಕ ವಂಚಿತರಾದರು. ಮತ್ತೊಂದೆಡೆ ಪ್ರಭಾಸಿಮ್ರಾನ್ 25, ಲಿಯಾಮ್ ಲಿವಿಂಗ್‌ಸ್ಟೋನ್ 17, ಸ್ಯಾಮ್ ಕರನ್ 23, ಜಿತೇಶ್ ಶರ್ಮಾ 27 ಹಾಗೂ ಶಶಾಂಕ್ ಸಿಂಗ್ 21 ರನ್ ಉಪಯುಕ್ತ ಕಾಣಿಕೆ ನೀಡಿದರು.


ಆರ್‌ಸಿಬಿ ಪರ ಮೊಹಮ್ಮದ್ ಸಿರಾಜ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ತಲಾ 2, ಯಶ್ ದಯಾಳ್ ಹಾಗೂ ಅಲ್ಜಾರಿ ಜೋಸೆಫ್ ತಲಾ ಒಂದೊಂದು ವಿಕೆಟ್ ಪಡೆದರು. ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ
ಚೆನ್ನೈ V/S ಗುಜರಾತ್
ಸ್ಥಳ: ಚಿದಂಬರಂ ಕ್ರೀಡಾಂಗಣ, ಚೆನ್ನೈ
ಸಮಯ: ಸಂಜೆ 7.30

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	1	1	0	0	2
ಚೆನ್ನೈ	1	1	0	0	2
ಗುಜರಾತ್	1	1	0	0	2
ಕೊಲ್ಕತ್ತಾ	1	1	0	0	2
ಪಂಜಾಬ್	2	1	1	0	2
ಬೆಂಗಳೂರು	2	1	1	0	2
ಹೈದರಾಬಾದ್	1	0	1	0	0
ಮುಂಬೈ	1	0	1	0	0
ಡೆಲ್ಲಿ	1	0	1	0	0
ಲಕ್ನೋ	1	0	1	0	0

ಪಂದ್ಯದ ವೇಳೆ ಕೊಹ್ಲಿ ಕಾಲು ಹಿಡಿದ ಅಭಿಮಾನಿ ವಶಕ್ಕೆ



ಬೆಂಗಳೂರು: ಆರ್‌ಸಿಬಿ ಅಭಿಮಾನಿಯೊಬ್ಬ ಐಪಿಎಲ್ ಪಂದ್ಯದ ವೇಳೆ ಕ್ರೀಸ್‌ಗೆ ನುಗ್ಗಿ ಕೊಹ್ಲಿ ಕಾಲು ಹಿಡಿದ ಘಟನೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದಿದೆ.

ಇಂದು ಆರ್‌ಸಿಬಿ ಮತ್ತು ಪಂಜಾಬ್ ಕಿಂಗ್ಸ್ ನಡುವೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ರೋಚಕ ಐಪಿಎಲ್ ಪಂದ್ಯ ನಡೆಯುತ್ತಿತ್ತು. ವಿರಾಟ್ ಕೊಹ್ಲಿ ಬ್ಯಾಟಿಂಗ್ ಬರುತ್ತಿದ್ದಂತೆ ಅಭಿಮಾನಿಯೊಬ್ಬ ಹೈ ಸೆಕ್ಯೂರಿಟಿ ಮಧ್ಯೆಯೂ ಕ್ರೀಸ್ ಒಳಗಡೆ ನುಗ್ಗಿ ಕೊಹ್ಲಿ ಕಾಲು ಹಿಡಿದು ಹುಚ್ಚಾಟ ನಡೆಸಿದ್ದಾನೆ. ಕೊಹ್ಲಿ ಬರುವುದನ್ನೇ ಕಾಯುತ್ತಿದ್ದ ಅಭಿಮಾನಿ ಎಲ್ಲಾ ರೂಲ್ಸ್‌ಗಳನ್ನು ಮುರಿದು ಕ್ರೀಸ್ ಒಳಗಡೆ ನುಗ್ಗಿ ಏಕಾಏಕಿ ಕೊಹ್ಲಿ ಕಾಲಿಗೆ ಬಿದ್ದು ಬಳಿಕ ಅಪ್ಪಿಕೊಳ್ಳಲು ಪ್ರಯತ್ನಿಸಿದ್ದಾನೆ. ಘಟನೆ ನಡೆದ ಕೂಡಲೇ ಒಳನುಗ್ಗಿದ ಅಭಿಮಾನಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಧಾನಿ ಮೋದಿ ಬಗ್ಗೆ ಅವಹೇಳನಕಾರಿ ಹೇಳಿಕೆ; ಡಿಎಂಕೆ ಸಚಿವರ ವಿರುದ್ಧ ಎಫ್‌ಐಆರ್ ದಾಖಲು

ತೂತುಕುಡಿ: ಬಿಜೆಪಿ ದಕ್ಷಿಣ ಜಿಲ್ಲಾಧ್ಯಕ್ಷ ಚಿತ್ರಾಂಗತನ್ ನೀಡಿದ ದೂರಿನ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ತಮಿಳು ನಾಡು ಮೀನುಗಾರಿಕೆ, ಮೀನುಗಾರರ ಕಲ್ಯಾಣ ಮತ್ತು ಪಶುಸಂಗೋಪನೆ ಸಚಿವ ಅನಿತಾ ಆರ್ ರಾಧಾಕೃಷ್ಣನ್ ವಿರುದ್ಧ ತೂತುಕುಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಪತಿ ಅವರಿಗೆ ಸಲ್ಲಿಸಿರುವ ದೂರಿನ ಪ್ರಕಾರ, ಮಾರ್ಚ್ 22ರಂದು ತಾಂಡಪಥುವಿನಲ್ಲಿ ನಡೆದ ಡಿಎಂಕೆ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮೀನುಗಾರಿಕಾ ಸಚಿವರು ಪ್ರಧಾನಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ರಾಧಾಕೃಷ್ಣನ್ ಅವರ ಹೇಳಿಕೆ ಅಸಹ್ಯಕರ, ಹೇಯ ಮತ್ತು ಅಸಂಸದೀಯವಾಗಿದೆ. ತಮ್ಮ ಸೇಲಂ ರೋಡ್‌ಶೋನಲ್ಲಿ ದಿವಂಗತ ಮುಖ್ಯಮಂತ್ರಿ ಕಾಮರಾಜರನ್ನು ಹೊಗಳಿದ್ದಕ್ಕಾಗಿ ಅವರು ಮೋದಿಯನ್ನು ಕೆಟ್ಟದಾಗಿ ಟೀಕಿಸಿದ್ದಾರೆ ಎಂದು ಚಿತ್ರಾಂಗತನ್ ತಿಳಿಸಿದ್ದಾರೆ.

ಇದು ಮಾದರಿ ನೀತಿ ಸಂಹಿತೆ (ಎಂಸಿಸಿ) ಉಲ್ಲಂಘನೆಯಾಗಿದ್ದು, ಸಚಿವರು ಮತ್ತು ಸಭೆಯ ಆಯೋಜಕರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಚಿತ್ರಾಂಗತನ್ ಅವರ ದೂರಿನ ಮೇರೆಗೆ ಮೇಘನಪುರಂ ಪೊಲೀಸರು ರಾಧಾಕೃಷ್ಣನ್ ವಿರುದ್ಧ ಐಪಿಸಿ ಸೆಕ್ಷನ್ 294 (ಬಿ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಈ ವಿಷಯವನ್ನು ಚುನಾವಣಾ ಆಯೋಗ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಕೊಂಡೊಯ್ಯುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಎಕ್ಸ್‌ನಲ್ಲಿ ಹೇಳಿರುವುದನ್ನು ಗಮನಿಸಬಹುದು.

ಎಸ್.ಆರ್.ತಿರುಮಲಯ್ಯಗೆ ಪಿಹೆಚ್.ಡಿ ಪದವಿ



ಮೈಸೂರು,ಮಾ.25(ಪಿಎಂ)– ಡಾ.ಪಿ.ಜಯಶ್ರೀ ಅವರ ಮಾರ್ಗದರ್ಶನದಲ್ಲಿ ಎಸ್.ಆರ್.ತಿರುಮಲಯ್ಯ ಅವರು ಭೂಗೋಳಶಾಸ್ತ್ರದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಪ್ರಾಬ್ಲಮ್ ಅಂಡ್ ಪ್ರೋಪೆಕ್ಟ್ಸ್ ಆಫ್ ಆರೆಂಜ್ ಕಲ್ಟಿವೇಷನ್ ಇನ್ ಕೊಡಗು ಡಿಸ್ಟ್ರಿಕ್ಟ್–ಎ ಜಿಯಾಗ್ರಾಫಿಕಲ್ ಅನಾಲಿಸಿಸ್' ಎಂಬ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ವಿಜಯನಗರದ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸೇವೆ ಆರಂಭ



ಮೈಸೂರು ವಿಜಯನಗರದಲ್ಲಿನ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಆರಂಭಿಸಿರುವ ಪ್ರಯೋಗಾಲಯ ಸೇವೆಗೆ ಡಾ.ಭಾಷ್ಯಂ ಸ್ವಾಮೀಜಿ, ವಿಧ್ಯುಕ್ತವಾಗಿ ಚಾಲನೆ ನೀಡಿದರು.

ಮೈಸೂರು, ಮಾ.25(ಎಸ್‌ಬಿಡಿ)– ಮೈಸೂರು ವಿಜಯನಗರದಲ್ಲಿನ ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸೇವೆಗಳನ್ನು ಆರಂಭಿಸಲಾಗಿದೆ. ದೀಪ ಬೆಳಗುವ ಮೂಲಕ ಪ್ರಯೋಗಾಲಯ ಸೇವೆಗೆ ವಿಧ್ಯುಕ್ತವಾಗಿ ಚಾಲನೆ ನೀಡಿ ಮಾತನಾಡಿದ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಶ್ರೀ ಡಾ.ಭಾಷ್ಯಂ ಸ್ವಾಮೀಜಿ, ನಾರಾಯಣ ಆಸ್ಪತ್ರೆ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ದೇವರ ಆಶೀರ್ವಾದದಿಂದ ಆಸ್ಪತ್ರೆಯು ಮೈಸೂರಿನ ಇತರೆ ಭಾಗಗಳಿಗೂ ಆರೋಗ್ಯ ಸೇವೆಯನ್ನು ವಿಸ್ತರಿಸಲಿ ಎಂದು ಆಶೀರ್ವದಿಸಿದರು.

ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಪವನ್‌ಕುಮಾರ್ ಮಾತನಾಡಿ, ಸಮುದಾಯ ಆರೋಗ್ಯ ಸೇವೆಯನ್ನು ವಿಸ್ತರಿಸುವ ನಮ್ಮ ನಿರಂತರ ಪ್ರಯತ್ನಗಳಲ್ಲಿ ಪ್ರಯೋಗಾಲಯ ಸೇವೆ ಮಹತ್ವದ್ದಾಗಿದೆ. ಈ ಸೇವೆಯ ಮೂಲಕ ನಿಖರವಾದ ರೋಗ ನಿರ್ಣಯ ಮತ್ತು ಉತ್ತಮ ಆರೈಕೆಯನ್ನು ಕಲ್ಪಿಸಲು ನಾವು ಬದ್ಧರಾಗಿದ್ದೇವೆ. ಉಚಿತ ಮಾದರಿ ಸಂಗ್ರಹಣೆ ಸೌಲಭ್ಯ ಕಲ್ಪಿಸಿರುವುದು ಜನರ ಆರೋಗ್ಯ ಕಾಳಜಿ ಮೇಲಿನ ಬದ್ಧತೆ ಹಾಗೂ ಸಮರ್ಪಣಾ ಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಡಿಹೆಚ್‌ಓ ಡಾ.ಅರವಿಂದಪ್ಪ, ಆಸ್ಪತ್ರೆಯ ವೈದ್ಯರು, ಮತ್ತಿತರರು ಉಪಸ್ಥಿತರಿದ್ದರು.

ಮನೆ ಬಾಗಿಲಲ್ಲಿ ಮಾದರಿ ಸಂಗ್ರಹ: ನಾರಾಯಣ ಮೆಡಿಕಲ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸೇವೆಗಳನ್ನು ಆರಂಭಿಸಿರುವುದರಿಂದ ವಿಜಯನಗರ ಹಾಗೂ ಸುತ್ತಮುತ್ತಲ ಬಡಾವಣೆ ನಿವಾಸಿಗಳಿಗೆ ಸಮಗ್ರ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ನೆರವಾಗುತ್ತದೆ. ರೋಗಿಗಳ ಅನುಕೂಲತೆಗಾಗಿ ಸೆಂಟರ್‌ನ 5 ಕಿ.ಮೀ. ವ್ಯಾಪ್ತಿಯೊಳಗೆ ಮನೆ ಬಾಗಿಲಿಗೆ(ಡೋರ್–ಸ್ಟೆಪ್) ಬಂದು ಮಾದರಿ ಸಂಗ್ರಹಿಸುವ ಉಚಿತ ಸೇವೆಯನ್ನು ಕಲ್ಪಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭ

ಮೈಸೂರು ಜಿಲ್ಲೆಯಲ್ಲಿ ಮೊದಲ ದಿನ 446 ವಿದ್ಯಾರ್ಥಿಗಳು ಗೈರು



ಮೈಸೂರು, ಮಾ. 25(ಆರ್‌ಕೆ)– ಮೈಸೂರು ಜಿಲ್ಲೆ ಸೇರಿದಂತೆ ರಾಜ್ಯದಾದ್ಯಂತ 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಇಂದಿನಿಂದ ಆರಂಭವಾಗಿವೆ.

ಮೊದಲ ದಿನವಾದ ಇಂದು ಬೆಳಗ್ಗೆ 10.15ರಿಂದ ಮಧ್ಯಾಹ್ನ 1.45 ಗಂಟೆವರೆಗೆ ನಡೆದ ಪ್ರಥಮ ಭಾಷೆ ಪರೀಕ್ಷೆಗೆ ಮೈಸೂರು ಜಿಲ್ಲೆಯಲ್ಲಿ 37,913 ಮಂದಿ ವಿದ್ಯಾರ್ಥಿಗಳು ನೋಂದಣಿಯಾಗಿದ್ದರಾದರೂ, ಆ ಪೈಕಿ 446 ಮಂದಿ ಗೈರುಹಾಜರಾಗಿ ಒಟ್ಟು 37,459 ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಮೈಸೂರು ನಗರದ 42 ಸೇರಿ ಜಿಲ್ಲೆಯಾದ್ಯಂತ ಒಟ್ಟು 132 ಕೇಂದ್ರಗಳಲ್ಲಿ ನಡೆದ ಪರೀಕ್ಷೆಗೆ ಹೆಚ್.ಡಿ. ಕೋಟೆ ತಾಲೂಕಿನಲ್ಲಿ 61, ಹುಣಸೂರಲ್ಲಿ 64, ಕೆ.ಆರ್.ನಗರದಲ್ಲಿ 32, ಮೈಸೂರು ಉತ್ತರ ವಲಯದಲ್ಲಿ 93, ದಕ್ಷಿಣ ವಲಯದಲ್ಲಿ 88, ಗ್ರಾಮಾಂತರದಲ್ಲಿ 20, ನಂಜನಗೂಡಲ್ಲಿ 50, ಪಿರಿಯಾಪಟ್ಟಣದಲ್ಲಿ 15 ಹಾಗೂ ತಿ.ನರಸೀಪುರ ತಾಲೂಕಿನಲ್ಲಿ 23 ಸೇರಿ ಇಂದು ಕನ್ನಡ ಭಾಷಾ ಪರೀಕ್ಷೆಗೆ ಒಟ್ಟು 446 ಮಂದಿ ಗೈರಾಗಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಹೆಚ್.ಕೆ. ಪಾಂಡು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೊದಲ ದಿನವಾದ ಇಂದು ಯಾವುದೇ ಗೊಂದಲವಿಲ್ಲದೇ ಸುಸೂತ್ರವಾಗಿ ಪರೀಕ್ಷೆ ನಡೆದಿದ್ದು, ಎಲ್ಲಾ 132 ಕೇಂದ್ರಗಳ ಸುತ್ತ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಸುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡುವಂತೆ ಆದೇಶಿಸಲಾಗಿದೆ.

ಜಿಲ್ಲಾ ಖಜಾನೆಯಿಂದ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳನ್ನು ಜಿಪಿಎಸ್ ಆಧಾರಿತ ವಾಹನಗಳಲ್ಲಿ ಶಸ್ತ್ರಸಜ್ಜಿತ ಪೊಲೀಸ್ ಭದ್ರತೆಯೊಂದಿಗೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ರವಾನಿಸಿ ಪರೀಕ್ಷೆ ಮುಗಿದ ಬಳಿಕ ಮತ್ತೆ ಸುರಕ್ಷಿತವಾಗಿ ಜಿಲ್ಲಾ ಖಜಾನೆಗೆ ತಂದಿರಿಸಲಾಯಿತು.

ವಿದ್ಯಾರ್ಥಿಗಳು, ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರೂ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರ ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಲಾಯಿತಲ್ಲದೆ, ಡಿಡಿಪಿಐ ಪಾಂಡು ಸಹ ಮೈಸೂರಿನ ಹಲವು ಕೇಂದ್ರಗಳಿಗೆ ಭೇಟಿ ನೀಡಿ, ಪರೀಕ್ಷೆ ಸಿದ್ಧತೆ ಪರಿಶೀಲಿಸಿದರು.

ಮೂವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಸಾವು

ಶಿವಮೊಗ್ಗ: ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಯಡೇಹಳ್ಳಿ ಗ್ರಾಮದಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯೊಬ್ಬ ತನ್ನ ಮನೆಯಲ್ಲಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಭದ್ರಾವತಿ ತಾಲೂಕಿನ ಮೂಡಲ ವಿಠಲಾಪುರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹೋಗುತ್ತಿದ್ದ ವಿದ್ಯಾರ್ಥಿನಿ ಅಪಘಾತದಲ್ಲಿ ಬಲಿಯಾದರೆ, ತುರುವೇಕೆರೆ ಪಟ್ಟಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಯೊಬ್ಬ ತೀವ್ರ ಅಸ್ವಸ್ಥಗೊಂಡು ಸಾವನ್ನಪ್ಪಿರುವ ಘಟನೆ ಸೋಮವಾರ ನಡೆದಿದೆ.



16 ವರ್ಷದ ಬಾಲಕ ಪರಶುರಾಮ ಬಾಬು ಅಂದೋಳಿ ಇಂದು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗಬೇಕಿತ್ತು. ಆದರೆ ನಿನ್ನೆ ರಾತ್ರಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.



ಅಪಘಾತದಲ್ಲಿ ಸಾವು: ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿನಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಜಿಲ್ಲೆಯ ಭದ್ರಾವತಿ ತಾಲೂಕಿನ ಮೂಡಲ ವಿಠಲಾಪುರದಲ್ಲಿ ನಡೆದಿದೆ.ಜಂಬರಘಟ್ಟ ಗ್ರಾಮದ ನಿವಾಸಿ ಉಮ್ಮೆ ಖುಲ್ಸುಂ (16) ಮೃತಪಟ್ಟ ವಿದ್ಯಾರ್ಥಿನಿ.

ಶಿವಮೊಗ್ಗಕ್ಕೆ ತೆರಳಲು ಬಸ್ ಹತ್ತಲೆಂದು ಮೂಡಲ ವಿಠಲಾಪುರದಲ್ಲಿ ರಸ್ತೆ ದಾಟುವಾಗ ಚನ್ನಗಿರಿ ಕಡೆಯಿಂದ ಶಿವಮೊಗ್ಗ ಕಡೆಗೆ ತೆರಳುತ್ತಿದ್ದ ಇನ್ನೋವಾ ಕಾರು ಡಿಕ್ಕಿ ಹೊಡೆದಿದೆ. ಇದರಿಂದಾಗಿ ಬಾಲಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ. ಈ ಬಗ್ಗೆ ಹೊಳೆಹೊನ್ನೂರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಅಸ್ವಸ್ಥತೆಯಿಂದ ಸಾವು: ತುರುವೇಕೆರೆ ಪಟ್ಟಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿದ್ದ ವಿದ್ಯಾರ್ಥಿಯೊಬ್ಬ ತೀವ್ರ ಅಸ್ವಸ್ಥಗೊಂಡು ಸಾವನ್ನಪ್ಪಿರುವ ಘಟನೆ ಸೋಮವಾರ ನಡೆದಿದೆ. ಮೃತ ವಿದ್ಯಾರ್ಥಿ ಚಿಕ್ಕನಾಯಕನಹಳ್ಳಿ ತಾಲೂಕಿನ ಚಿಕ್ಕರಾಂಪುರ ನಿವಾಸಿ ಸಿದ್ದೇಶ್ ಅವರ ಮಗ ಮೋಹನ್ ಕುಮಾರ್ ಸಿ.ಎಸ್ (16) ಎಂದು ಗುರುತಿಸಲಾಗಿದೆ. ಮೃತ ವಿದ್ಯಾರ್ಥಿ ತಾಲೂಕಿನ ಲೋಕಮ್ಮನಹಳ್ಳಿ ಗೇಟ್ನ ಶ್ರೀ ಕಂಚಿರಾಯ ಸನಿವಾಸ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದನೆಂದು ತಿಳಿದು ಬಂದಿದೆ.

ದೇಶಾದ್ಯಂತ ಹೋಳಿ ಸಂಭ್ರಮಾಚರಣೆ

ಉಜ್ಜಯಿನಿ ಮಹಾಕಾಳೇಶ್ವರ ದೇವಾಲಯದ ಗರ್ಭಗೃಹದಲ್ಲಿ ಬೆಂಕಿ, 14 ಅರ್ಚಕರಿಗೆ ಗಾಯ



ಉಜ್ಜಯಿನಿ: ದೇಶಾದ್ಯಂತ ಸಡಗರ–ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಲಾಗುತ್ತಿದೆ. ಬಣ್ಣಗಳ ಹಬ್ಬ ಎಂದೂ ಕರೆಯಲ್ಪಡುವ ಹೋಳಿಯು ವಸಂತಕಾಲದ ಆಗಮನ ಮತ್ತು ಚಳಿಗಾಲದ ಅಂತ್ಯವನ್ನು ಸೂಚಿಸುತ್ತದೆ. ಬೆಳಗ್ಗೆಯಿಂದಲೇ ದೇವಾಲಯಗಳಿಗೆ ಆಗಮಿಸುತ್ತಿರುವ ಜನರು, ದೇವರ ದರ್ಶನ ಪಡೆದು, ಪರಸ್ಪರ ಬಣ್ಣ ಎರಚುವ ಮೂಲಕ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ.

ಈ ನಡುವೆ ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಅವಘಡವೊಂದು ಸಂಭವಿಸಿದೆ. ಮಹಾಕಾಳೇಶ್ವರ ದೇವಾಲಯದ ಗರ್ಭಗೃಹದಲ್ಲಿ ಕಾಣಿಸಿಕೊಂಡಿದ್ದು, ಹಲವರು ಗಾಯಗೊಂಡಿದ್ದಾರೆ. ಭಸ್ಮಾರತಿ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 14 ಅರ್ಚಕರು ಗಾಯಗೊಂಡಿದ್ದಾರೆ. ಅವರೆಲ್ಲರನ್ನೂ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಗುಲಾಲ್‌ನಿಂದಾಗಿ 'ಗರ್ಭಗೃಹದಲ್ಲಿ ಬೆಂಕಿ ಸಂಭವಿಸಿದ್ದು, ಗಾಯಾಳುಗಳನ್ನು ಉಜ್ಜಯಿನಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ದೇವಾಲಯದ ಅರ್ಚಕ ಅಶಿಶ್ ಶರ್ಮಾ ತಿಳಿಸಿದರು.

ದೇವಾಲಯದ ಗರ್ಭಗೃಹದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, 14 ಅರ್ಚಕರಿಗೆ ಸುಟ್ಟ ಗಾಯಗಳಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಲಾಗಿದೆ ಎಂದು ಉಜ್ಜಯಿನಿ ಕಲೆಕ್ಟರ್ ನೀರಜ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಹೋಳಿ ಹಬ್ಬದ ಸಂದರ್ಭದಲ್ಲಿ ಗುಲಾಲ್ ಎಸೆಯುವ ಸಂದರ್ಭದಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ

ಮೈಸೂರು ಮಿತ್ರ

ಮಂಗಳವಾರ 26 ಮಾರ್ಚ್ 2024

ಸಮರ್ಪಕ ವಿದ್ಯುತ್ ನೀಡಿ, ಇಲ್ಲವೇ ನೀರು ಕೊಡಿ ಎಂದು ಆಗ್ರಹಿಸಿ ರೈತರಿಂದ

ಸೆಸ್ಕ್ ಕಚೇರಿಗೆ ಮುತ್ತಿಗೆ: ಖಾಲಿ ಬಿಂದಿಗೆ ಪ್ರದರ್ಶನ



ಸಮರ್ಪಕ ವಿದ್ಯುತ್ ನೀಡಿ, ಇಲ್ಲವೇ ನೀರು ಕೊಡಿ ಎಂದು ಆಗ್ರಹಿಸಿ ರೈತರು ಬನ್ನೂರಿನ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಮಾ.25– ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ನೀಡಿ, ಇಲ್ಲವೇ ನೀರು ಕೊಡಿ ಎಂದು ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಆಶ್ರಯದಲ್ಲಿ ರೈತರು ಬನ್ನೂರಿನ ಚೆಸ್ಕಾಂ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕಾರ್ಯಪಾಲಕ ಅಭಿಯಂತರ ಕಚೇರಿ ಎದುರು ಜಮಾಯಿಸಿದ ರೈತರು ಖಾಲಿ ಬಿಂದಿಗೆ ಪ್ರದರ್ಶಿಸಿ ಸಮರ್ಪಕ ವಿದ್ಯುತ್ ನೀಡದ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಬ್ಬು ಬೆಳೆಗಾರರ ಸಂಘದ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ, ಜಿಲ್ಲೆ ಹಾಗೂ ತಾಲೂಕಿನಲ್ಲಿ ಭೀಕರ ಬರಗಾಲ ಕಾಡುತ್ತಿದ್ದು, ಹಳ್ಳಿ ಹಳ್ಳಿಗಳಲ್ಲಿ ಕುಡಿಯುವ ನೀರು ಹಾಗೂ ದನಕರುಗಳಿಗೆ ಮೇವು ಸಿಗುತ್ತಿಲ್ಲ. ಕೃಷಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆ ಮಾಡದ ಹಿನ್ನೆಲೆಯಲ್ಲಿ ರೈತರು ಕಷ್ಟಪಟ್ಟು ಬೆಳೆದ ಕಬ್ಬು, ಬಾಳೆ, ಅಡಕೆ, ತೆಂಗು ಹಾಗೂ ಇತ್ಯಾದಿ ತರಕಾರಿ ಬೆಳೆಗಳು ನೀರಿಲ್ಲದೆ ಒಣಗುತ್ತಿವೆ. ಆದರೂ ಜನಪ್ರತಿನಿಧಿಗಳು ಹಾಗೂ ಇಂಧನ ಇಲಾಖೆ ಅಧಿಕಾರಿಗಳು ರೈತರನ್ನು ಕಗ್ಗತ್ತಲಲ್ಲಿ ಇಟ್ಟು ಚುನಾವಣೆ ಗುಂಗಿನಲ್ಲಿ ನಿರತರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ರಾತ್ರಿ ವೇಳೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಇದರಿಂದ ಗದ್ದೆಗಳಿಗೆ ನೀರು ಹಾಯಿಸಲು ಹೋಗುವ ರೈತರು ಕಾಡುಪ್ರಾಣಿಗಳ ಹಾವಳಿಯಿಂದ ಪ್ರಾಣ ಕಳೆದುಕೊಳ್ಳುತ್ತಿದ್ದು ಅವರ ಕುಟುಂಬ ಬೀದಿ ಪಾಲಾಗುತ್ತಿದೆ. ಹೀಗಾಗಿ ಹಗಲು ವೇಳೆ ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ವಿದ್ಯುತ್ ಪೂರೈಕೆ ಮಾಡಿ ಅನ್ನದಾತನ ಜೀವ ಉಳಿಸಿ ಅವರ ಕುಟುಂಬದವರನ್ನು ರಕ್ಷಿಸಬೇಕು. ಅಲ್ಲದೇ ಪರೀಕ್ಷಾ ಸಮಯವಾಗಿರುವುದರಿಂದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾತ್ರಿ ವೇಳೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಒತ್ತಾಯಿಸಿದರು.

ಅಕ್ರಮ ಸಕ್ರಮ ಯೋಜನೆಯನ್ನು ಹಿಂದಿನಂತೆಯೇ ಜಾರಿಗೆ ತಂದು ಕೃಷಿ ಪಂಪ್‌ಸೆಟ್‌ಗಳ ರೈತರ ರಕ್ಷಣೆ ಮಾಡಬೇಕು. ರಾಜ್ಯ ಸರ್ಕಾರ ಮನೆ ವಿದ್ಯುತ್ ಬಳಕೆದಾರರಿಗೆ 200 ಯುನಿಟ್ ಉಚಿತ ಎಂದು ಘೋಷಿಸಿದೆ. ಆದರೆ ಗ್ರಾಹಕರಿಗೆ ತಿಳಿಯದ ರೀತಿ ಇಲಾಖೆ ಕೆಲವು ನಿರ್ಬಂಧ ವಿಧಿಸಿ ಅಕ್ರಮವಾಗಿ ವಿದ್ಯುತ್ ಬಿಲ್ ಪಾವತಿ ಮಾಡುವಂತೆ ಒತ್ತಾಯ ಮಾಡುತ್ತಿರುವುದನ್ನು ತಕ್ಷಣವೇ ನಿಲ್ಲಿಸಬೇಕು. ಟಿಸಿ ಬದಲಾವಣೆ ಹಾಗೂ ದುರಸ್ತಿಗೆ ರೈತರಿಂದ ಹಣ ಸುಲಿಗೆ ಮಾಡುವುದನ್ನು ನಿಲ್ಲಿಸಬೇಕು. ಟಿಸಿಗಳು ಕೆಟ್ಟು ಹೋದರೆ 72 ಗಂಟೆಯೊಳಗೆ ದುರಸ್ತಿ ಮಾಡಿಕೊಡಬೇಕೆಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಉಪಾಧ್ಯಕ್ಷ ಹೆಗ್ಗೂರು ರಂಗರಾಜು, ತಾಲೂಕು ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಬನ್ನೂರು ಸೂರಿ, ಬಿ.ಎನ್.ಶ್ರೀನಿವಾಸ್, ಬಾನಗವಾಡಿ ಬಿ.ಎಲ್.ವೆಂಕಟೇಗೌಡ, ರಾಮಕೃಷ್ಣ, ಜಗದೀಶ್, ಹನುಮನಾಳು ಚೆನ್ನಮಲ್ಲು, ವರದರಾಜ್ ಕುಂತನಹಳ್ಳಿ ಸ್ವಾಮಿ, ಬೆಟ್ಟಯ್ಯ, ಅತ್ತಹಳ್ಳಿ ಸಿ.ಲಿಂಗಣ್ಣ, ಎ.ಪಿ.ನವೀನ್, ಎ.ಎನ್.ಮಹೇಶ್, ಎ.ಪಿ.ಚೇತನ್, ಅನಿಲ್ ಕುಮಾರ್, ಬನ್ನೂರು ಮೆಡಿಕಲ್ ಮಹೇಶ್, ಹೊನ್ನಯ್ಯ, ವಿನಯ್ ಕುಮಾರ್, ಲೋಕೇಶ್, ಚಾಮನಹಳ್ಳಿ ನಿಂಗೇಗೌಡ, ಕರಿಯಪ್ಪ, ಶಂಕರ್, ಕಿಟ್ಟಣ್ಣ ಭಾಗವಹಿಸಿದ್ದರು.

ವಿಷಸೇವಿಸಿ ತಾಯಿ, ಮಗಳು ಆತ್ಮಹತ್ಯೆ

ಸರಗೂರು, ಮಾ.25– ಪತಿ ಅಗಲಿಕೆಯಿಂದ ಮನನೊಂದ ಗೃಹಿಣಿಯೊಬ್ಬರು ತನ್ನ ಪುತ್ರಿಯೊಂದಿಗೆ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಶಂಖಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಜವರನಾಯಕ ಅವರ ಪತ್ನಿ ಗೀತಾ(40), ಪುತ್ರಿ ಪೂರ್ಣಿಮಾ(15) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 4 ತಿಂಗಳ ಹಿಂದೆ ಜವರನಾಯಕ ಮೃತಪಟ್ಟಿದ್ದರು. ಇದರಿಂದ ಖಿನ್ನತೆಗೆ ಒಳಗಾಗಿದ್ದ ಗೀತಾ ಸದಾ ತನ್ನ ಪತಿಯ ಚಿಂತೆಯಲ್ಲಿಯೇ ದಿನ ಕಳೆಯುತ್ತಿದ್ದರು. ಆದರೆ ಇಂದು ಗೀತಾ, ತನ್ನ ಪುತ್ರಿ ಪೂರ್ಣಿಮಾ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದರು. ಕೂಡಲೇ ಇಬ್ಬರನ್ನು ಪಟ್ಟಣದ ಸರಗೂರಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿ, ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಇಬ್ಬರು ಮೃತಪಟ್ಟಿದ್ದಾರೆ. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈತರು ಸಂಘಟಿತರಾಗಿ ಹೋರಾಡಬೇಕು: ಕುರುಬೂರು ಶಾಂತಕುಮಾರ್



ಸಭೆಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಶಾಂತಕುಮಾರ್ ಮಾತನಾಡಿದರು.

ತಿ.ನರಸೀಪುರ, ಮಾ.25– ರೈತರು ಸಂಘಟಿತರಾಗಿ ಹೋರಾಡಬೇಕು. ಇಲ್ಲದಿದ್ದರೇ ಕೂಲಿ ಕಾರ್ಮಿಕರಾಗಿ ಉಳಿಯಬೇಕಾಗುತ್ತದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆದ ತಾಲೂಕು ಹೂ ಬೆಳೆಗಾರರ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ರೈತ ಸಂಘಟನೆಗಳು ತಮ್ಮ ಹಿತಾಸಕ್ತಿಗಾಗಿ ಹೋರಾಟ ಮಾಡಬೇಕು. ತಮ್ಮ ಹಕ್ಕನ್ನು ಹೋರಾಟದ ಮೂಲಕವೇ ಪಡೆದುಕೊಳ್ಳುವ ಶಕ್ತಿ ಬೆಳೆಸಿಕೊಳ್ಳಬೇಕು. ರೈತ ಸಂಘಟನೆಗಳು ರಾಜಕೀಯ ಪಕ್ಷಗಳ ಹಂಗಿನಲ್ಲಿ ಸಾಗಬಾರದು ಎಂದರು.

ಇಂದು ಬಂಡವಾಳಶಾಹಿಗಳ ಕುತಂತ್ರದಿಂದ ರೈತರ ಸಮಸ್ಯೆಗಳು ಹೆಚ್ಚುತ್ತಿವೆ. ಹಳ್ಳಿ ಹಳ್ಳಿಗಳಲ್ಲಿ ಸಂಘಟಿತರಾಗಿ ಅನ್ಯಾಯದ ವಿರುದ್ಧ ಹೋರಾಡಬೇಕು. ರೈತರ ಹೆಸರಿನಲ್ಲಿ ಹುಟ್ಟುವ ರೈತ ಸಂಘಗಳು ರೈತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಸಂಘಟನೆಗಳಾಗಬೇಕು. ಇತ್ತೀಚೆಗೆ ಕೆಲವು ಸಂಘಟನೆಗಳ ಮುಖಂಡರು ಮನಬಂದಂತೆ ವರ್ತಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಹೂ ವ್ಯಾಪಾರಿಗಳಾದ ಬೆನಕನಹಳ್ಳಿ ವಿಜಯಕುಮಾರ್, ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ರೈತ ಮುಖಂಡರಾದ ಕುರುಬೂರು ಸಿದ್ದೇಶ್, ಕಿರಗಸೂರು ಶಂಕರ್, ಪ್ರಸಾದ್ ನಾಯಕ್, ವೆಂಕಟರಾಮು, ನಿಂಗರಾಜು, ಚಿಕ್ಕನಂಜಯ, ಮಾದೇವಣ್ಣ, ಯೋಗೇಶ್, ಮಾಸ್ಟರ್ ಮಹದೇವಸ್ವಾಮಿ, ಬಿ.ಪಿ.ಪರಶಿವಮೂರ್ತಿ, ಕೊತ್ತೆಗಾಲ ಮಹದೇವಸ್ವಾಮಿ ಹೂವು ಬೆಳೆಗಾರರು, ರೈತರು, ಮುಖಂಡರು ಉಪಸ್ಥಿತರಿದ್ದರು.

ದೊಡ್ಡೇಕೊಪ್ಪಲು ಗ್ರಾಪಂಗೆ ಶ್ವೇತಾ ಅಧ್ಯಕ್ಷೆ



ದೊಡ್ಡೇಕೊಪ್ಪಲು ಗ್ರಾಪಂ ಅಧ್ಯಕ್ಷೆ ಶ್ವೇತಾ, ಉಪಾಧ್ಯಕ್ಷೆ ಕಾವ್ಯ ಅವರನ್ನು ಸದಸ್ಯರು ಅಭಿನಂದಿಸಿದರು.

ಕೆ.ಆರ್.ನಗರ, ಮಾ.25– ತಾಲೂಕಿನ ದೊಡ್ಡೇಕೊಪ್ಪಲು (ಡೋರ್ನಹಳ್ಳಿ) ಗ್ರಾಪಂ ಅಧ್ಯಕ್ಷೆಯಾಗಿ ಶ್ವೇತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷೆ ಸವಿತಾ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶ್ವೇತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಎಚ್.ಎಂ.ಅಶೋಕ್ ಘೋಷಿಸಿದರು. ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಕಾವ್ಯ, ಸದಸ್ಯರಾದ ಕೆ.ಪಿ. ಜಗದೀಶ್, ಮಹೇಶ್‌ಗೌಡ, ಮಹದೇವ್, ಕುಮಾರ್, ರಾಜೇಶ್ವರಿ, ಭಾಗ್ಯ, ಸವಿತಾ, ಬಿ.ಎಂ.ಗಿರೀಶ್, ಶೇಖರ್, ಲಕ್ಷ್ಮಿ, ಸುಮ, ಮಹದೇವಮ್ಮ, ನಂಜುಂಡ, ರಾಮ ನಾಯಕ, ಪಿಡಿಓ ರಮೇಶ್, ಕಾರ್ಯದರ್ಶಿ ಸೋಮಶೇಖರ್, ಬಿಲ್‌ಕಲೆಕ್ಟರ್ ಮಹೇಶ್ ಹಾಜರಿದ್ದರು.

ನೂತನ ಅಧ್ಯಕ್ಷರನ್ನು ಮುಖಂಡರಾದ ಮಾಟೇಗೌಡ, ಜವರೇಗೌಡ, ವಸಂತೇಗೌಡ, ಯು.ರಾಜೇಗೌಡ, ಹರೀಶ್, ಚಂದ್ರು, ಚಂದ್ರೇಗೌಡ, ರವಿಕುಮಾರ್ ಮತ್ತಿತರರು ಅಭಿನಂದಿಸಿದರು.

ಬಸವಣ್ಣನವರ ತತ್ವ, ಸಿದ್ಧಾಂತ ಅಳವಡಿಸಿಕೊಳ್ಳಿ

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ

ಮಲ್ಕುಂಡಿ, ಮಾ.25– ಪ್ರತಿಯೊಬ್ಬರೂ ವಿಶ್ವಗುರು ಬಸವಣ್ಣನವರ ತತ್ವ, ಸಿದ್ಧಾಂತ ಅಳವಡಿಸಿಕೊಳ್ಳಬೇಕು ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಸಮೀಪದ ಹಲ್ಲರೆ ಗ್ರಾಮದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಹಾಗೂ 3ನೇ ವರ್ಷದ ಪಟ್ಟಾಧಿಕಾರ ಮಹೋತ್ಸವ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮಠ ಮಾನ್ಯಗಳು ನೀಡುವ ಅಕ್ಷರ, ಅನ್ನ ದಾಸೋಹದಿಂದ ಸಮಾಜಕ್ಕೆ ತುಂಬಾ ಅನುಕೂಲವಾಗುತ್ತಿದ್ದು, ಇದನ್ನು ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು. ಆ ಮೂಲಕ ಧಾರ್ಮಿಕ ಭಾವನೆಗೆ ಹೆಚ್ಚು ಒತ್ತು ನೀಡಬೇಕು. ಅಲ್ಲದೇ ನಂಬಿಕೆ, ವಿಶ್ವಾಸದಿಂದ ಮುನ್ನಡೆಯಬೇಕು ಎಂದರು.



ಹಲ್ಲರೆಯಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇದ್ದರು.

ವಿಶ್ವಗುರು ಬಸವಣ್ಣನವರು ತಮ್ಮ ವಚನಗಳ ಮೂಲಕ ಅಪಾರ ಕೊಡುಗೆ ನೀಡಿದ್ದಾರೆ. ಇಂದಿನ ಯುವಪೀಳಿಗೆ ಬಸವಣ್ಣನವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಶಾಂತಿಯುವ ಜೀವನ ನಡೆಸಲು ಸಾಧ್ಯ. ಬಸವಣ್ಣನವರು ಯಾವುದೇ ಒಂದು ಜಾತಿಗೆ ಸೀಮಿತರಾದವರಲ್ಲ ಎಂದ ಅವರು, ಎಲ್ಲಾ ಜನಾಂಗದವರನ್ನು ಅನುಭವ ಮಂಟಪದ ಮೂಲಕ ಒಗ್ಗೂಡಿಸಿದ ಮಹಾನ್ ವ್ಯಕ್ತಿ ಎಂದರು.

ಇದೇ ವೇಳೆ ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ. ಮಹೇಶ್, ದೇವನೂರು ಮಠದ ಮಹಾಂತ ಸ್ವಾಮೀಜಿ, ವೀರಸಿಂಹಾಸನ ಮಠದ ಸಿದ್ದಮಲ್ಲಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತ ಮಠ ಚನ್ನಮಲ್ಲದೇಶಿಕೇಂದ್ರಸ್ವಾಮೀಜಿ, ಮರಿಯಾಲ ವಿರಕ್ತಮಠ ಮುರುಘ ರಾಜೇಂದ್ರಸ್ವಾಮೀಜಿ, ಸೂರಹಳ್ಳಿ ವಿರಕ್ತಮಠದ ನಾಗಭೂಷಣ ಸ್ವಾಮೀಜಿ, ಹಲ್ಲರೆ ಗುರುಮಲ್ಲೇಶ್ವರ ಮಠಾಧ್ಯಕ್ಷ ಬಸವಣ್ಣಸ್ವಾಮೀಜಿ, ಶಿವಕುಮಾರ ಸ್ವಾಮೀಜಿ, ಮಾದಪ್ಪಸ್ವಾಮೀಜಿ, ಗುರುಪಾದಸ್ವಾಮೀಜಿ, ರಾಜೇಂದ್ರಸ್ವಾಮೀಜಿ, ನಾಗೇಂದ್ರಸ್ವಾಮಿ, ತಾಲೂಕು ವೀರಶೈವ ಸಂಘದ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಶಿವಮೂರ್ತಿ, ಶಿವಪ್ಪ ಇದ್ದರು.

ಸಿ–ವಿಜಲ್ ಆ್ಯಪ್ ಬಳಕೆಯಿಂದ ಪಾರದರ್ಶಕ ಚುನಾವಣೆ

ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ



ಹುಣಸೂರು, ಮಾ.25– ಸಿ–ವಿಜಲ್ ಆ್ಯಪ್ ಬಳಕೆಯಿಂದ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸಬಹುದಾಗಿದೆ. ಹೀಗಾಗಿ ಪ್ರತಿಯೊಬ್ಬ ಚುನಾವಣಾ ಮುಖ್ಯಸ್ಥರು ಇದನ್ನು ಕಡ್ಡಾಯವಾಗಿ ಬಳಸಬೇಕು ಎಂದು ಜಿಪಂ ಸಿಇಓ ಹಾಗೂ ಜಿಲ್ಲಾ ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದರು.

ಲೋಕಸಭೆ ಚುನಾವಣಾ ಅಂಗವಾಗಿ ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಚುನಾವಣಾ ಪೂರ್ವ ತರಬೇತಿ ಕಾರ್ಯಕ್ರಮದಲ್ಲಿ ಎಫ್‌ಎಸ್‌ಟಿ, ಎಸ್‌ಎಸ್‌ಟಿ, ವಿಎಸ್‌ಟಿ, ಮತ್ತು ವಿವಿಟಿ ತಂಡದ ಮುಖ್ಯಸ್ಥರಿಗೆ ಆಯೋಜಿಸಿದ್ದ ಮಾದರಿ ನೀತಿ ಸಂಹಿತೆ ನಿಯಮಗಳ ಪಾಲನೆ ಮತ್ತು ಅನುಷ್ಠಾನ ಕುರಿತ ತರಬೇತಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಅಂಗವಾಗಿ ಮೈಸೂರು ಜಿಲ್ಲೆ ಎಲ್ಲೆಡೆ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ನೇಮಕ ಮಾಡಲಾಗಿದೆ. ಹಾಗಾಗಿ ಎಲ್ಲರೂ ಒಂದು ತಂಡದಂತೆ ಕಾರ್ಯ ನಿರ್ವಹಿಸುವ ಮೂಲಕ ಹಾಗೂ ಸಿ–ವಿಜಲ್ ಆ್ಯಪ್ ಬಳಕೆ ಮೂಲಕ ಅಕ್ರಮಗಳು ಜರುಗದಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದರು.

ಹೆಚ್ಚಿನ ವಾಹನ ಸಂಚಾರವಿರುವ ಚೆಕ್ ಪೋಸ್ಟ್‌ಗಳಲ್ಲಿ ಹೆಚ್ಚುವರಿ ಸಿಬ್ಬಂದಿ ನೇಮಕಕ್ಕೆ ಪ್ರಸ್ತಾವನೆ ಸಲ್ಲಿಸುವುದರೊಂದಿಗೆ, ಸ್ಥಳದಲ್ಲಿ ಕುಂದು ಕೊರತೆ ಕಂಡು ಬಂದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪರಿಹಾರ ಕಂಡುಕೊಳ್ಳುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಎಸಿ ಮಹಮ್ಮದ್ ಹ್ಯಾರೀಸ್ ಸುಮೇರ್, ತಾಪಂ ಇಓ ಶಿವಕುಮಾರ್, ನೋಡಲ್ ಅಧಿಕಾರಿಗಳಾದ ನಂದೀಶ್‌ಕುಮಾರ್, ವಿಜಯಕುಮಾರ್, ಜಯೇಶ್, ಸಂತೋಷ್, ರವಿಕುಮಾರ್, ಯೋಗೇಶ್, ತರಬೇತುದಾರರಾದ ಗಣೇಶ್ ಸೇರಿದಂತೆ ವಿವಿಧ ಇಲಾಖೆ ಸೆಕ್ಟರ್ ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಇಂದು ಕೊಂಡೋತ್ಸವ

ನಂಜನಗೂಡು, ಮಾ.25– ತಾಲೂಕಿನ ನಂದಿಗುಂದ ಗ್ರಾಮದ ಶ್ರೀಕಾಳಿಕಾಂಭ ಜಾತ್ರಾ ಮಹೋತ್ಸವ ಅಂಗವಾಗಿ ಮಾ.26 ರಂದು ಸಂಜೆ 5.30ಕ್ಕೆ ಕೊಂಡೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ನೇಮಕ



ತಿ.ನರಸೀಪುರ, ಮಾ.25– ಮೈಸೂರು ಜಿಲ್ಲಾ ಗ್ರಾಮಾಂತರ ಬಿಜೆಪಿ ರೈತ ಮೋರ್ಚಾ ಕಾರ್ಯದರ್ಶಿಯಾಗಿ ಕಿರಗಸೂರು ಮಹಾದೇವಸ್ವಾಮಿ ಅವರನ್ನು ಜಿಲ್ಲಾಧ್ಯಕ್ಷ ಮಹದೇವಸ್ವಾಮಿ ಅವರ ಆದೇಶದ ಮೇರೆಗೆ ವರುಣ ಕ್ಷೇತ್ರದ ಅಧ್ಯಕ್ಷ ಸತೀಶ್ ನೇಮಕ ಮಾಡಿದ್ದಾರೆ.

ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡಲು ಪಣತೊಡಿ

ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಚಾ.ನಗರ ಕ್ಷೇತ್ರದ ಅಭ್ಯರ್ಥಿ ಎಸ್.ಬಾಲರಾಜ್



ಹೆಚ್.ಡಿ.ಕೋಟೆಯಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯನ್ನು ಮುಖಂಡರು ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಮಾ.25– ನರೇಂದ್ರ ಮೋದಿ ಅವರನ್ನು 3ನೇ ಬಾರಿ ಪ್ರಧಾನಿ ಮಾಡಲು ನಾವೆಲ್ಲರೂ ಪಣ ತೊಡಬೇಕು ಎಂದು ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ತಿಳಿಸಿದರು.

ಪಟ್ಟಣದ ಕನಕ ಭವನದಲ್ಲಿ ಸೋಮವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ದೇಶದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಮೋದಿ ಅವರು ಮತ್ತೊಮ್ಮೆ ದೇಶದ ಪ್ರಧಾನಿಯಾಗಬೇಕು. ಏಕೆಂದರೆ ಅವರು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯ ಸಿಗುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಎಂದ ಅವರು, ದೇಶದೆಲ್ಲೆಡೆ ಬಿಜೆಪಿ ಪರ ಅಲೆ ಇದ್ದು, ಮತ್ತೊಮ್ಮೆ ಮೋದಿ ಅವರು ದೇಶದ ಪ್ರಧಾನಿಯಾಗಬೇಕೆಂಬ ಕೂಗು ಕೇಳಿ ಬರುತ್ತಿದೆ. ಇದಕ್ಕಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ಶ್ರಮಿಸಬೇಕು ಎಂದು ಮನವಿ ಮಾಡಿದರು.

ನಾನು ರಾಜಕೀಯಕ್ಕೆ ಯಾವ ಉದ್ದೇಶಕ್ಕಾಗಿ ಬಂದೆ ಎಂದು ತಿಳಿದಿರಲಿಲ್ಲ. ಆದರೆ ಇದೀಗ ಜನಸೇವೆ ಹಾಗೂ ಮೋದಿ ಅವರನ್ನು ಪ್ರಧಾನಿ ಮಾಡಲು ರಾಜಕೀಯದಲ್ಲಿ ಉಳಿದಿದ್ದೇನೆ ಎಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಮಾತನಾಡಿ, ಬಿಜೆಪಿ ದೇಶದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಭಾರತ ಜಗತ್ತಿನಲ್ಲೇ ಅತೀ ವೇಗವಾಗಿ ಬೆಳೆಯುತ್ತಿರುವ ದೇಶ ಎಂದ ಅವರು ಕಳೆದ 10 ವರ್ಷದ ಹಿಂದೆ 2ಜಿ ಮತ್ತು 3ಜಿ ಹಗರಣ ಸೇರಿದಂತೆ ಹತ್ತು ಹಲವು ಹಗರಣ ನಡೆದು ಲಕ್ಷಾಂತರ ರೂ. ಲೂಟಿ ಮಾಡಿ ದೇಶವನ್ನು ದಿವಾಳಿಯತ್ತ ಕೊಂಡೊಯ್ಯಲಾಯಿತು. ಆದರೆ ಕಳೆದ 10 ವರ್ಷಗಳಲ್ಲಿ ಬಿಜೆಪಿ ಆಡಳಿತದಲ್ಲಿ ಭಾರತವನ್ನು ನೋಡಿದಾಗ ಅಭಿವೃದ್ಧಿಯತ್ತ ಸಾಗುತ್ತಿರುವುದರನ್ನು ಕಾಣಬಹುದು ಎಂದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಚುನಾವಣಾ ಉಸ್ತುವಾರಿ ಫಣೀಶ್, ಮಲ್ಲಿಕಾರ್ಜುನಪ್ಪ, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಶಂಭೇಗೌಡ, ಸರಗೂರು ಅಧ್ಯಕ್ಷ ಗುರುಸ್ವಾಮಿ, ಚಾಮರಾಜನಗರ ಅಧ್ಯಕ್ಷ ನಿರಂಜನ್ ಕುಮಾರ್, ಜಿಲ್ಲಾ ಸಂಚಾಲಕ ರಮೇಶ್ ಕುಮಾರ್, ಜೆ.ಸಿ.ಯೋಗೇಶ್‌ಕುಮಾರ್, ಲಕ್ಷ್ಮಣ್, ವೆಂಕಟಸ್ವಾಮಿ, ಮಂಜುನಾಥ್, ಬಸವರಾಜಪ್ಪ, ವೆಂಕಟೇಶ್, ಸುನಂದ ರಾಜು, ವಿನಯಕುಮಾರ್, ಯೋಗೇಶ್, ಪ್ರದೀಪ್, ಸೈಯ್ಯದ್ ಅಕ್ರಂ ಪಾಷ, ಶಿವರಾಜಪ್ಪ, ಸಿಕೆ.ಗಿರೀಶ್, ಯೋಗೇಶ್, ಪ್ರಶಾಂತ್, ಗುರುಸ್ವಾಮಿ, ಪ್ರಕಾಶ್, ಲೋಕೇಶ್, ಗುರುಸ್ವಾಮಿ, ರಾಧಿಕಾ, ಸಿದ್ದನಾಯಕ, ನಂದೀಶ್, ಚಂದ್ರಮೌಳಿ, ಗುರುಸ್ವಾಮಿ, ನಾಗೇಶ್, ಹರೀಶ್‌ಗೌಡ, ರಾಜು, ವಿನೋದ್ ಹಾಗೂ 282 ಬೂತ್‌ಗಳಿಂದ ಕಾರ್ಯಕರ್ತರು ಆಗಮಿಸಿದ್ದರು.

ಬಿಜೆಪಿ ಮುಖಂಡ ಕೆ.ಎಂ.ಕೃಷ್ಣನಾಯಕ ಗೈರು

ಕಳೆದ ವಿಧಾನಸಭಾ ಚುನಾವಣೆ ವೇಳೆ ಜೆಡಿಎಸ್‌ನಿಂದ ಬಿಜೆಪಿಗೆ ಸೇರ್ಪಡೆಗೊಂಡು ತಾಲೂಕಿನಲ್ಲಿ 50 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿದ್ದ ಕೆ.ಎಂ.ಕೃಷ್ಣನಾಯಕ ಚುನಾವಣೆಯಲ್ಲಿ ಪರಾಭವಗೊಂಡರೂ ಧೃತಿಗೆಡದೆ ಎಲ್ಲಾ ಸಮುದಾಯದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಈ ಹಿನ್ನೆಲೆಯಲ್ಲಿ ಅವರನ್ನು ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತ್ತು. ಅಲ್ಲದೇ ಕೃಷ್ಣನಾಯಕ ಹೆಚ್.ಡಿ.ಕೋಟೆ ಒಂದೇ ಮಂಡಲ ಇದ್ದದ್ದನ್ನು ಪಕ್ಷದ ವರಿಷ್ಠರ ಗಮನಕ್ಕೆ ತಂದು ಸರಗೂರು ಮಂಡಲ ಮಾಡಿ ಹಲವರಿಗೆ ಪಕ್ಷ ಸಂಘಟನೆಯಲ್ಲಿ ತೊಡಗಲು ಜವಾಬ್ದಾರಿ ಕೊಡಿಸಿದ್ದರು. ಅಂತಹ ಒಬ್ಬ ಪ್ರಾಮಾಣಿಕ ನಾಯಕನನ್ನು ಸೋಮವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಗೆ ಬರದಂತೆ ಕೆಲವರು ಪಿತೂರಿ ಮಾಡಿರುವುದು. ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಬಿಜೆಪಿ ಪಕ್ಷದ ಸಂಘಟನೆ ಕುಂಠಿತವಾಗಲು ಕಾರಣವಾಗುತ್ತದೆ. ಆದ್ದರಿಂದ ಬಿಜೆಪಿ ವರಿಷ್ಠರು ಇದನ್ನು ಸರಿಪಡಿಸಬೇಕು ಎಂದು ಕಾರ್ಯಕರ್ತರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದು ಕಾರ್ಯಕ್ರಮದಲ್ಲಿ ಕಂಡು ಬಂತು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ		(ದೂ: 2521923)
ಊರು ಪೇರು ಭೈರವಕೋನಾ (ತೆ)		4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ		(ದೂ: 2422871)
ಕರಟಕ ಧಮನಕ (ಕ)		4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ		(ದೂ: 2497199)
ಸೈತಾನ್ (ಹಿಂ)		4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ		(ಮೊ:9900820093)
ಭೀಮ (ತೆ)		4 ಪ್ರದರ್ಶನಗಳು
ಗಾಯಿತ್ರಿ		
ಜಾಕಿ (ಕ)		4 ಪ್ರದರ್ಶನಗಳು
ರಾಜಕಮಲ್		
ಪ್ರೇಮುಲು (ತೆ)		4 ಪ್ರದರ್ಶನಗಳು
ಸಂಗಂ		
ಬ್ಲಿಂಕ್ (ಕ)		4 ಪ್ರದರ್ಶನಗಳು
ಲಿಡೋ		
ದಿಲ್ ಕುಷ್ (ಕ)		4 ಪ್ರದರ್ಶನಗಳು
ತಿಬ್ಬಾದೇವಿ		
ಊರು ಪೇರು ಭೈರವಕೋನಾ (ತೆ)		4 ಪ್ರದರ್ಶನಗಳು
ಪ್ರಭಾ		
ಶಾಖಾಹಾರಿ (ಕ)		4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫು ಪಾಂಡ 4(3ಡಿ) (ಇಂ): ಬೆ.11ಕ್ಕೆ, ಸಂ.4ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ಕರಟಕ ದಮನಕ (ಕ): ಮ.1ಕ್ಕೆ, ಓಂ ಭೀಮ್ ಬುಶ್ (ತೆ): ರಾ.10ಕ್ಕೆ.
ಸ್ಕ್ರೀನ್ 2	ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.30ಕ್ಕೆ, ರಾ.7.20ಕ್ಕೆ, ದಿಲ್‌ಖುಷ್ (ಕ): ಮ.1.25ಕ್ಕೆ, ಆರ್ಟಿಕಲ್ 370 (ಹಿಂ): ಸಂ.4.10ಕ್ಕೆ, ಅಂಚಕಲ್ಲಕೊಕ್ಕನ್ (ಮ): ರಾ.10ಕ್ಕೆ
ಸ್ಕ್ರೀನ್ 3	ತೂತು ಕಾಸು (ಕ): ಬೆ.10.45ಕ್ಕೆ, ಲೈನ್‌ಮನ್ (ಕ): ಮ.1.30ಕ್ಕೆ, ಯೋಧ (ಹಿಂ): ಸಂ.4.15ಕ್ಕೆ, ಜಾಕಿ (ಕ): ರಾ.7.05ಕ್ಕೆ, ರಜಾಕರ್ ಸೈಲೆಂಟ್ ಜಿನೋಸೈಡ್ ಆಪ್ ಹೈದ್ರಾಬಾದ್ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಜಾಕಿ (ಕ): ಬೆ.10.30ಕ್ಕೆ, ರೆಬಲ್ (ತ): ಮ.1.20ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಸಂ.4.10ಕ್ಕೆ, ರಾ.7.30ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಮಡಗಾಂವ್ ಎಕ್ಸ್‌ಪ್ರೆಸ್ (ಹಿಂ): ಮ.12.15ಕ್ಕೆ, ಸಂ.6.15ಕ್ಕೆ, ರಾ.9.20ಕ್ಕೆ, ಸೈತಾನ್ (ಹಿಂ): ಮ.3.20ಕ್ಕೆ
ಸ್ಕ್ರೀನ್ 2	ಜಾಕಿ (ಕ): ಮ.12.55ಕ್ಕೆ, ರಾ.7.15ಕ್ಕೆ, ಕರಟಕ ದಮನಕ (ಕ): ಸಂ.4ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಂಜುಮ್ಮೆಲ್ ಬಾಯ್ಸ್ (ಮ): ಬೆ.10ಕ್ಕೆ, ರಾ.7ಕ್ಕೆ, ಓಂ ಭೀಮ್ ಬುಶ್ (ತೆ): ಮ.1ಕ್ಕೆ, ಯೋಧ (ಹಿಂ): ಸಂ.4.05ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ರಾ.10ಕ್ಕೆ
ಸ್ಕ್ರೀನ್ 4	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.10ಕ್ಕೆ, ಮ.3.55ಕ್ಕೆ, ಕುಂಗ್ ಫು ಪಾಂಡ 4(3ಡಿ) (ಇಂ): ಮ.1.40ಕ್ಕೆ, ರಾ.7.35ಕ್ಕೆ, ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶುಂಠಿ ಕಳವು: ನಾಲ್ವರು ಆರೋಪಿಗಳ ಬಂಧನ



ಎಸ್.ಸಿ. ರವಿ



ತಮ್ಮಣ್ಣ



ಕೆ.ಎಸ್. ಸಚೀನ್



ರಮೇಶ್

ಸರಗೂರು, ಮಾ.25– ಶುಂಠಿ ಕಳವು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ಸರಗೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಸರಗೂರಿನ ಎಸ್.ಸಿ.ರವಿ(32), ಸಚಿನ್(30), ಹೆಚ್.ಡಿ.ಕೋಟೆ ತಾಲೂಕಿನ ಹತ್ವಾಳು ಗ್ರಾಮದ ತಮ್ಮಣ್ಣ (38), ಕುರ್ಣೆಗಾಲ ಗ್ರಾಮದ ರಮೇಶ್ (34) ಬಂಧಿತ ಆರೋಪಿಗಳು. ಇವರಿಂದ 27 ಚೀಲ ಶುಂಠಿ, 49 ಸಾವಿರ ರೂ. ಹಾಗೂ ಮಹೀಂದ್ರ ಬೊಲೆರೊ ವಾಹನ ವಶಪಡಿಸಿಕೊಳ್ಳಲಾಗಿದೆ.

ತಾಲೂಕಿನಲ್ಲಿ ಶುಂಠಿ ಕಳುವಾಗುತ್ತಿರುವ ಬಗ್ಗೆ ಸರಗೂರು ಪೊಲೀಸ್ ಠಾಣೆಯಲ್ಲಿ 2 ಪ್ರಕರಣಗಳು ದಾಖಲಾಗಿತ್ತು. ಈ ಸಂಬಂಧ ಡಿವೈಎಸ್‌ಪಿ ಗೋಪಾಲಕೃಷ್ಣ, ವೃತ್ತ ನಿರೀಕ್ಷಕ ಎಂ.ಲಕ್ಷ್ಮಿಕಾಂತ, ಎಸ್‌ಐ ಎಂ.ಸಿ.ಮಧು ಅವರ ಮಾರ್ಗದರ್ಶನದಲ್ಲಿ ತಂಡ ರಚಿಸಲಾಗಿತ್ತು. ಬಳಿಕ ತನಿಖೆ ಕೈಗೊಂಡ ಪೊಲೀಸರು ಕಾರ್ಯಾಚರಣೆ ನಡೆಸಿ ನಾಲ್ವರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ರಂಗನಾಥಯ್ಯ, ನಾಗನಾಯಕ, ನಾಗರಾಜು, ಜಗದೀಶ್, ಕೃಷ್ಣಯ್ಯ, ಇಮ್ರಾನ್ ಅಹಮದ್, ರಾಜು, ಮಂಜು, ನಂದೀಶ್, ದೇವರಾಜು, ಆನಂದ್ ಭಾಗವಹಿಸಿದ್ದರು.

2 ಕ್ರೇಟ್ ಮದ್ಯ ವಶ

ನಂಜನಗೂಡು, ಮಾ.25– ತಾಲೂಕಿನ ಈರೇಗೌಡನಹುಂಡಿ ಚೆಕ್‌ಪೋಸ್ಟ್ ಬಳಿ ಸೋಮವಾರ 2 ಕ್ರೇಟ್ ಮದ್ಯ ವಶಪಡಿಸಿಕೊಂಡು, ಅಕ್ರಮವಾಗಿ ಮದ್ಯ ಸಾಗಣೆ ಮಾಡುತ್ತಿದ್ದ 6 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಅಬಕಾರಿ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ತಿಳಿಸಿದ್ದಾರೆ. ಅಲ್ಲದೇ ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ್ದ 2 ದ್ವಿಚಕ್ರ ವಾಹನಗಳನ್ನು ಕೂಡ ವಶಪಡಿಸಿಕೊಳ್ಳಲಾಗಿದೆ ಎಂದರು.

ವಿಜೃಂಭಣೆಯಿಂದ ಜರುಗಿದ ಒಂಟಿಕೊಪ್ಪಲು ಗ್ರಾಮದೇವತೆ ಮಾರಮ್ಮನವರ ಹಬ್ಬ




ಮೈಸೂರಿನ ಒಂಟಿಕೊಪ್ಪಲಿನಲ್ಲಿ ಸೋಮವಾರ ಸಂಜೆ ಗ್ರಾಮದೇವತೆಯ ಹಬ್ಬದ ಪ್ರಯುಕ್ತ ಬಾಯಿ ಬೀಗ ಉತ್ಸವ ನಡೆಯಿತು. ಮತ್ತೊಂದು ಚಿತ್ರದಲ್ಲಿ ಮಹದೇಶ್ವರಸ್ವಾಮಿ ಕಳಸ ಹೊತ್ತು ಉತ್ಸವದಲ್ಲಿ ಸಾಗುತ್ತಿರುವುದನ್ನು ಕಾಣಬಹುದು.

ಬಾಯಿ ಬೀಗ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದ ಭಕ್ತರು

ಮೈಸೂರು,ಮಾ.25(ಪಿಎಂ)– ಒಂಟಿಕೊಪ್ಪಲು ಗ್ರಾಮದೇವತೆಯ ಹಬ್ಬ (ಮಾರಮ್ಮನವರ ಹಬ್ಬ) ಸೋಮವಾರ ವಿಜೃಂಭಣೆಯಿಂದ ನೆರವೇರಿತು. ಸಂಜೆ ಬಾಯಿ ಬೀಗ ಮತ್ತು ಮಹದೇಶ್ವರಸ್ವಾಮಿಯ ಕಳಸದ ಮೆರವಣಿಗೆ ಜರುಗಿತು.

ಹರಿಕೆ ಹೊತ್ತ ಮಹಿಳೆಯರು ಹಾಗೂ ಪುರುಷರು ಬಾಯಿ ಬೀಗ ಹಾಕಿಕೊಂಡು ಮೆರವಣಿಗೆಯಲ್ಲಿ ಸಾಗಿದರು. ಗ್ರಾಮಸ್ಥರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ನಡೆಯಿತು. ಮಹದೇಶ್ವರಸ್ವಾಮಿ ಕಳಸ ಹೊತ್ತ ಗ್ರಾಮದ ನಿಖಿಲ್ ರವಿಕುಮಾರ್ ಮುಂದೆ ಸಾಗಿದರೆ, ಅವರ ಹಿಂದೆ ಬಾಯಿ ಬೀಗ ಹಾಕಿಕೊಂಡ ಭಕ್ತ ಸಮೂಹ ಸಾಗಿತಲ್ಲದೆ, ಭಕ್ತಿಯ ಪರಾಕಾಷ್ಠೆ ಮೆರೆಯಿತು. ಒಂಟಿಕೊಪ್ಪಲು ಗ್ರಾಮದ ಕಾಳಿದಾಸ ರಸ್ತೆಯಲ್ಲಿರುವ ಮಾರಮ್ಮನವರ ದೇವಸ್ಥಾನದ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆಯು, ವಾಲ್ಮೀಕಿ ರಸ್ತೆ, ವಿವಿ ಮೊಹಲ್ಲಾದ ಮೂರನೇ ಮುಖ್ಯ ರಸ್ತೆ, ಟೆಂಪಲ್ ರಸ್ತೆ, ಮಾತೃಮಂಡಳಿ ವೃತ್ತ ಮಾರ್ಗವಾಗಿ ಮತ್ತೆ ಕಾಳಿದಾಸ ರಸ್ತೆ ಮೂಲಕ ಮಾರಮ್ಮನ ದೇವಸ್ಥಾನದ ಎದುರು ಮುಕ್ತಾಯ ಕಂಡಿತು.

ಮಾರಮ್ಮನವರ ದೇವಸ್ಥಾನ ಸೇರಿದಂತೆ ಗ್ರಾಮದ ಪ್ರಮುಖ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಮಾರಮ್ಮನವರ ದೇವಸ್ಥಾನದಲ್ಲಿ ಹಬ್ಬದ ಪೂಜಾ ವಿಧಿವಿಧಾನಗಳು ನಡೆದವಲ್ಲದೆ, ಮೆರವಣಿಗೆ ಬಳಿಕ ಗ್ರಾಮಸ್ಥರು ಮಡೆ ಅನ್ನ ತಯಾರು ಮಾಡಿ ಮಾರಮ್ಮ ತಾಯಿಗೆ ಸಮರ್ಪಿಸಿ ಸೇವಿಸಿದರು. ಜೊತೆಗೆ ಮಾರಮ್ಮನ ಸನ್ನಿಧಿಯ ಮುಂಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಅಂತಿಮವಾಗಿ ದೇವಸ್ಥಾನದಲ್ಲಿ ಮಹಾ ಮಂಗಳಾರತಿ ನೆರವೇರಿಸಲಾಯಿತು. ನಾಳೆ ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಹಬ್ಬದ ಅಡುಗೆ ಮಾಡಿ ನಂಟರಿಷ್ಟರಿಗೆ ಉಣಬಡಿಸುವ ಮೂಲಕ ಹಬ್ಬಕ್ಕೆ ತೆರೆ ಎಳೆಯಲಿದ್ದಾರೆ. ಹಬ್ಬದ ಪ್ರಯುಕ್ತ ಭಾನುವಾರ ತಂಬಿಟ್ಟು ಉತ್ಸವ ನಡೆಯಿತು. ಬಳಿಕ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯ ನಡೆದವು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಗ್ರಾಮದ ಶ್ರೀರಾಮ ಕಲ್ಯಾಣ ಮಂದಿರ ಟ್ರಸ್ಟ್ ಕಾರ್ಯದರ್ಶಿ ರವಿಕುಮಾರ್, ಪ್ರತಿವರ್ಷ ಮಾರ್ಚ್‌ನಲ್ಲಿ ಗ್ರಾಮದೇವತೆಯ ಹಬ್ಬ ನಡೆಯುತ್ತದೆ. ಗ್ರಾಮದಿಂದ ಬೇರೆ ಬೇರೆ ಊರುಗಳಿಗೆ ವಲಸೆ ಹೋಗಿರುವವರು ಈ ಹಬ್ಬಕ್ಕೆ ತಪ್ಪದೇ ಬರುತ್ತಾರೆ. ಒಂಟಿಕೊಪ್ಪಲು ಗ್ರಾಮದಲ್ಲಿ ಸುಮಾರು 3 ಸಾವಿರ ಜನಸಂಖ್ಯೆ ಇದ್ದು, ಒಕ್ಕಲಿಗ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದೆ. ಗ್ರಾಮದ ಎಲ್ಲಾ ಸಮುದಾಯದವರು ಸಾಮರಸ್ಯದಿಂದ ಈ ಹಬ್ಬ ಆಚರಿಸುತ್ತಾರೆ. ಗ್ರಾಮದ ಮಾರಮ್ಮನವರ ದೇವಸ್ಥಾನ ಈ ಹಬ್ಬದ ಕೇಂದ್ರ ಬಿಂದು ಎಂದು ತಿಳಿಸಿದರು.



ಒಂಟಿಕೊಪ್ಪಲು ಮಾರಮ್ಮನವರ ದೇವಸ್ಥಾನಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ಸಂಜೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಮಾರಮ್ಮ ದೇವಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಯದುವೀರ್ ಭೇಟಿ

ಮೈಸೂರು, ಮಾ.25(ಪಿಎಂ)– ಒಂಟಿಕೊಪ್ಪಲು ಗ್ರಾಮ ದೇವತೆ ಹಬ್ಬದ ಪ್ರಯುಕ್ತ ಇಲ್ಲಿನ ಮಾರಮ್ಮನವರ ದೇವಸ್ಥಾನಕ್ಕೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ಸಂಜೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ದೇವಸ್ಥಾನಕ್ಕೆ ಯದುವೀರ್ ಆಗಮಿಸುತ್ತಿದ್ದಂತೆ ಬಿಜೆಪಿ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಅವರನ್ನು ಸ್ವಾಗತಿಸಿದರಲ್ಲದೆ, ಸನ್ಮಾನಿಸಿದರು. ಇದೇ ವೇಳೆ ದೇವಸ್ಥಾನದ ಪ್ರಸಾದವನ್ನು ಭಕ್ತಾದಿಗಳಿಗೆ ಯದುವೀರ್ ಅವರು ವಿತರಣೆ ಮಾಡುವ ಮೂಲಕ ಗಮನ ಸೆಳೆದರು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ಒಂಟಿಕೊಪ್ಪಲು ಗ್ರಾಮಸ್ಥರೂ ಆದ ಬಿಜೆಪಿ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ಮತ್ತಿತರರು ಹಾಜರಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವು ದೇನೆಂದರೆ, ಈ ಕೆಳಕಂಡ ಅನುಸೂಚಿಯಲ್ಲಿ ಕಾಣಿಸಿರುವ ಸ್ವತ್ತನ್ನು ನಮ್ಮ ಕಕ್ಷಿಗಾರರು. ಅದರ ಮಾಲೀಕರಾಗಿರುವ, ಅಂದರೆ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಟೌನ್, ಗಂಜಾಂ, ಪಾಂಚಾಳರ ಬೀದಿ, ಹಾಲೀ ಮಂಡ್ಯ ಸಿಟಿ. ಗಾಂಧಿನಗರ, 3ನೇ ಕ್ರಾಸ್, ಮನೆ ನಂ. 2664 ರಲ್ಲಿ ವಾಸವಾಗಿರುವ ಲೇಟ್ ಎನ್. ಮಹೇಶ ರವರ ಎರಡನೇ ಮಗ ಭರತ್. ಎಂ ಮತ್ತು ಅವರ ಕುಟುಂಬದವರಿಂದ ಖರೀದಿಸಲು ಇಚ್ಛಿಪಟ್ಟಿದ್ದು ಮೇಲ್ಕಂಡ ಮಾರಾಟಗಾರರು ಹಾಜರುಪಡಿಸಿರುವ ದಾಖಲೆಗಳಂತೆ, ಅನುಸೂಚಿ ಸ್ವತ್ತು ಮೇಲ್ಕಂಡವರ ಹಕ್ಕು ಮತ್ತು ಮಾಲೀಕತ್ವಕ್ಕೆ ಸೇರಿದ್ದೆಂದು ಕಂಡುಬಂದಿದ್ದು, ಅನುಸೂಚಿ ಸ್ವತ್ತಿನ ಮೇಲೆ ಮೇಲ್ಕಂಡವರನ್ನು ಹೊರತುಪಡಿಸಿ ಬೇರೆ ಇನ್ಯಾರಿಗಾದರೂ ಯಾವುದೇ ರೀತಿಯ ಹಕ್ಕು ವಗೈರೆಗಳಿದ್ದಲ್ಲಿ ಮತ್ತು ಈ ಕ್ರಯದ ವ್ಯವಹಾರಕ್ಕೆ ಯಾವುದೇ ರೀತಿಯ ತಕರಾರು ಇದ್ದಲ್ಲಿ, ಸಂಬಂಧಪಟ್ಟ ಅಸಲು ದಾಖಲಾತಿಗಳೊಂದಿಗೆ. ಈ ಪ್ರಕಟಣೆಯ 15 ದಿನಗಳೊಳಗಾಗಿ ಈ ಕೆಳಕಾಣಿಸಿದ ವಕೀಲರನ್ನು ಭೇಟಿ ಮಾಡಿ, ತಕರಾರನ್ನು ಪುಷ್ಠೀಕರಿಸಲು ತಿಳಿಸಿದೆ. 15 ದಿನಗಳೊಳಗಾಗಿ ಯಾವುದೇ ತಕರಾರು ಬಾರದಿದ್ದಲ್ಲಿ, ನಮ್ಮ ಕಕ್ಷಿಗಾರರು ಅನುಸೂಚಿ ಸ್ವತ್ತಿನ ಬಾಬ್ತು ಕ್ರಯದ ವ್ಯವಹಾರವನ್ನು ಮುಂದುವರೆಸಿ ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳುತ್ತಾರೆ. ತದನಂತರ ಬರುವ ಯಾವುದೇ ತಕರಾರುಗಳಿಗೂ ನಮ್ಮ ಕಕ್ಷಿಗಾರರು ಜವಾಬ್ದಾರರಲ್ಲವೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಅನುಸೂಚಿ ಸ್ವತ್ತಿನ ವಿವರ

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಅರಕೆರೆ ಗ್ರಾಮದಲ್ಲಿರುವ ಸರ್ವೆ ನಂ. 60/3 ರಲ್ಲಿರುವ ಖುಷ್ಕಿ ಜಮೀನಿನ ಒಟ್ಟು ವಿಸ್ತೀರ್ಣ 0.39 ಗುಂಟೆ ಆಕಾರ ರೂ.1.15 ಪೈಸೆವುಳ್ಳ ಜಮೀನಿಗೆ ಚಕ್ಕುಬಂದಿಯಾಗಿ, ಪೂರ್ವಕ್ಕೆ: ಎ.ಎಂ. ಮಾದೇಗೌಡ ಮತ್ತು ಸಿದ್ದೇಗೌಡ ರವರ ಜಮೀನು, ಹಾಲೀ ಇ. ರವಿ ವಗೈರೆ ರವರ ಜಮೀನು, ಪಶ್ಚಿಮಕ್ಕೆ: ಸಿದ್ದೇಗೌಡರ ಜಮೀನು ಹಾಲೀ ಎ.ಬಿ. ರಮೇಶ ರವರ ಜಮೀನು, ಉತ್ತರಕ್ಕೆ: 30 ಅಡಿ ರಸ್ತೆ ಮತ್ತು ದಕ್ಷಿಣಕ್ಕೆ: ಬಿ.ಸ್ವಾಮಿರವರ ಜಮೀನು.

ಸಹಿ/– ಎಂ.ಜೆ. ಜೈನ್, ಬಿ.ಕಾಂ, ಎಲ್.ಎಲ್.ಬಿ., ವಕೀಲರು, ಮೊದಲನೆ ಅಡ್ಡ ರಸ್ತೆ, ಸುಭಾಷ್ ನಗರ, ಮಂಡ್ಯ. ಮೊ: 9448449113.

ದಿನಾಂಕ: 25–3–2024

ಮೈಸೂರು ಮಿತ್ರ – ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು